PAPERS LAID ON THE TABLE

Sri B. RACHIAH.—Sir, on behalf of the Minister for Finances Planning and Youth Welfare, I beg to lay the Finance Account, 1968-69, Appropriation Accounts 1968-69 Audit Report (Civil) 1970 and Audit Report (Commercial) 1970 of the Government of Mysore, as required by Article 151(2) of the Constitution of India.

BUSINESS OF THE HOUSE

MR. SPEAKER.—Next item is Financial Business. Three and half hours are available for discussion. of these demands out of this half the time is available to the ruling party including ministers reply and the remaining half of the time is given to opposition side. Within the limited time I request the whips of the parties to select their members to speak within the time allotted and I request them to stick to the time schedule.

SRI H. SIDDAVERAPPA. Sir, with today"s agenda papers the report of the Leader of the Opposition who led the delegation to Delhi has been sent to us. I would like to know whether that report will be formally presented to the House becuase it is the delegation sent by the House or whether there will be any observation made by the Leader of the Delegation on the floor of the House. If you are not taking it up now, I want to know you are taking it up.

MR. SPEAKER.—The report is circulated. Tomorrow *i.e.*, next working day, the Leader of Opposition will make his observations. After that one or two members may obtain clarifications

SRI H. SIDDAVEERAPPA.—Very well, Sir. I want to make a few observations. I will speak about it on that day.

MR. SPEKAER.—Yes, it is very good. The Hon. Minister will move the Demand.

BUDGETS ESTIMATES FOR 1970-71—DEMAND FOR GRANTS
[DEMANDS NO. 7, 8, 33 and 42]

SRI. H V.KOUJALGI.—Sir, on the recommendation of the Governor, I beg to move.

"That a sum not exceeding Rs. 5,16,26,000 be granted to the Government to defray the charges which will come in course of payment during the financial year for the period ending 31st day of March 1971, in respect of "Land Revenue,'"

MR. SPEAKER– Motion moved.

"That a sum not exceeding Rs. 5,16,26,000 be granted to the Government to defray the charges which will come in course of payment during the financial year for the period ending 31st day of March 1971, in respect of 'Land Revenue'.

Along with this demand other demands viz,, Nos. 7, 8,. 31 and 42 are also before the House. Sri S. Gopala Gowda will initiate the debate.

† ಶ್ರೀ ಎಸ್.ಗೋಪಾಲಗೌಡ: (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೇ, ೨. ೭, ೮, ಹಾಗೂ ೩೩ ಮತ್ತು ೪೨ ನೇ ನಂಬರ್ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ.

ನಮ್ಮ ಪಕ್ಷದ ಸದಸ್ಯರಾದ ಶ್ರೀಮಾನ್ ಎಂ. ನಾಗಪ್ಪನವರು ಅನೇಕ ಜೋತಾ ನಿರ್ಣಯಗಳನ್ನು ಕೊಟ್ಟಿದ್ದಾರೆ. ಅವರು ಈವೊತ್ತು ಡೆಲ್ಲಿಗೆ ಹೋಗಿರುವುದರಿಂದ ಅವರ ಪರವಾಗಿಯೂ ಕೂಡ ನಾನು ಮಾತನಾಡಲು ಇಚ್ಛೆಪಡುತ್ತೇನೆ.

ಮೊದಲನೆಯದಾಗಿ ರಾಜಸ್ವ ಖಾತೆ ರೆವಿನ್ಯೂ ಇಲಾಖೆ ಏನು ಇದೆ ಅದರ ಬಗ್ಗೆ ನಾನು ಕೆಲವು ಮಾತುಗಳನ್ನಾಡುತ್ತೇನೆ. ರಾಜ್ಯದಲ್ಲಿ ೨೩೫ ಲಕ್ಷ ಜನರು ಇದ್ದಾರೆ. ಒಂದೆರಡು ಕೋಟಿ ಭೂಮಿ ಸಾಗುವಳಿ ಆಗತಕ್ಕಂಥಾದ್ದು ಇದೆ. ಆ ಪ್ರಕಾರ ಭೂಮಿಯನ್ನು ಅವಲಂಬಿಸಿ ಜೀವನ ಮಾಡತಕ್ಕಂಥ ಜನರಿಗೆ ಎಲ್ಲ ಭೂಮಿಯನ್ನೂ ಹಂಚುವುದಾದರೆ ತಲಾ ಒಂದಕ್ಕೆ ಒಂದು ಎಕರೆ ಬರುತ್ತದೆ. ಹಾಗಾದರೆ ೫ ಜನರ ಕುಟುಂಬಕ್ಕೆ ೫ ಎಕರೆ ಬರುತ್ತದೆ. ಆದುದರಿಂದ ಸಾಮಾನ್ಯವಾಗಿ ಒಂದು ರೈತ ಕುಟುಂಬಕ್ಕೆ ೫ ಎಕರೆ ಇರಬೇಕು, ೭ ಎಕರೆ ಇರಬೇಕು ಹೆಚ್ಚು ಎಂದರೆ ೨೧ ಎಕರೆ ಇರಬೇಕು. ಬೇಕಾದರೆ ೩೦ ಎಕರೆ ಬೇಕಾದರೂ ಇರಬಹುದು. ಕನಿಷ್ಠ ಮಿತಿ ಎಷ್ಟು ಹಾಕಿದ್ದೀರೋ ಅದರ ಮೂರು ಪಟ್ಟು ಜಮೀನು ಕೆಲವರ ಹತ್ತಿರ ಇರಬಹುದು. ಒಂದು ಬೇಸಾಯದ ಕುಟುಂಬಕ್ಕೆ ನಿಯಮಕ್ಕಿಂತ ಹೆಚ್ಚು ಭೂಮಿಯನ್ನು ಬಿಡುವಂತಹ ಭೂಸುಧಾರಣಾ ನೀತಿಯನ್ನು ನಾನು ವಿರೋಧ ಮಾಡುತ್ತೇನೆ. ಹಿಂದೆ ಸರ್ಕಾರದವರು ಈಗಿರುವ ರೀತಿಯಲ್ಲಿ ಕಂದಾಯವನ್ನು ರದ್ದು ಮಾಡುತ್ತೇವೆಂದು ಹೇಳಿದ್ದರು. ಕಾರಣಾಂತರದಿಂದ ಅದನ್ನು ಕಾರ್ಯಗತ ಮಾಡಲಿಲ್ಲ. ಅನಾರ್ಥಿಕವಾದಂಥ ಭೂಹಿಡುವಳಿಯ ಮೇಲೆ ಭೂಕಂದಾಯವನ್ನು ರದ್ದು ಮಾಡಬೇಕು ಎಂಬುದೇ ನಮ್ಮ ಬೇಡಿಕೆಯಾಗಿದೆ. ಭೂಕಂದಾಯವನ್ನು ರದ್ದು ಮಾಡುತ್ತೀರೋ ಇಲ್ಲವೋ? ಮಾಡುವುದಾದರೆ ಯಾವಾಗ ಮಾಡುತ್ತೀರಿ?, ಮಾಡದಿದ್ದರೆ ಕಾರಣ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತು ಈಗ ಎಷ್ಟು ಭೂಕಂದಾಯ ಬರುತ್ತಿದೆ ಎಂಬುದನ್ನು ಸಹ ತಿಳಿಸಬೇಕು. ಈ ದೇಶದಲ್ಲಿ ಭೂ ಸಮಸ್ಯೆಯನ್ನು ಕಳೆದ ೨೨ ವರ್ಷಗಳಿಂದಲೂ ಕೂಡ ಪರಿಹರಿಸದೇ ಇರುವುದರಿಂದ ಇವತ್ತು ಭೂಮಾಲೀಕರಿಗೂ ಮತ್ತು ಗೇಣಿದಾರರರಿಗೂ ಜಗಳವಾಗುವುದಕ್ಕೆ ಕಾರಣವಾಗಿದೆ. ಇದೇ ಪರಿಸ್ಥಿತಿ ಭೂಹೀನರಿಗೂ, ಅಲ್ಪಸ್ವಲ್ಪ ಭೂಮಿ ಇರುವವರಿಗೂ, ನೀರಾವರಿ ಸೌಕರ್ಯ ಇಲ್ಲದಿರುವವರಿಗೂ ಉಂಟಾಗಿದೆ. ಇದರಿಂದ ಒಬ್ಬರಿಗೊಬ್ಬರಿಗೆ ವಾದವಿವಾದವಾಗುವುದಕ್ಕೆ ಜಗಳವಾಗುವುದಕ್ಕೆ, ಅಶಾಂತಿಯುಂಟಾವುದಕ್ಕೆ ಕಾರಣವಾಗಿದೆ. ಇದನ್ನು ಸರ್ಕಾರದವರು ಪರಿಹರಿಸುತ್ತಾರೆಂದು ನಾವು ಕಳೆದ ೨೨ ವರ್ಷಗಳಿಂದಲೂ ಕಾದೆವು ಇನ್ನು ಕಾಯುವುದು ಸಾಧ್ಯವಿಲ್ಲ. ಮುಂದಿನ ಸಾಲಿನಿಂದ ಗೇಣಿಯನ್ನು ಭೂಮಾಲೀಕರಿಗೆ ಕೊಡುವುದಿಲ್ಲ ಎಂಬುದನ್ನು ನಾನು ಗೇಣಿದಾರರ ಪರವಾಗಿ ಮತ್ತೊಮ್ಮೆ ಹೇಳುತ್ತೇನೆ. ಕಳೆದ ೨೨ ವರ್ಷಗಳಿಂದ ಗೇಣಿಯನ್ನು ಕೊಟ್ಟಿದ್ದಾಗಿದೆ. ಇನ್ನು ಮುಂದೆ ಕೊಡುವುದಕ್ಕಾಗುವುದಿಲ್ಲ. ಭೂಮಾಲೀಕರು ಇನ್ನು ಮುಂದೆ ನೇರವಾಗಿ ಸರ್ಕಾರದಿಂದ ಪರಿಹಾರವನ್ನು ಪಡೆದುಕೊಳ್ಳಬೇಕೆಂದು ಹೇಳುತ್ತೇನೆ. ಸಣ್ಣ ಭೂಮಾಲೀಕರು, ವಿಧವೆಯರು, ಅಪ್ರಾಪ್ತವಯಸ್ಕರು, ಬುದ್ಧಿವಿಕಲ್ಪವಾಗಿರುವವರು ತಾವೇ ಸ್ವತಃ ಜಮೀನನ್ನು ಸಾಗುವಳಿ ಮಾಡಲು ಶಕ್ತಿ ಇಲ್ಲದಿರುವವರು ಯಾರಿದ್ದಾರೆ ಅವರು ಪುನರ್ವ್ಯವಸ್ಥೆ

(ಶ್ರೀ ಎಸ್. ಗೋಪಾಲಗೌಡ)

ಮಾಡಿ ಕೊಳ್ಳಲು ಸರ್ಕಾರದವರು ಅವರಿಗೆ ಪರಿಹಾರ ಕೊಡಬೇಕು. ೫೦ ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಯಾರು ಯಾರಿಗೆ ಪರಿಹಾರ ಕೊಡಬೇಕಾಗುತ್ತದೊ ಅಂಥವರಿಗೆ ಸರ್ಕಾರದವರು ಒಂದೇ ಗಂಟಿನಲ್ಲಿ ಹಣವನ್ನು ಕೊಡಬಹುದು. ಎಂದರೆ ಅವರು ಪುನರ್‌ವ್ಯವಸ್ಥೆ ಮಾಡಿದೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಒಂದು ಲಕ್ಷದ ಮೇಲೆ ಪರಿಹಾರ ಕೊಡಬೇಕಾದವರಿಗೆ ಅದನ್ನು ೨೧ ವರ್ಷಕ್ಕೆ ಕಂತುಗಳಲ್ಲಿ ಕೊಡಬೇಕೆಂದು ಹೇಳುತ್ತೇನೆ. ಅವರು ವರ್ಷೆ ವರ್ಷೇ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಇಂಥವರಿಗೆ ನಗದಾಗಿ ಕೊಡುವ ಪ್ರಶ್ನೆ ನಮ್ಮ ಮುಂದೆ ಉದ್ಭವಿಸುವುದಿಲ್ಲ. ಪರಿಹಾರ ಕೊಡಬೇಕಾದರೆ ೬೪ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳುತ್ತಾರೆ. ಇಷ್ಟು ಹಣ ಕೊಡಲು ಸರ್ಕಾರ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇಲ್ಲ. ಆದರಿಂದ ಪರಿಹಾರವನ್ನು ಬಾಂಡ್ ರೂಪದಲ್ಲಿ ಕೊಡಬಹುದೆಂದು ಸೂಚಿಸುತ್ತೇನೆ. ಈ ಭೂ ಸಮಸ್ಯೆಯನ್ನು ೧೯೭೦ರ ಅಕ್ಟೋಬರೊಳಗೆ ಮುಗಿಸಬೇಕೆಂದು ಹೇಳುತ್ತೇನೆ. ನಾಲ್ಕು ಲಕ್ಷ ಪಟ್ಟಾ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ರೈತರಿಗೆ ಹಂಚುತೇವೆಂದು ಹೇಳಿದರು. ಕೆಲವರಿಗೆ ಹಂಚಿಕೆಯಾಗಿದೆ, ಮತ್ತೆ ಕೆಲವರಿಗೆ ಹಂಚಿಕೆಯಾಗಿಲ್ಲ. ಈ ವಿಚಾರದಲ್ಲಿ ತುರ್ತು ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಹಳೆಯ ಮೈಸೂರು ಭಾಗದಲ್ಲಿ ರೆಕಾರ್ಡ್ ಆಫ್ ರೈಟ್ಸ್ ಅಸ್ತವ್ಯಸ್ತವಾಗಿದೆ. ಕಳೆದ ೨೨ ವರ್ಷಗಳಿಂದ ಸರಿಯಾಗಿ ಪಹಣಿ ಲೆಕ್ಕವನ್ನು ಬರೆದಿಲ್ಲ. ಇದನ್ನು ಸರಿಪಡಿಸಬೇಕು. ಭಾರಿ ನೀರಾವರಿ ಯೋಜನೆಗಳಿಗಾಗಿ ನೆನ್ನೆತಾನೆ ಈ ಸಭೆ ಬಾರಿ ಹಣವನ್ನು ಮಂಜೂರು ಮಾಡಿತು. ನಮ್ಮ ರಾಜ್ಯದಲ್ಲಿ ನೀರಾವರಿಗೆ ಒಳಪಟ್ಟಂತಹ ಭೂಮಿ ಬಹಳ ಕಡಿಮೆ ಇದೆ. ಯೋಜನೆಗಳನ್ನು ಕೈಕೊಳ್ಳಲು ಅನೇಕ ಅಡ್ಡಿಗಳು ಒರುಪ್ತಿವೆ. ಆದರೂ ಈ ಯೋಜನೆಗಳನ್ನು ಮುಗಿಸಬೇಕಾಗಿದೆ. ಈಗ ವಾಟರ್ ರೇಟನ್ನು ಹಾಕುತ್ತಿದ್ದೀರಿ. ಪಾಳೆಗಾರರು, ಮಹಾರಾಜರು ಕಟ್ಟಿಸಿರತಕ್ಕಂಥ ಕೆರೆಕಟ್ಟೆಗಳ ನೀರಿಗೆ ಮತ್ತು ಮಳೆಯ ಆಶ್ರಯದಲ್ಲಿ ಬೆಳೆಯುತಕ್ಕಂಥ ಬೆಳೆಗಳಿಗೆ ವಾಟರ್ ರೇಟನ್ನು ಹಾಕಬಾರದೆಂದು ಇಂಟಿಗ್ರೇಷನ್ ಆಗುವುದಕ್ಕೆ ಮುಂಚೆ ಸರ್ಕಾರ ಒಂದು ಕಾನೂನನ್ನು ಮಾಡಿತ್ತು. ಮತ್ತು ಆ ರೀತಿ ವಾಟರ್ ರೇಟನ್ನು ಹಾಕುವುದಿಲ್ಲವೆಂದು ಈ ಸಭೆಗೆ ಆಶ್ವಾಸನೆಯನ್ನು ಸಹ ಕೊಡಲಾಗಿತ್ತು. ಮಲೆನಾಡು ಪ್ರದೇಶದಲ್ಲಿ ಶಿವಪ್ಪನಾಯಕ ಕಟ್ಟಿಸಿದಂತಹ ೩೨ ಕೆರೆಗಳಿವೆ. ಈ ರೀತಿ ಆಶ್ವಾಸನೆ ಕೊಟ್ಟಿದ್ದರೂ ಕೂಡ ಕಾನೂನನ್ನು ತಿದ್ದುಪಡಿ ಮಾಡಿ ಈ ಕೆರೆಕಟ್ಟೆಗಳ ಆಶ್ರಯದಲ್ಲಿ ಬೆಳೆಯುತಕ್ಕಂಥ ಜಮೀನಿನ ಮೇಲೂ ವಾಟರ್ ರೇಟನ್ನು ಹಾಕುತ್ತಿದ್ದೀರಿ. ಇದು ನ್ಯಾಯವಲ್ಲ, ಧರ್ಮವಲ್ಲ. ಆ ರೀತಿ ಹಾಕುವುದಕ್ಕೆ ನಿಮಗೆ ಹಕ್ಕೂ ಕೂಡ ಒರುವುದಿಲ್ಲ. ೧೯೪೭ರಿಂದೀಚೆಗೆ ಸಾರ್ವಜನಿಕರ ಹಣದಿಂದ ಯಾವ ಕೆರೆಕಟ್ಟೆಗಳನ್ನು ಮತ್ತು ಪ್ರಾಜೆಟ್‌ಗಳನ್ನು ಕಟ್ಟಿಸಿದ್ದಿರೋ ಅಂತಹ ಭಾಗಗಳಲ್ಲಿ ಮಾತ್ರ ನೀರಿನ ತೆರಿಗೆಯನ್ನು ವಿಧಿಸುವುದಕ್ಕೆ ನಿಮಗೆ ಹಕ್ಕಿದಯೇ ಹೊರತು ಹಳೆಯ ಕಾಲದ ಕೆರೆಗಳ ನೀರನ್ನು ಮತ್ತು ಸ್ವಾಭಾವಿಕವಾಗಿ ಬರುವ ಮಳೆಯ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುವವರ ಮೇಲೆ ವಾಟರ್ ರೇಟನ್ನು ಹಾಕುವುದಕ್ಕೆ ಕಾನೂನು ಪ್ರಕಾರ ನಿಮಗೆ ಅಧಿಕಾರವಿಲ್ಲ. ಆದರಿಂದ ಸರ್ಕಾರದವರು ಇದನ್ನು ಪುನರ್ವಿಮರ್ಷೆ ಮಾಡಿ ಸೂಕ್ತ ಕಾನೂನನ್ನು ಮಾಡಬೇಕು. ಇದು ಅಗತ್ಯವಾಗಿ ಆಗಬೇಕಾದು ಕೆಲಸ ಇವತ್ತು ಕಂದಾಯ ವಸೂಲಿ ಮಾಡುವ ವಿಚಾರದಲ್ಲಿ ಕಳ್ಳಾಟ ಮಾಡುತ್ತಿದ್ದೀರಿ. ಕೆಲವು ಕಡೆಗಳಲ್ಲಿ ಕ್ಷಾಮ ಇದೆ ಎಂದು ಕಂದಾಯವನ್ನು ಮಾಫಿಮಾಡುತ್ತೀರಿ. ಮಳೆ ಬೆಳೆ ಯಾವ ವರ್ಷದಲ್ಲಿ ಮಾಫಿ ಮಾಡಿದ ಕಂದಾಯವನ್ನು ಸಹ ವಸೂಲಿ ಮಾಡುವುದಕ್ಕೆ ಹೊರಡುತ್ತೀರಿ. ಬ್ರಿಟೀಷರ ಕಾಲದಲ್ಲಿ ಅಂದರೆ ಷೇರ್‌ಷಾನ ಕಾಲದಲ್ಲಿ ಸರ್ವೆಯಾದ ಮೇಲೆ ಮತ್ತೆ ತಾವು ಸರ್ವೆ ಮಾಡಿಸಿಲ್ಲ. ಕಳೆದ ೫೦—೬೦ ವರ್ಷಗಳಲ್ಲಿ ಬೇಜವಾಬ್ದಾರಿಯುತವಾದ ಸರ್ವೆ ಮಾಡಿ ಹಿಂದೆ ಏನು ಸರ್ವೆ ಮಾಡಿದ ಲೆಕ್ಕ ಇತ್ತೊ ಅದರ ಲೆಕ್ಕವನ್ನು ತೆಗೆದುಕೊಂಡು ಗುಣಾಕಾರಮಾಡಿ ೨೧ ರೂಪಾಯಿ ಕಂದಾಯ ಇದ್ದ ಕಡೆ ೪೦ ರೂಪಾಯಿ ಎಂದು೪೦ ರೂಪಾಯಿ ಇದ್ದ ಕಡೆ ೮೦ ರೂಪಾಯಿಗಳು ಎಂದು ನಿಗದಿ ಮಾತಿದ್ದೀರಿ ಯಾವ ಜಮೀನನ್ನು ಕೂಡ ಸರಿಯಾಗಿ ಅಳತೆ ಮಾಡಿಲ್ಲ. ನಿಮ್ಮ ಹತ್ತಿರ ಸರಿಯಾದ ಸರ್ವೆ ನಂಬಾಗಲೀ ನಕಾಶೇಯಾಗಲೀ ಇಲ್ಲ. ಒಂದು ಬಾಳೆ ಮರ ಇದ್ದರೆ ಆ ಭಾಗವನ್ನು ಬಾಗಾಯಿತ್ತು ಜಮೀನು ಎಂದು ಟ್ರೀಟ್ ಮಾಡಿ ೨೦ ರೂಪಾಯಿ ಕಂದಾಯವನ್ನು ೬೦ ರೂಪಾಯಿ ಮಾಡಿದ್ದೀರಿ. ಈ ಪ್ರಕಾರ ಹೊಲಕ್ಕು ಮಾಡಿ ಇಟ್ಟಿದ್ದೀರಿ. ರೆವಿನ್ಯೂ ಭೂಮಿ ಎಷ್ಟಿದೆ, ಫಾರೆಸ್ಟ್ ಭೂಮಿ ಎಷ್ಟಿದೆ, ಬಗರೆ ಹುಕುಂ ಆಗುತ್ತಿರುವ ಭೂಮಿ ಎಷ್ಟು ಇದೆ., ಹಂಚಿಕೆಯಾಗುವುದಕ್ಕೆ ಯೋಗ್ಯವಾದ ಭೂಮಿ ಎಷ್ಟು ಇದೆ, ಖಾಸಗೀ ಜಮೀನು ಎಷ್ಟಿದೆ ಇದನ್ನೆಲ್ಲಾ ಸರಿಯಾಗಿ ಸರ್ವೆ ಮಾಡಿ ಒಂದು ವಿವರವಾದ ಪಟ್ಟಿಯನ್ನು ನಮ್ಮ ಮುಂದೆ ಇಡಬೇಕು. ಭೂಸುಧಾರಣ ಸಂಬಂಧದಲ್ಲಿ ಜಿಲ್ಲಾ ಸಮಿತಿಯವರು ಕೊಟ್ಟಿರುವ ಅಂಕಿ ಅಂಶಗಳು ಸಮರ್ಪಕವಾಗಿಲ್ಲ. ಆದರಲ್ಲಿ ವಿಪರೀತ ಹೆಚ್ಚು ಕಡಿಮೆಯಾಗಿದೆ. ಶಾನುಭೋಗರು ಸರಿಯಾಗಿ ಲೆಕ್ಕ ಬರೆಯದ ಕಾರಣ ಖುಷ್ಕಿ ಜಮೀನು ತರಿ ಜಮೀನಾಗಿದೆ, ತರಿ ಜಮೀನು ಬಾಗಾಯಿತು ಆಗಿದೆ. ಆದಕಾರಣ ಸರಿಯಾದ ಸರ್ವೆ ಆಫೀಸರನ್ನು ನೇಮಕ ಮಾಡಿ ಮೈಸೂರು ರಾಜ್ಯದಲ್ಲಿ ಖುಷ್ಕಿ ಜಮೀನು ಎಷ್ಟಿದೆ, ತರಿ ಜಮೀನು

ಎಷ್ಟಿದೆ, ಬಾಗಾಯಿತು ಎಷ್ಟಿದೆ ಮತ್ತು ಸಿಮ್ಲ, ಸ್ಯಾಂಡರ್ಡ್ ಎಕರೆ ಪ್ರಕಾರ ಎಷ್ಟೆಷ್ಟು ಜಮೀನು ಇವೆ, ಫಾರೆಸ್ಟ್‌ಗೆ ಸಂಬಂಧಪಟ್ಟಂತೆ ಸಾಗುವಳಿಗೆ ಯೋಗ್ಯವಾದ ಭೂಮಿ ಎಷ್ಟಿದೆ ಇದನ್ನೆಲ್ಲಾ ಲೆಕ್ಕ ಮಾಡಿ ಸಭೆಯ ಮುಂದೆ ಇಡಬೇಕು.

2-30 P. M.

೧೯೭೦ನೆಯ ಇಸವಿಯಲ್ಲಿ ಆಶ್ಚರ್ಯಕರವಾಗಿ ಸರ್ಕಾರ ಸಂಪೂರ್ಣವಾಗಿ ಇದರ ಲೆಕ್ಕ ಮಾಡಿಸಬೇಕು. ಲೆಕ್ಕ ಕನ್ನಡಿ ಇದ್ದ ಹಾಗೆ ಇರಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಅಗರ ಗ್ರಾಮದಲ್ಲಿ ಹಿರೇ ಕೆರೆ ಆದೆ. ಅಲ್ಲಿ ನೀರು ಇದೆಯೇ, ಅದರ ಅಚ್ಚುಕಟ್ಟು ಎಷ್ಟು, ಖುಷ್ಕಿ ಎಷ್ಟು ಎಕರೆ ಇದೆಯೆಂದು ಕೇಳಿದರೆ ಕೂಡಲೇ ಹೇಳುವ ಹಾಗೆ ಇರಬೇಕು. ಪುಸ್ತಕ ನೋಡಿ ಹೇಳುತ್ತೇನೆ ಎಂದು ಹೇಳಿದರೆ ಅದನ್ನು ಕೇಳುವುಕ್ಕಾಗುವುದಿಲ್ಲ. ಈಗಾಗಲೇ ೨೨ ವರ್ಷಗಳು ಕಳೆದಿವೆ. ಈ ಬಗ್ಗೆ ಇನ್ನೂ ಏನೂ ಮಾಡಿಲ್ಲ ೨೫ ಸಾವಿರ ಹಳ್ಳಿಗಳಲ್ಲಿ ವಾಸ ಮಾಡತಕ್ಕವರು ಸುಮಾರು ಎರಡು ಕೋಟಿ ಜನರು ಇದ್ದಾರೆ. ಒಂದು ಕೋಟಿ ೨೦ ಲಕ್ಷ ಜನ ಭೂಮಿಯನ್ನು ಆಶ್ರಯಿಸಿ ಜೀವನ ಮಾಡುತ್ತಿದ್ದಾರೆ. ಶೇಕಡಾ ೨೫ ಪರ್ಸೆಂಟ್ ನೀರಾವರಿ ಮಾಡಿದರೂ ಶೇಕಡಾ ೭೫ ಭಾಗ ಜಮೀನು ಮಳೆ ಬಂದರೆ ಬೆಳೆಯಾಗುತ್ತದೆ. ಇಲ್ಲದಿದ್ದರೆ ಬೆಳೆ ಆಗುವುದಿಲ್ಲ. ಕೆಲವು ಸಂದರ್ಭದಲ್ಲಿ ಬೀಜ ಕೂಡ ಕೈಗೆ ಸಿಕ್ಕುವುದಿಲ್ಲ ಜೋಳದ ಬೆಳೆ ಹಾಳಾಗಿ ಹೋಗುತ್ತದೆ. ಗಂಡ ಹೆಂಡತಿ ಇಬ್ಬರೂ ಉತ್ತು ಬಿತ್ತು ವ್ಯವಸಾಯ ಮಾಡುತ್ತಾರೆ. ಆದರೆ ಅವರಿಗೆ ಅವರಂ ಪಡತಕ್ಕ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕುವುದಿಲ್ಲ. ಹೀಗಿರುವಾಗ ಇವೊತ್ತು ದುಪ್ಪಟ್ಟು, ಮೂರು ಪಟ್ಟು, ೫ ಪಟ್ಟು ಕಂದಾಯವನ್ನು ವಸೂಲು ಮಾಡಬೇಕೆಂದು ರೈತರಿಗೆ ತಾವು ನೋಟೀಸು ಕೊಡುತ್ತಿದ್ದೀರಿ, ಇದನ್ನು ನಿಲ್ಲಿಸಬೇಕು. ಗ್ರಾಮವಾರು ಸರ್ವೆ ಮಾಡಿ ಅದರ ಪ್ರತಿಯೊಂದು ಗಾತ್ರವನ್ನು ಏಂಗಡಿಸಿ ಆದರ ಆಧಾರದ ಮೇಲೆ ಕಂದಾಯವನ್ನು ವಸೂಲು ಮಾಡುವುದಕ್ಕೆ ತಹಶೀಲ್ದಾರರು, ಶ್ಯಾನುಭೋಗರು, ರೆವಿನ್ಯೂ ಇನ್‌ಸ್ಪೆಕ್ಟರು ಮುಂತಾದ ಕಂದಾಯವನ್ನು ಕಲೆಕ್ಟ್ ಮಾಡತಕ್ಕ ಎಲ್ಲಾ ಅಧಿಕಾರಿಗಳಿಗೂ ಒಂದು ಸ್ಪಷ್ಟವಾದ ಆಜ್ಞೆಯನ್ನು ಸರ್ಕಾರ ಹೊರಡಿಸಬೇಕೆಂದು ನಾನು ರಾಜ್ಯದ ರೈತರ ಪರವಾಗಿ ತಮ್ಮನ್ನು ಒತ್ತಾಯ ಪಡಿಸುತ್ತೇನೆ. ಈಗ ಶಾಸ್ತ್ರೀಯವಾದ ರೀತಿಯಲ್ಲಿ ಆಯಾ ಜಮೀನಿಗೆ ಅನುಗುಣವಾಗಿ ಕಂದಾಯವನ್ನು ವಸೂಲು ಮಾಡಲಿತ್ತಿಲ್ಲ. ದುಡ್ಡು ಇದ್ದವರು ಕಂದಾಯ ಕೊಡುವುದಕ್ಕೆ ಯೋಗ್ಯತೆ ಇರುವರು ಕಂದಾಯವನ್ನು ಕೊಡಲಿ, ಅಂಥವರ ಮೇಲೆ ಇವರು ಕಂದಾಯವನ್ನು ವಿಧಿಸುವುದಿಲ್ಲ. ಅದರಿಂದ ಕಂದಾಯವನ್ನು ವಸೂಲು ಮಾಡುವುದಿಲ್ಲ. ಬಡವರ ಮೇಲೆ ಹೆಚ್ಚು ಕಂದಾಯವನ್ನು ಹಾಕಿ ಅವನಿಗೆ ಹಾಕಿ ಅವನಿಗೆ ಇಚ್ಛಂತ ಮನೆಯನ್ನು ಹರಾಜು ಮಾಡಿಸಿ ಅವನಿಂದ ಕಾದಾಯವನ್ನು ವಸೂಲು ಮಾಡುತ್ತಾರೆ ಆರ್ಥಿಕ ಹಿಡುವಳಿಯ ಮೇಲೆ, ಆರ್ಥಿಕವಾಗಿ ಸಬಲವಲ್ಲದೇ ಇರತಕ್ಕ ಸಣ್ಣ ಹಿಡುವಳಿಗಳ ಮೇಲೆ ಕಂದಾಯವನ್ನು ರದ್ದು ಮಾಡಬೇಕು. ಕೃಷಿ ಭೂಮಿಯನ್ನು ಪ್ಲಾಂಟರುಗಳಿಗೆ ಕೊಡಲಾಗಿದೆ. ಈ ರೀತಿಯಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು ೨-೩ ಸಾವಿರ ಎಕರೆ ಬೇಸಾಯದ ಜಮಿನಾನ್ನು ಬೇರೆ ಯಾರು ಯಾರಿಗೋ ಕೊಟ್ಟಿದ್ದಾರೆ. ಶಿವಮೊಗ್ಗಾದಲ್ಲಿ ಷುಗರ್ ಕೇನ್ ಕಂಪೆನಿಯವರು ಸ್ವಂತವಾಗಿ ಕಬ್ಬು ಬೆಳೆಯುತ್ತಾರೆ. ಅವರು ಎಷ್ಟೋ ಸಾವಿರ ರೂಪಾಯಿಗಳ ಕಂದಾಯದ ಬಾಕಿ ಕೊಡಬೇಕಾಗಿದೆ. ಅದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ವ್ಯವಹಾರ ಮಾಡುತ್ತಿದ್ದಾರೆ. ಆ ಕಂಪೆನಿಯವರಲ್ಲಿ ಇಷ್ಟು ಕಂದಾಯವನ್ನು ರೈಟ್ ಆಫ್ ಮಾಡಿದರೆ ನನಗೆ ಎಷ್ಟು ಕೊಡುತ್ತೀರಿ, ಎಂದು ಅಧಿಕಾರಿಗಳು ಕೇಳುತ್ತಾರೆ. ಇಂಥಾ ವ್ಯವಹಾರವನ್ನು ಮಾಡಿ ದೇಶವನ್ನು ಉದ್ಧಾರ ಮಾಡುವುದಕ್ಕೆ ಹೊರಟಿರುವುದರಿಂದ ಬಹಳ ಕಷ್ಟವಾಗುತ್ತದೆ. ಇದರಲ್ಲಿ ಒಂದು ಕ್ರಾಂತಿಕರವಾದ ಬದಲಾವಣೆ ಆಗಬೇಕು. ಇಲ್ಲಿ ಒಂದು ಸ್ಟಾಲಿನ್ ಪದ್ಧತಿಯನ್ನು, ಮೆಕಾರ್ಥಿ ಪದ್ಧತಿಯನ್ನು ಅನುಸರಿಸಿ ಕಾಲಹರಣ ಮಾಡುತ್ತಿದ್ದಾರೆ ಇದರಿಂದ ದೇಶ ಅಗ್ನಿಕುಂಡವಾಗಿದೆ. ಜಮೀನು ಒಬ್ಬನದು, ಸಾಗು ಮಾಡುವವನು ಒಬ್ಬ, ಅದನ್ನು ಉಪಯೋಗ ಮಾಡುವವನು ಒಬ್ಬ. ಈ ಸ್ಥಿತಿ ದೇಶದಲ್ಲಿ ಬಂದಿದೆ. ಈಗ ನಾನು ಆಸೆಂಬ್ಲಿ ಮೆಂಬರಾಗಿದ್ದೇನೆ ಎಂದು ಕೋರ್ಟಿನಲ್ಲಿ ಸ್ಟೇ ಆರ್ಡರು ತೆಗೆದುಕೊಂಡು ಬಂದು ತೀರ್ಥಹಳ್ಳಿಯಲ್ಲಿ ಯಾರ ಜಮೀನಾನಲ್ಲಿ ಯಾವ ಬೆಳೆಯನ್ನಾದರೂ ಕೊಯ್ದುಕೊಂಡು ಬರಬಹುದು. ಆ ಒಂದು ಪರಿಸ್ಥಿತಿ ಉಂಟಾಗಿದೆ. ಈ ಪದ್ಧತಿ ಇರತಕ್ಕ ರಾಜ್ಯದಲ್ಲಿ ಈ ಸರ್ಕಾರ ಇದೆಯೆಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಆದ್ದರಿಂದ ಇಲ್ಲಿ ಇದರ ಬಗ್ಗೆ ವಿಶೇಷವಶದ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ.

ಫ್ಯಾಮಿನ್ ರಿಲೀಫ್ ಬಗ್ಗೆ ಹೇಳಬೇಕಾದರೆ, ಈ ರಿಲೀಫ್ ಕಾವಗಾರಿಯನ್ನು ಕೈಗೊಳ್ಳುವಾಗ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡಬೇಕು. ಹಾಗವನ್ನು ಹಾಳು ಮಾಡಬಾರದು. ನಾನು ನೋಡಿದ್ದೇನೆ. ಫ್ಯಾಮಿನ್ ರಿಲೀಫ್ ಎಂದರೆ ಕೆಲವು ಆಫೀಸರು ಯಾರದೋ ಹೆಬ್ಬೆಟ್ಟು ಒತ್ತಿಸಿಕೊಂಡು ಪಣ ಖರ್ಚು ಹಾಕಿ ಕೆಲಸ ಮಾಡದೇ ಇರುವಂಥಾದ್ದು ಉಪಯೋಗವಿಲ್ಲ. ರಿಲೀಫ್ ಕಾಮಗಾರಿಗಳನ್ನು ಮಾಡುವಾಗ ಶಾಶ್ವತವಾದ ಮತ್ತು ಜನಗಳಿಗೆ ಉಪಯೋಗವಾಗುವಂತಹ ಕೆಲಸಕಾರ್ಯಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಮಾಡಬೇಕು. ಬಾವಿಯಲ್ಲಿ ನೀರಿಲ್ಲ, ಕಟ್ಟಿರುವ ಕೆರೆಯಲ್ಲಿ ನೀರಿಲ್ಲ. ಹೊಸ ಹೊಸದಾಗಿ ಮಾಡಿರತಕ್ಕ ರಸ್ತೆಗಳಿಗೆ ಸ್ವಲ್ಪ ಮಣ್ಣು ಎರಚಿ ರಸ್ತೆಗಳನ್ನು ಮಾಡಿಸಿದ್ದೇವೆ. ಎಂದು ಬಿಲ್ ಮಾಡಿ ಹಣವನ್ನು ತೆಗೆದುಕೊಳ್ಳುತ್ತಾರೆ. ಬಿದಿರಕ್ಕೆ ಹಾಕತಕ್ಕದ್ದು ಲಾಭದಾಯಕ ಎಂದು ಕೆಲವರು ಹೇಳುತ್ತಾರೆ. ಈ ಮಾತನ್ನು ಹೇಳತಕ್ಕವರಿಗೆ ಗಲ್ಲು ವಿಧಿಸಬೇಕು ಬಡತನವನ್ನು ಮೂದಲಿಸುವುದಕ್ಕೆ ರಾಜ್ಯಾಂಗದಲ್ಲಿ ಅಧಿಕಾರ ಕೊಟ್ಟಿಲ್ಲ ಆದ್ದರಿಂದ ಬಡತನವನ್ನು ಮೂದಲಿಸುವುದಕ್ಕೆ ಸಾಧ್ಯವಿಲ್ಲ. ಫ್ಯಾಮಿನ್ ರಿಲೀಫ್ ವರ್ಕನಲ್ಲಿ ಹತೋಟಿ ಇಟ್ಟುಕೊಂಡು ಹಣ ಖರ್ಚು ಮಾಡಬೇಕು. ಗಲಾಟೆ ಮಾಡತಕ್ಕವರಿಗೆ ಕ್ಷಾಮವಿಲ್ಲದಿದ್ದರೂ ಆ ಪ್ರದೇಶದಲ್ಲಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತಾರೆ. ನಿಜವಾದ ಕ್ಷಾಮವಿದ್ದರೂ ಕೂಡ ಅಂಥಾ ಕಡೆ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಿಲ್ಲ. ಈ ಕೆಲಸ ಮಾಡುವುದರಲ್ಲಿ ಸ್ವಲ್ಪ ತಿದ್ದಿಕೊಳ್ಳಬೇಕು. ಭೂಮಾಲೀಕ ಸರ್ಕಾರದ ಹತ್ತಿರ ಸಂಪರ್ಕವನ್ನು ಇಟ್ಟುಕೊಂಡಿದ್ದಾನೆ. ಗೇಣಿದಾರ ಸರ್ಕಾರದ ಹತ್ತಿರ ಸಂಪರ್ಕವನ್ನು ಇಟ್ಟುಕೊಂಡಿರುವುದಿಲ್ಲ. ಭೂ ಮಾಲೀಕ ಭೂ ಸೈನ್ಯವನ್ನು ಕಟ್ಟುವುದಾದರೆ ಅವನ ಸವಾಲನ್ನು ಅಂಗೀಕಾರ ಮಾಡುವುದಕ್ಕೆ ಭೂಮಾಲೀಕನಿಗೂ ಗೇಣಿದಾರನಿಗೂ ಒಂದು ದೊಡ್ಡ ಸಂಘರ್ಷಣೆ ನಡೆಯುತ್ತದೆ. ಗೇಣಿದಾರನೂ ಸೈನ್ಯ ಕಟ್ಟುತ್ತಾನೆ. ಆಗ ಮುಂದಿನ ಪರಿಣಾಮ ಏನಾಗುತ್ತದೆ ಎಂಬುದನ್ನು ನಾನು ಸೂಚಿಸುವುದಕ್ಕೆ ಇಷ್ಟ ಪಡುವುದಿಲ್ಲ ೧೯೭೦ನೇ ಇಸವಿಯಿಂದ ಯಾರಿಗೂ ಈ ರಾಜ್ಯದಲ್ಲಿ ಗೇಣಿಯನ್ನು ಕೊಡುವುದಿಲ್ಲ. ಬೇಕಾದರೆ ಭೂಮಾಲೀಕನನ್ನು ಸರ್ಕಾರದಿಂದ ಅದನ್ನು ವಸೂಲು ಮಾಡಿಕೊಳ್ಳಲಿ. ವಿಧವೆಯರಿಗೆ ಅಪ್ರಾಪ್ತವಯಸ್ಕರಾದರಿಗೆ, ಬುದ್ಧಿ ವಿಕಲ್ಪರಾದವರಿಗೆ ಪುನರ್ ವ್ಯವಸ್ಥೆಗೆ ಪರಿಹಾರವನ್ನು ತಕ್ಷಣ ಕೊಡಬೇಕು, ಭೂಮಾಲೀಕರ ಪುನರ್ ವ್ಯವಸ್ಥೆಗೆ ಪರಿಹಾರವನ್ನು ಏಕ ಗಂಟಿನಲ್ಲಿ ನಗದು ಹಣವನ್ನು ಕೊಡಬೇಕು. ಪ್ಯಾನ್‌ಟೇಷನ್ ಇವುಗಳನ್ನೆಲ್ಲಾ ನ್ಯಾಷನಲೈಜ್ ಮಾಡಬೇಕು. ಕೃಷಿ ಉತ್ಪನ್ನದ ಮೇಲೆ ಆದಾಯ ತೆರಿಗೆಯನ್ನು ಹಾಕಬೇಕು. ಕೃಷಿ ಉತ್ಪನ್ನ ತೆರಿಗೆಯಲ್ಲಿ ಕನಿಷ್ಠ ೧೦ ಕೋಟಿ ರೂಪಾಯಿಗಳು ಬರುತ್ತದೆ. ಇದನ್ನು ಇವರು ಲೆಕ್ಕ ಮಾಡುವುದಕ್ಕೆ ಹೋಗುತ್ತಿಲ್ಲ. ಇದರಲ್ಲಿ ಇವರಿಗೆ ಹತ್ತಿರದ ನೆಂಟರು, ಬೇಕಾದವರು ಇದ್ದಾರೆ. ಈ ರೀತಿ ಏನೇನೋ ವಿಚಾರಗಳು ಇವೆ. ಇವುಗಳೆಲ್ಲಾ ಸರ್ಕಾರದಲ್ಲಿ ನಡೆಯುತ್ತವೆ. ಬಡವರು ಪಾಪಿಗಳು ಇವರಿಂದ ಏನೂ ಆಗುವುದಿಲ್ಲ. ಇವರಿಂದ ಸುಲಭವಾಗಿ ಓಟು ಹಾಕಿಸಿಕೊಂಡು ಇವರನ್ನು ಅನುಮಾನಕ್ಕೆ ಈಡು ಮಾಡಿದ್ದಾರೆ. ಎಲ್ಲಾ ರೈತರಿಗೂ ಪಟ್ಟಾಗಳನ್ನು ಕೊಡುವುದು, ಭೂಮಿಯನ್ನು ಪುನರ್ ಹಂಚಿಕೆ ಮಾಡುವುದು ಇವುಗಳನ್ನೆಲ್ಲಾ ಯಾವಾಗ ಮಾಡುತ್ತಾರೆಯೋ ಗೊತ್ತಿಲ್ಲ. ಗೇಣಿಯ ವಿಷಯ ವಿವಾದಾಸ್ಪದವಾಗುವುದಿಲ್ಲ. ಇವುಗಳನ್ನು ಮುನ್ಸೀಫರಿಗೆ ಕೊಟ್ಟಿದ್ದೇವೆ ಅವರು ಇವುಗಳನ್ನೆಲ್ಲಾ ನಿಕಾಲೆ ಮಾಡುತ್ತಾರೆ. ಎಂದು ಹೇಳಿದ್ದಾರೆ ಅವರು ಏನು ನಿಕಾಲೆ ಮಾಡುತ್ತಾರೆಯೋ ಗೊತ್ತಿಲ್ಲ. ಇವರ ನೀತಿ ಒಸವ ಹುಳುವಿನ ವೇಗದಲ್ಲಿ ಹೋಗುತ್ತಿದೆ. ಇದು ಒಂದು ದೊಡ್ಡ ಸಮಸ್ಯೆ. ಎಲ್ಲೋ ಮನೆ ಮನೆಗಳೂ ಹಾಳಾಗಿವೆ ಇವರು ಈ ರೀತಿ ಮಾಡುತ್ತಾ ಹೋದರೆ ಹುಣ್ಣಿನ ಮೇಲೆ ಎಣ್ಣೆ ಸವರಿದ ಹಾಗೆ ಆಗಿ ಇದು ಆಸ್ಫೋಟನವಾಗುತ್ತದೆ.

ಇದರಿಂದ ಸರ್ಕಾರವು ಕುಸಿದು ಬೀಳುತ್ತದೆ ಮತ್ತು ರಾಜ್ಯದಲ್ಲಿ ಅರಾಜಕತೆ ಮತ್ತಷ್ಟು ಹೆಚ್ಚಾಗುತ್ತದೆ ಅದಕ್ಕಾಗಿ ನಾನು ಮಂತ್ರಿಯವರಲ್ಲಿ ಕೇಳುವುದು ಇಷ್ಟೆ ಬಹಳ ನಿರ್ದಿಷ್ಟವಾಗಿ ಕಾನೂನನ್ನು ತಿದ್ದುಪಡಿ ಮಾಡಿ, ಅದಷ್ಟು ಜಾಗ್ರತೆಯಾಗಿ ಜಾರಿಗೆ ಕೊಡುವುದಕ್ಕೆ ತಾವು ಪ್ರಯತ್ನ ಮಾಡಬೇಕು, ಮತ್ತು ಭೂಮಾಲಿಕರು ಭೂಸೈನ್ಯ ಕಟ್ಟುವುದನ್ನು ತಡೆಗಟ್ಟಬೇಕು. ಭೂಮಾಲಿಕರಿಗೆ ಪರಿಹಾರ ಕೊಟ್ಟು ಅವರನ್ನು ಭೂಮಿಗೂ ಉಳುಮೆ ಮಾಡುವವರಿಗೂ ಮಧ್ಯಸ್ಥಾಗಾರರನ್ನಾಗಿ ಮಾಡಬಾರದು. ಉಳುವವನೇ ಭೂಮಿಯ ಒಡೆಯನಾಗಬೇಕೆಂದು ಕಾಗೋಡಿನಲ್ಲಿ ನಡೆದ ಸಭೆಯಲ್ಲಿ ಏನು ಒಂದು ಬೇಡಿಕೆಯನ್ನು ನಾವು ಇಟ್ಟಿದ್ದೇವೆ. ಅದನ್ನು ಸರ್ಕಾರದವರು ಕಾರ್ಯಾಗತಮಾಡ ಬೇಕಾಗಿತ್ತು. ನೀವು ವೆಗದಲೇ ಟಿಲ್ಲರ್ ಆಫ್ ದಿ ಲ್ಯಾಂಡ್ ಶುಡ್ ಬೀ ದಿ ಓನರ್ ಎಂದು ಏನು ಹೇಳಿದ್ದೀರಿ, ಅದನ್ನು ಇನ್ನೂ ಮಾಡಿಲ್ಲ. ಅದು ಎಲ್ಲಾ ರಾಜ್ಯಗಳಲ್ಲಿ ಸರಿಯಾಗಿ ಕಾರ್ಯಾಗತ ಇನ್ನೂ ಆಗಿಲ್ಲ. ಅದನ್ನು ನೀವು ಇನ್ನೂ ವಿಳಂಬ ಮಾಡುವುದು ಅಪಾಯಕರ. ಜನರು ಇನ್ನು ಕಾನೂನನ್ನು ತನ್ನ ಕೈಯಲ್ಲಿತೆಗೆದುಕೊಂಡು ಪ್ರವೃದಲ್ಲಿ ಸರ್ಕಾರದವರು ಆದನ್ನು ನಿಲ್ಲಿಸಲಾಗುವುದಿಲ್ಲ. ಅಷ್ಟೊಂದು ತೀವ್ರಗತಿಯಿಂದ ಭೂಸುಧಾರಣೆಯನ್ನು ಜಾರಿಗೆ ತಂದು, ಭೂಮಾಲಿಕರ ಮತ್ತು ಗೇಣಿದಾರರ ಸಂಬಂಧವನ್ನು ತೊಡೆದು ಹಾಕಬೇಕಾಗಿದೆ. ನೀವು ಅನಾರ್ಥಿಕ ಹಿಡುವಳಿಯ ಮೇಲೆ ಭೂಕಂದಾಯ ರದ್ದು ಮಾಡುವುದು ಹಾಗೂ ಕೃಷಿ ಉತ್ಪನ್ನದ ಮೇಲೆ ಕಂದಾಯ ಹಾಕುವುದು, ಇಷ್ಟು ಕೆಲಸಗಳನ್ನು ನೀವು ಮಾಡಬೇಕು ಮತ್ತು ನಿಮ್ಮ ಮಾತನ್ನು ಉಳಿಸಬೇಕು. ಈ ಎಲ್ಲಾ ಕೆಲಸಗಳನ್ನು ಮಾಡದೆ, ಅನಾವಶ್ಯಕವಾಗಿ ಕಾಲಹರಣ ಮಾಡುವುದರಿಂದ ಸುಮ್ಮನೆ ಕಾಗದ ಪತ್ರಗಳನ್ನು ಬೆಳೆಸುವುದರಿಂದ ಏನೂ ಪ್ರಯೋಜನವಿಲ್ಲ ಇಷ್ಟು ಮಾತುಗಳನ್ನು ಹೇಳಿ ಈ ಬೇಡಿಕೆಗಳನ್ನು ವಿರೋಧಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER :-I have just received a request from the Congress (R) party to accommodate one more member to participate in the debate. I am sorry absolutely to time is available. As per the arrangement, the Congress (R) party has been allotted 31 minutes.

SRI H. SIDDAVEERAPPA :-Sir, yesterday none from our party had the chance to speak. It is within the discretion of the chair to give five or ten minutes more time. Totally our two members will have spoke from our party to day.

MR. SPEAKER :-As per the present arrangement I have allotted half of the time to the Treasury Benches including the time required by the Ministers to reply to the debate. If an alternate arrangement is Suggested, that could be considered. But for the present, let us follow the existing arrangement. Now I call upon Hon. Member Sri Devaraj Urs to speak. He has been allotted 20 minutes time.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು):—ಮಾನ್ಯ ಅಧ್ಯಕ್ಷರೆ, ನಮ್ಮ ಭೂಸುಧಾರಣೆ ಇಷ್ಟು ವರ್ಷವಾದರೂ ಯಾವ ಒಂದು ಘಟ್ಟಕ್ಕೂ ಮುಟ್ಟಿಲ್ಲ. ಸರ್ಕಾರದವರು ಅನೇಕ ವರ್ಷಗಳಿಂದ ಹೇಳುತ್ತಾ ಇರುವ ರೀತಿಯಲ್ಲಿ ಇನ್ನೂ ನಾಲ್ಕಾರು ವರ್ಷವಾದರೂ, ಇದು ಒಂದು ಅಂತಿಮ ಘಟ್ಟಕ್ಕೆ ಬರುವಂತೆ ಕಾಣುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳಬಹುದು, ಮೊದಲನೆಯದಾಗಿ ಕಾನೂನು ಜಾರಿಗೆ ಕೊಡಬೇಕಾದರೆ ಈ ಭೂಮಾಲಿಕರಿಗೂ, ಗೇಣಿದಾರರಿಗೂ ಇರತಕ್ಕಂತಹ ಡಿಸ್ಪ್ಯೂಟ್ಸ್ ಏನಿವೆ, ಇದನ್ನು ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕೆನ್ನುವ ಉದ್ದೇಶದಿಂದ ಹಿಂದಿನ ಕಾನೂನಿನಲ್ಲಿ ಲ್ಯಾಂಡ್ ಟ್ರಿಬ್ಯೂನಲ್ಸ್ ಮಾಡಬೇಕೆಂದು ಹೇಳಿ ಒಂದು ಅಧಿಕಾರ ಕೊಟ್ಟಿದ್ದರು. ಆದರೆ ಈಗ ಕೆಲವು ದಿವಸಗಳ ಹಿಂದೆ ಒಂದು ಅಮೆಂಡ್ ಮೆಂಟ್ ತಂದು, ಟ್ರಿಬ್ಯೂನಲ್ಸ್ ಮಾಡುವುದನ್ನು ಬಿಟ್ಟು ಹಾಲಿ ಇರತಕ್ಕ ಕೋರ್ಟುಗಳಿಗೆ ಇದರ ಅಧಿಕಾರ ವ್ಯಾಪ್ತಿಯನ್ನು ಕೊಡಬೇಕೆಂದು ಮಾಡಿದ್ದಾರೆ, ತಹಸೀಲ್ದಾರರಿಗೆ ಒಂದು ಭಾಗ ಅಧಿಕಾರ ಕೊಟ್ಟಿದ್ದಾರೆ. ನನಗೆ ತಿಳಿದ ಮಾಹಿತಿ ಪ್ರಕಾರ ತಾವು ಯಾವ ಒಂದು ಕಾನೂನು ತಂದು ಅಧಿಕಾರ ಬದಲಾವಣೆ ಮಾಡಿದ್ದೀರಿ ಇದರಂತೆ ನಮ್ಮ ದೇಶದಲ್ಲಿ ಉದ್ಭವಿಸಿರತಕ್ಕಂತಹ ಎರಡು ಲಕ್ಷ ಚಿಲ್ಲರೆ ಕೇಸುಗಳು ಟ್ರಿಬ್ಯೂನಲ್ಲಿ ಏನಿವೆ ಆ ಕೇಸುಗಳನ್ನು ನೀವು ಹೇಳಿದ ಪ್ರಕಾರ ನಾಲ್ಕು ವರ್ಷಗಳಾದರೂ ಕೊಡ ತೀರ್ಮಾನ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಮಗೆ ಎಚ್ಚರಿಕೆಯನ್ನು ಕೊಡುತ್ತೇನೆ. ತಾವು ಟ್ರಿಬ್ಯೂನಲುಗಳನ್ನೂ ಇಟ್ಟು ಕೊಳ್ಳಬೇಕಾಗಿದೆ. ಟ್ರಿಬ್ಯೂನಲ್ ಇಟ್ಟುಕೊಂಡರೂ ಕೋರ್ಟಿಗೂ ಅಧಿಕಾರ ಕೊಡತಕ್ಕದ್ದು ಅಗತ್ಯವೆಂದು ಕಂಡು ಬಂದರೆ, ಕೋರ್ಟಿಗೂ ಅಧಿಕಾರ ಕೊಡಬೇಕಾಗುತ್ತದೆ. ಆ ರೀತಿ ಮಾಡುವುದರಿಂದ ಎಲ್ಲಾ ಕಡೆಗಳಲ್ಲೂ ಹಾಲಿ ವ್ಯಾಜ್ಯಗಳನ್ನು ಬೇಗ ಬೇಗ ಬಗೆಹರಿಸುವುದಕ್ಕೆ ಸಾಧ್ಯವಾದೀತು ಎಂದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯದಲ್ಲಿ, ಈ ಭೂಸುದಾರಣೆ ಕಾನೂನನ್ನು ನಮ್ಮ ದೇಶದಲ್ಲಿ ೧೯೭೦ರಲ್ಲಿ ಅಥವಾ ೧೯೭೧ಕ್ಕೊರಗಾದರೂ ಸಂಪೂರ್ಣವಾಗಿ ಜಾರಿಗೆ ತರತಕ್ಕಂತದ್ದು ಅಗತ್ಯವೆಂದು ತಿಳಿಸುತ್ತೇನೆ. ಮಾನ್ಯ ರೆವೆನ್ಯೂ ಮಂತ್ರಿಯವರು ಸರ್ಕಾರದ ಪರವಾಗಿ ಇದನ್ನು ಮಾಡಲು ೪-೫ ವರ್ಷವಾದರೂ ಬೇಕಾಗುತ್ತದೆ ಎಂದು ಹೇಳುತ್ತಾರೆ. ಇದರಲ್ಲಿ ವ್ಯಾಜ್ಯಗಳನ್ನು ಬಗೆಹರಿಸಬೇಕಾದರೆ. ಮತ್ತು ಭೂಸುಧಾರಣೆಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕಾದರೆ ಬಹಳ ಸಮಯ ಬೇಕಾಗುತ್ತದೆಂದು ಹೇಳುತ್ತಾರೆ. ಈಗ ಇವರು ಇಷ್ಟು ವರ್ಷವಾದರೂ ಏನು ಮಾಡಿದ್ದಾರೆ? ಮತ್ತೆ ೪-೫ ವರ್ಷವೆಂದು ಹೇಳುವುದಾದರೆ, ಆ ಸಮಯದಲ್ಲೂ ಆಗುತ್ತದೆಯೇ ಎಂಬ ಶಂಕೆ ಬರುತ್ತದೆ. ಈಗ ಎಲ್ಲಾ ಟ್ರಿಬ್ಯೂನಲ್ಸನ್ನು ತೆಗೆದಿರತಕ್ಕದ್ದು ದುರುದ್ದೇಶದಿಂದ ಅಲ್ಲದಿದ್ದರೂ, ಮಾನ್ಯ ಸಚಿವರು ಇದನು ಏನಾದರೂ ಹಣ ಉಳಿಸುವುದಕ್ಕೆ ಮಾಡಿದರೇ? ಕೆಲಸ ಬೇಗ ಬೇಗ ಆಗುತ್ತವೆಂದು ಮಾಡಿದರೆ? ನಾನು ಈಗಲಾದರೂ ಹೇಳುತ್ತೇನೆ. ಇರತಕ್ಕ ಅಧಿಕಾರವನ್ನು ಕೋರ್ಟಿಗೆ ಕೊಡಬೇಕೆಂದು ಏನು ಮಾಡಿದ್ದೀರಿ, ತಮ್ಮ ಅಭಿಪ್ರಾಯದಲ್ಲಿ ಇದರಬಗ್ಗೆ ಏನು ಹೇಳುತ್ತಿದ್ದೀರಿ, ಅದರ ಸುಪೂರ್ಣವಾದ ಮಾಹಿತಿಯನ್ನು ತರಿಸಿಕೊಂಡು ನೋಡಿ.

(ಶ್ರೀ ಡಿ. ದೇವರಾಜ ಅರಸ್)

ತಪ್ಪು ಅಭಿಪ್ರಾಯದಲ್ಲಿ ಅದು ಸರಿಯಾಗಿದೆಯೇಯೆಂದು ನೋಡಿ. ಕೆಲವು ಕೋರ್ಟುಗಳಲ್ಲಿ ಕೆಲಸ ವಿಲ್ಲದೆ ಇರತಕ್ಕ ವಿಚಾರವೂ ಉಂಟು. ಅನೇಕ ಕಡೆ ಕೋರ್ಟುಗಳಲ್ಲಿ ಮೂರು ನಾಲ್ಕು ವರ್ಷಗಳಾದರೂ ಅನೇಕ ಕೇಸುಗಳನ್ನು ಫೈಸಲ್ ಮಾಡದೆ ಇರತಕ್ಕ ಅನೇಕ ನಿದರ್ಶನಗಳು ಇವೆ. ಹೀಗಿರಬೇಕಾದರೆ ಗೇಣೀದಾರರಿಗೂ ಮಾಲೀಕದಾರರಿಗೂ ಒಪ್ಪಂದವಾಗದೇ ಸಾವಿರಾರು ಕೇಸುಗಳು ಮತ್ತೆ ಮತ್ತೆ ಮುನ್ಸೀಫ್ ಕೋರ್ಟುಗಳಿಗೆ ಹೋಗುತ್ತದೆ ಅದನ್ನು ಹಾಗೆ ಮಾಡದೆ ಅವನ್ನು ಪುನರ್ಪರಿಶೀಲನೆ ಮಾಡುವುದು ಯೋಗ್ಯ. ೪-೫ ವರ್ಷಗಳಾದರೂ ಅವನ್ನು ಪೂರೈಸುವುದಕ್ಕೆ ಆಗುವುದಿಲ್ಲವೆಂದು ಪ್ರತಿಸಾರಿಯೂ ಮಂತ್ರಿಗಳು ಹೇಳುತ್ತಾರೆ. ಈ ರೀತಿ ಆದರೆ ಸುಧಾರಣೆಯ ಕಾನೂನು ಈ ದೇಶದಲ್ಲ ಜಾರಿಗಿ ಬರುವುದಿಲ್ಲ ಮತ್ತೆ ನಮ್ಮ ದೇಶದಲ್ಲಿ ಎಷ್ಟು ಜನ ಹಿಡುವಳಿದಾರರು ಇದಾರೆ, ಎಷ್ಟು ಭೂಮಿ ಪ್ಯಪಸಾಯಕ್ಕ ಇದೆ. ಅದನ್ನು ದಾಮಾಷಾ ಪ್ರಕಾರ ಲೆಕ್ಕ ಹಾಕಿ ನೋಡಿದರೆ ತಲಾ ಒಂದಕ್ಕೆ ಒಂದೆರಡು ಎಕರೆಯಷ್ಟು ಬರುತ್ತದೆಂದು ಮಾನ್ಯ ಶ್ರೀ ಗೋಪಾಲಗೌಡರು ಹೇಳಿದರು. ಕಾನೂನು ಮಾಡುವಂಥ ಕಾಲದಲ್ಲಿ ಇದರ ಬಗ್ಗೆ ಗರಿಷ್ಠ ಪರಿಮಿತಿ ೨೭ ಎಕರೆಯಿಂದ ೨೧೬ ಎಕರೆಗಳವರಗೆ ಸೀಲಿಂಗ್ ಲಿಮಿಟ್ ಇಟ್ಟಿದ್ದಾರೆ. ಅಂದ ಮೇಲೆ ಖಾಸಗೀ ಜಮೀನು ೨೧೬ ಎಕರೆಗಳಿಗಿಂತ ಮೇಲ್ಪಟ್ಟು ಯಾದ ಒಂದು ಕುಟುಂಬಕ್ಕೂ ಇರುವುದಕ್ಕೆ ಸಾಧ್ಯವಿಲ್ಲವೆಂಬುದಾಗಿ ಒಂದು ಲಿಮಿಟ್ ಹಾಕಿದ್ದಾರೆ. ನಮ್ಮ ಅನುಭವದ ಪ್ರಕಾರ ಈ ಪರಿಮಿತಿಯನ್ನು ಬದಲಾವಣೆಮಾಡುವುದು ಒಳ್ಳೆಯದು. ಅದನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂಬುದು ಮುಖ್ಯ. ಅದನ್ನು ಇನ್ನೂ ಹೆಚ್ಚಿಬೇಕೆಂದಲ್ಲ. ಇಪತ್ತು ದೇಶದಲ್ಲಿ ಜನಬಾಹುಳ್ಯ ಕೋಟಿಗಟ್ಟಲೆ ಏರುತ್ತಿರುವಾಗ, ಜಮೀನನ್ನು ಜಾಸ್ತಿಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವಾಗ, ನಿಮ್ಮ ಕಾನೂನು ಸಂಪೂರ್ಣವಾಗಿ ಜಾರಿಕ್ಕ ಬಾರದೇ ಇರುವ ಸನ್ನಿವೇಶದಲ್ಲಿ, ನನ್ನ ನಿರ್ದಿಷ್ಟವಾದ ಸಲಹೆ ಏನೆಂದರೆ, ಈಗ ಕಾನೂನಿನಲ್ಲಿರತಕ್ಕ ಗರಿಷ್ಠ ಪರಿಮಿತಿಯನ್ನು ಕಡಿಮೆಮಾಡಬೇಕು. ಇನ್ನು ಬೇರೆಬೇರೆ ಪ್ರಾಂತಗಳಲ್ಲಿರತಕ್ಕ ಪರಿಮಿತಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಕೇರಳಾದಲ್ಲಿ ಬಹಳ ಕಡಿಮೆ ಇದೆ ತಮಿಳುನಾಡು ಮತ್ತು ಮಹಾರಾಷ್ಟ್ರದ ಪರಿಮಿತಿಗೂ, ನಮ್ಮ ದೇಶದ ಪರಿಮಿತಿಗೂ ಹೋಲಿಸಿ ನೋಡಿದಾಗ ನಮ್ಮದು ೧:೨ ಪ್ರಮಾಣದಲ್ಲಿ ಆಂದರೆ ಅಲ್ಲಿ ೫೦ ಇದ್ದರೆ ನಮ್ಮಲ್ಲಿ ೧೦೦ ಎಕರೆ ಇದ್ದಹಾಗ ಇದೆ. ಇದನ್ನು ಗಮನಿಸಬೇಕು. ನಮ್ಮ ಮೈಸೂರು ಸಂಸ್ಥಾನದಲ್ಲಿ ೨೧೬ ಎಕರೆ ಗರಿಷ್ಠ ಪರಿಮಿತಿ ಏನಿದೆಯೋ ಅದನ್ನು ೧೦೦ ಎಕರೆಗಳವರೆಗೆ ಇಳಿಸಿದರೆ ಒಳ್ಳೆಯದು. ಇವತ್ತಿನದಿವಸ ನಾವು ಆಧುನಿಕ ರೀತಿಯಲ್ಲಿ ವ್ಯವಸಾಯಮಾಡುವ ಸನ್ನಿವೇಶದಲ್ಲಿ ಇರುವಾಗ ವಿದ್ಯುಚ್ಛಕ್ತಿ ಮತ್ತು ಫರ್ಟಿಲೈಜರ್ಸ್ ಮತ್ತು ಸುಧಾರಿಸಿದ ಬೀಜಗಳನ್ನು ಉಪಯೋಗಿಸುವ ಸನ್ನಿವೇಶದಲ್ಲಿರುವಾಗ, ಭೂಮಿಯೊಳಗಿನ ನೀರನ್ನು ಎತ್ತಿ ವ್ಯವಸಾಯಮಾಡವಾಗ, ಯಾವುದೋ ಒಂದು ಓಬೀರಾಯನ ಕಾಲದ ಕಾನ್‌ಸೆಪ್ಟ್‌ಗೆ ಅನುಸಾರವಾಗಿ ಹೋಗುವುದು ಸರಿಯಲ್ಲ ಹಿಂದೆ ೨೦೦ ಎಕರೆ ಇದ್ದರೆ ಸಾಕು ಎಂದು ಹೇಳುತ್ತಿದ್ದರು. ಮಳೆ ಇಲ್ಲದಿದ್ದರೆ ಜೀವನ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದರು. ಈಗ ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಈಗ ಆಧುನಿಕ ಸೌಲಭ್ಯಗಳು ಸಿಗುವಾಗ ದೊಡ್ಡ ಪ್ರಮಾಣದಲ್ಲಿ ಒಂದೊಂದು ಕುಟುಂಬಕ್ಕೆ ಪರಿಮಿತಿ ಇಡುವುದು ಸರಿಯಲ್ಲ. ಆದ್ದರಿಂದ ನಮ್ಮ ಜನಸಂಖ್ಯೆ ಪರಿಮಿತಿಯನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಇಡೀ ಇಂಡಿಯಾದೇಶದಲ್ಲಿ ಒಂದೆರಡು ವಿಷಯಗಳನ್ನು ನಾವು ಮುಖ್ಯವಾಗಿ ಭೂಸುಧಾರಣೆಯ ಸಂಬಂಧದಲ್ಲಿ ಯೋಚನೆ ಮಾಡ ಬೇಕಾಗಿದೆ .ನಾವು ಯಾವರೀತಿ ಗರಿಷ್ಠ ಪರಿಮಿತಿಯನ್ನು ಯೋಚನೆ ಮಾಡುತ್ತಿದ್ದೇವೋ ಹಾಗೆಯೇ ಕನಿಷ್ಠ ಪರಿಮಿತಿಯನ್ನು ಯೋಚನೆ ಮಾಡಬೇಕೆಂಬುದೇ ನನ್ನ ಅಭಿಪ್ರಾಯ. ಅನೂಚಾನವಾಗಿ ಒಂದಿರತಕ್ಕ ನಮ್ಮ ಕುಟುಂಬ ಪದ್ಧತಿ ಪ್ರಕಾರ, ಹಣವನ್ನಾಗಲೀ ಆಸ್ತಿಯನ್ನು ಭಾಗಮಾಡಿಕೊಂಡು ಹೋಗಿ ಅನೇಕ ಸಂದರ್ಭಗಳಲ್ಲಿ ಅರ್ಧ ಎಕರೆ, ಕಾಲು ಎಕರೆ, ಭೂಮಿ ಹಂಚಿಕೆಯಾಗಿ ವ್ಯವಸಾಯಮಾಡುವವರಿಗೆ ತೊಂದರೆಯಾಗುತ್ತಿದೆ. ೧೯೫೮ನೇ ಇಸವಿಯಲ್ಲಿ ಜತ್ತಿ ಸಮಿತಿಯವರು ನಮ್ಮ ದೇಶದಲ್ಲಿ ಎಷ್ಟು ಪಟ್ಟಾದಾರರು ಇದ್ದರು, ಎಷ್ಟು ಹಿಡುವಳಿದಾರರು ಇದ್ದರು ಎಂಬ ಬಗ್ಗೆ ಒಂದು ಲೆಕ್ಕ ಕೊಟ್ಟಿದಾರೆ. ನಾನು ಅನೇಕಸಾರಿ ಸರ್ಕಾರದವರನ್ನು ಕೇಳುತ್ತಿದ್ದೇನೆ. ಹಿಂದೆ ಮಾಡಿದಂಥ ಲೆಕ್ಕ ಏನಿದೆ, ಈಗ ೧೧-೧೨ ವರ್ಷಗಳಿಂದೀಚೆಗೆ ಮಾಡಿದಂಥ ಪಟ್ಟಿ ಎಷ್ಟಿದೆ ಎಂಬುದನ್ನು ನೋಡಬೇಕು. ೫ ಎಕರೆಯೊಳಗೆ ಇರುವ ಪಟ್ಟಾದಾರರು ಮತ್ತು ೧೦ ಎಕರೆಯೊಳಗೆ ಇರುವ ಪಟ್ಟಾದಾರರು ಎಷ್ಟೆಂದು ಕೇಳಿದರೆ ಅವರಿಗೆ ಈ ಒಂದು ಆಧಾರ ಬಿಟ್ಟು ಬೇರೆ ಏನೂ ಇಲ್ಲ. ನಾನು ತಿಳಿದುಕೊಂಡಿರುವ ರೀತಿಯಲ್ಲಿ ೧೯೫೮ರಲ್ಲಿನೇ ಇಸವಿಯಲ್ಲಿ ೨೫ ಲಕ್ಷಲ್ಲ ಪಟ್ಟಾದಾರರು ಇದ್ದುದು ಈಗ ೪೧ ಲಕ್ಷಕ್ಕೆ ಏರಿದೆ. ಆ ರೀತಿಯಲ್ಲಿ ಹಂಚಿಕೆಯಾಗಿದೆ. ಸರ್ಕಾರದ ಭೂಮಿಯನ್ನು ಸಾಗುವಳಿಗಾಗಿ ಕೊಡುತ್ತಿದ್ದಾರೆ. ಇನ್ನೊಂದು ಕಡೆ ಭೂಸುಧಾರಣೆ ಕಾನೂನನ್ನು ಎಷ್ಟು ದಿವಸಗಳಾದರೂ ಜಾರಿಗೆ ತರದೇ ಇರುವ ಪ್ರಯುಕ್ತ ಅನೇಕರು ಭೂಮಿಯನ್ನು ಸಣ್ಣ ಸಣ್ಣದಾಗಿ ಹಂಚಿಕೊಂಡು ಭೂಸುಧಾರಣೆ ಕಾನೂನಿನ ಪರಿಮಿತಿಯೊಳಗೆ ಇರುವಂತೆ ಮಾಡಿಕೊಂಡಿದ್ದಾರೆ. ಇವೆಲ್ಲವೂ ಸೇರಿ ೪೦ಲಕ್ಷ ಹಿಡುವಳಿದಾರರು ಆಗಿದ್ದಾರೆ, ನಮ್ಮಲ್ಲಿರತಕ್ಕ ೪೦ ಲಕ್ಷ

ಹಿಡುವಳಿದಾರರ ಪೈಕಿ ೨೦ ಲಕ್ಷ ಹಿಡುವಳಿದಾರರು ಅಂದರೆ ಸೇಕಡ ೫೧ರಷ್ಟು ಜನ ಐದು ಎಕರೆ ಯೊಳಗೆ ಒಳಪಟ್ಟು ಭೂಮಿಯನ್ನು ಪಡೆದವರು ಇದ್ದಾರೆ. ಸುಮಾರು ಸೇಕಡ ೭೫ಭಾಗ ಜನರು ಜಮೀನಿನ ಮೇಲೆ ಕೆಲಸಮಾಡುವವರು ಇದ್ದಾರೆ. ಆದರ ಪೈಕಿ ಅರ್ಧ, ಒಂದು, ಮೂರು ಅಥವಾ ೫ ಎಕರೆ ಇರುವವರು ೪೦ ಲಕ್ಷ ಹಿಡುವಳಿದಾರರ ಪೈಕಿ ಅರ್ಧ ಇದ್ದಾರೆ. ಇದರಿಂದ ನಮ್ಮ ದೇಶದ ವ್ಯವಸಾಯ ಆಭಿವೃದ್ಧಿ ಯಾಗುವುದಕ್ಕೆ ಏನು ಸಹಾಯವಾಗುತ್ತದೆ? ಇನ್ನು ೧೦ ಎಕರೆಗಳೊಳಗೆ ಇರುವವರು ಸೇಕಡ ೨೧ರಷ್ಟು ಇದ್ದಾರೆಂದು ಹೇಳಿದರು. ೧೯೫೮ನೇ ಇಸವಿ ಲೆಕ್ಕದಲ್ಲಿ ಸುಮಾರು ಐದೂವರೆ ಲಕ್ಷ ಪಟ್ಟಾದಾರರು ಇದ್ದರೆ ಅದನ್ನು ದ್ವಿಗುಣಗೊಳಿಸಿದರೆ ೧೦ ಲಕ್ಷ ಜನರು ಇದ್ದಾರೆ. ಅಂದರೆ೧೦ ಎಕರೆ ಮತ್ತು ೫ ಎಕರೆಯೊಳಗೆ ಇರುವವರು ಸುಮಾರು ಸೇಕಡ ೬೦ರಷ್ಟು ಹಿಡುವಳಿದಾರರು ಇದರಲ್ಲಿ ಬರುತ್ತಾರೆ. ಇದರಲ್ಲಿ ಬಹುತೇಕ ಸೇಕಡ ೬೦ರಷ್ಟು ಹಿಡುವಳಿದಾರರು ಸಾಕಷ್ಟು ಭೂಮಿ ಇಲ್ಲದೆಯೇ ಇದ್ದಾರೆ ಶೇಕಡ ೯೦ ಭಾಗ ಅನಾಇಕನ್‌ಮಿಕ್ ಹೋಲ್ಡಿಂಗ್ಸ್ ಇಟ್ಟುಕೊಂಡಿರುವವರು ಇದ್ದಾರೆಂದು ನನ್ನ ಭಾವನೆ.

3-00 P.M.

ಈಗ ಇಂತಹ ಒಂದು ಪರಿಸ್ಥಿತಿಯಲ್ಲಿ ನನ್ನ ಅಭಿಪ್ರಾಯದಲ್ಲಿ ಕನಿಷ್ಟ ಪರಿಮಿತಿ ಎಂದರೆ ಇಷ್ಟು ಭೂಮಿಗಿಂತಲೂ ಕಡಿಮೆ ಯಾರಿಗೂ ಇರಬಾರದು ಎನ್ನುವ ಕಾನೂನನ್ನು ಬರೀ ಮೈಸೂರು ದೇಶದಲ್ಲಿ ಏಕೆ ಇಡೀ ಭಾರತ ದೇಶದಲ್ಲಿ ಮಾಡಬೇಕು. ಎರಡನೆಯದಾಗಿ ಒಂದು ಸಾರಿ ಯಾವುದಾದರೂ ಒಂದು ಎಕ್ನಾಮಿಕ್ ಹೋಲ್ಡಿಂಗ್ ಯೂನಿಟ್ ನಿಗದಿ ಮಾಡದೆ ಅದು ಪರಂಪರಾನುಗತವಾಗಿ ಒಡೆಯದ ರೀತಿಯಲ್ಲಿ, ಪುನಃ ಹಂಚಿಕೆ ಆಗಿದ್ದ ರೀತಿಯಲ್ಲಿ ಮುಂದುವರಿದರೆ ಮಾತ್ರ ನಮ್ಮ ದೇಶದಲ್ಲಿ ಕ್ರಾಂತಿಕಾರ ಬದಲಾವಣೆ ಮಾಡುವುದಕ್ಕೆ ಸಾಧ್ಯ. ನಮ್ಮ ದೇಶದಲ್ಲಿ ಹೆಚ್ಚುತ್ತಾ ಇರತಕ್ಕ ಜನಸಂಖ್ಯೆಗೆ ಅನುಗುಣವಾಗಿ ಬೆಳೆ ಅಭಿವೃದ್ಧಿಪಡಿಸುವುದಕ್ಕೆ ನಮ್ಮ ಮಾನ್ಯ ಆಗ್ರಿಕಲಚರಲ್ ಮಿನಿಸ್ಟರ್ ಗ್ರಿನ್ ರೆವಲ್ಯೂಷ್ನ್ ಎಂದು ಏನು ಹೇಳುತ್ತಿದ್ದಾರೆ ಆ ಗ್ರಿನ್ ರೆವಲ್ಯೂಷ್ನ್ ಬರಬೇಕಾದರೆ ಭೂಮಿ ಹಿಡುವಳಿ ಹಂಚಿಕೆಯಲ್ಲಿ ಪುನರ್‌ವ್ಯವಸ್ಥೆ ಧಾಟಿಯಲ್ಲಿ ಯೋಚನೆ ಮಾಡದೆ ಹೋದರೆ ಜನಸಂಖ್ಯೆ ಬೆಳೆಯುತ್ತಾ, ಜಾಸ್ತಿಯಾಗುತ್ತಾ, ಹೋದಹಾಗೆ ಆಹಾರ ಅಷ್ಟು ಪ್ರಮಾಣದಲ್ಲಿ ಬೆಳೆಯುವುದಕ್ಕಾಗುವುದಿಲ್ಲ ಎನ್ನುವ ವಿಚಾರವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಕಾನಸ್ಟಿಟ್ಯೂಷನ್ ಮತ್ತು ಕಾನೂನು ಅಡಚಣೆ ಬಂದರೂ ಬರಬಹುದು. ಹಿಡುವಳಿಯನ್ನು ಒಡೆಯದ ರೀತಿ ಮಾಡುವುದಕ್ಕೆ ಕಾನೂನಿನ ಅಡ್ಡಿ ಇದೆ ಎಂದು ಗೊತ್ತಾದರೆ ಕಾನೂನು ಬದಲಾವಣೆ ಮಾಡುವುದಕ್ಕೆ ಈ ಸಭೆಗೆ ಹಕ್ಕು ಇದೆ. ಈ ನೀತಿ ಭೂಸುಧಾರಣೆ ಮಾಡಬೇಕಾದರೆ, ನಮ್ಮ ದೇಶದಲ್ಲಿ ಅನೂಚಾನವಾಗಿ ಬಂದಿರತಕ್ಕ ಕಾನೂನು ಪದ್ಧತಿಯನ್ನು ಬದಲಾವಣೆ ಮಾಡಿ ಹಿಂದೂ ಕೂಡ ಬದಲಾವಣೆ ಮಾಡೋಣ. ಒಂದು ಕಾಲದಲ್ಲಿ ಒಬ್ಬ ಹೆಂಗಸಿಗಿಂತ ಹೆಚ್ಚಿಗೆ ಲಗ್ನ ಆಗಬಹುದು ಎಂದು ಇತ್ತು. ಈಗ ಒಬ್ಬರನ್ನೇ ಮದುವೆ ಮಾಡಿಕೊಳ್ಳಬೇಕೆಂದು ಇದೆ.

ಹಿಂದೆ ಹೆಣ್ಣು ಮಕ್ಕಳಿಗೆ ಮನುಧರ್ಮದ ರೀತಿ ಹಕ್ಕು ಇರಲಿಲ್ಲ. ಈಗ ಅವರಿಗೆ ಆಸ್ತಿಯಲ್ಲಿ ಹಕ್ಕು ಬರಬೇಕು ಎಂದು ಮಾಡಿದ್ದಾರೆ. ನಮ್ಮ ಸೆಕ್ಸೆಷ್ನ್ ಲಾ ಪ್ರಕಾರ ಪ್ರಾಪರ್ಟಿ ಡಿಸ್ಟ್ರಿಬ್ಯೂಷ್ನ್ ಈ ಮುಂಚೆ ಏನಿತ್ತು ಅದನ್ನು ಬದಲಾವಣೆ ಮಾಡಲಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ೧೯೪೨-೪೧ನೇ ಇಸವಿಯಲ್ಲಿ ಪಂಡಿತ ಜವಹರಲಾಲ್ ನೆಹರೂ ಮತ್ತು ಸುಭಾಷ್‌ಚಂದ್ರ ಭೋಸರು ಇರುವ ಕಾಲದಲ್ಲಿ ಕಾನೂನು ಬದಲಾವಣೆ ಮಾಡದಹೋದರೆ ನಮ್ಮ ದೇಶದಲ್ಲಿ ಯಾವ ಭೂ ಸುಧಾರಣೆಯಿಂದಲೂ ಏನೂ ಪ್ರಯೋಜನವಾಗುವುದಿಲ್ಲ ಎಂದು ೨೫-೩೦ ವರ್ಷಗಳ ಹಿಂದೆ ಹೇಳಿದ್ದರು. ಸ್ವರಾಜ್ಯ ಬಂದಮೇಲೆ ಭೂ ಸುಧಾರಣೆಯ ಹೆಸರನ್ನು ಹೇಳುತ್ತಿದ್ದೇವೆಯೇ ಹೊರತು ಮೂಲತಃ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಸುಧಾರಣೆ ಮಾಡುವುದಕ್ಕೆ ಪ್ರಯತ್ನಮಾಡುತ್ತಾ ಇಲ್ಲ. ಇದನ್ನು ಹೇಳುವಾಗ ಇಷ್ಟೊಂದು ಎಕ್ನಾಮಿಕ್ ಹೋಲ್ಡಿಂಗ್ಸ್ ಇರಬೇಕಾದರೆ, ಕಂದಾಯದ ವಿಚಾರದಲ್ಲಿ ಸುಧಾರಣೆಗಳು ಏನೇನು ಆಗುತ್ತಾ ಇವೆ ಎನ್ನುವುದನ್ನು ತಾವು ಎಲ್ಲಾ ಕಡೆ ನೋಡುತ್ತಾ ಇದ್ದೀರಿ. ೧೯೫೭ನೇ ಇಸವಿಯ ಮಹಾ ಚುನಾವಣೆ ಕಾಲದಲ್ಲಿ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳು ಆಗಿ ಇದ್ದಂಥ ಕ್ಯಾಬಿನೆಟ್ಟಿನ ಕಾಲದಲ್ಲಿ ನಾವು ಒಂದು ಘೋಷಣೆಯನ್ನು ಹೊರಡಿಸಿದ್ದೆವು. ಈಗ ಇರತಕ್ಕ ಕಂದಾಯದ ಪದ್ಧತಿಯನ್ನು ರದ್ದುಮಾಡಿ ಇದಕ್ಕೆ ಬೇರೆ ಪದ್ಧತಿ ತರುತ್ತೇವೆ, ಈಗಿನ ಪದ್ಧತಿಯಿಂದ ಎಲ್ಲಾ ಹಿಡುವಳಿದಾರರಿಗೆ ತುಂಬಾ ತೊಂದರೆ ಯಾಗುತ್ತದೆ ಎಂದು ಹೇಳಿದ್ದೆವು. ೧೯೬೭ರಲ್ಲೂ ಕೂಡ ಅದೇ ರೀತಿ ಹೇಳಿದ್ದೆವು. ಈಗ ನಾವು ತಮ್ಮನ್ನು ಅರಿಕೆ ಮಾಡಿಕೊಳ್ಳುವುದು ಹಿಂದೆ ಏನು ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅದನ್ನು ಜಾರಿಗೆ ತರುವುದಕ್ಕೆ ತೀವ್ರ ಪ್ರಯತ್ನ ಮಾಡಿದರೆ ಮಾನ್ಯ ಸಭೆಯಲ್ಲಿ ತಮಗೆ ಸಂಪೂರ್ಣ ಬೆಂಬಲ ನೀಡುತ್ತೇವೆ ಎಂದು ಭರವಸೆ ಕೊಡುತ್ತೇನೆ.

(ಶ್ರೀ ಡಿ. ದೇವರಾಜ ಅರಸ್)

ಹಿಂದೆ ಹೇಳಿದುಥ ಆಶ್ವಾಸನೆಗಳನ್ನು ತಮ್ಮ ಗಮನಕ್ಕೆ ಮತ್ತೆ ತರುತ್ತಿದ್ದೇನೆ. ಉತ್ತರ ಪ್ರದೇಶದಲ್ಲಿ ೬ ಎಕರೆಗೆ ಒಳಪಟ್ಟಿರುವ ಹಿಡುವಳಿದಾರರಿಗೆ ಕಂದಾಯ ರದ್ದು ಮಾಡೋಣ ಎಂದು ತೀರ್ಮಾನ ತೆಗೆದು ಕೊಂಡಿದ್ದಾರೆ. ಹಾಗೆಯೇ ಬಿಹಾರದಲ್ಲಿಯೂ ತೀರ್ಮಾನ ತೆಗೆದುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿಯಾದರೂ ಕೂಡ ಇನ್ನೂ ಸಂಪೂರ್ಣವಾಗಿ ಈಗ ಇರತಕ್ಕ ರೈತವಾರಿ ಪದ್ಧತಿ ಮೇಲೆ ಕಂದಾಯ ವಸೂಲು ಮಾಡುತ ಇದ್ದಾರೆ. ಈ ಪದ್ಧತಿಯನ್ನು ತಪ್ಪಿಸುವುದಕ್ಕೆ ಸಂಪೂರ್ಣವಾಗಿ ಸಾಧ್ಯವಿಲ್ಲದೆ ಹೋದರೂ ಐದು ಎಕರೆಗೆ ಒಳಪಟ್ಟು ಇರುವ ಹಿಡುವಳಿದಾರರಿಗೆ ಕಂದಾಯ ನಾವು ತೆಗೆದುಕೊಳ್ಳುವುದು ಬೇಡ ಅದನ್ನು ರದ್ದು ಮಾಡೋಣ. ಈ ನೀತಿಯನ್ನು ತರುವುದಕ್ಕೆ ಯಾಕೆ ಸಾಧ್ಯವಾಗುವುದಿಲ್ಲ? ಇದರಿಂದ ಸಣ್ಣ ಹಿಡುವಳಿ ದಾರರಿಗೆ ಎಷ್ಟೋ ಸುಧಾರಣೆ ಆದೀತು ಉಪಯೋಗವೂ ಆದೀತು. ಅವರ ಮನಸ್ಸಿಗೆ ನೆಮ್ಮದಿ ಆದೀತು. ಈಗ ಇರತಕ್ಕ ಕಿರುಕುಳದಿಂದ ತಪ್ಪಿಸಿಕೊಳ್ಳಬಹುದು, ಈ ವಿಚಾರವನ್ನು ತೀವ್ರವಾಗಿ ಗಮನಿಸಬೇಕು. ಹಾಗೆ ಮಾಡುವುದರಿಂದ ದೇಶದಲ್ಲಿ ಇನ್ನೂ ಬಹಳ ಬಡವರಾಗಿರತಕ್ಕ ಮತ್ತು ಮಳೆಯನ್ನೇ ನೆಚ್ಚಿಕೊಂಡು ತೊಂದರೆಪಡತಕ್ಕ ಲಕ್ಷಾಂತರ ಹಿಡುವಳಿದಾರರಿಗೆ ಅನುಕೂಲವಾಗುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಳ್ಳ ಬೇಕು. ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಗ್ಗೆ ಗಣನೀಯವಾಗಿ ವಿಚಾರ ಮಾಡುತ್ತಿದ್ದಾರೆ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದರಿಂದ ಆಗತಕ್ಕ ತೊಂದರೆ ಏನಿದೆ ಎನ್ನುವುದನ್ನು ಅನೇಕ ಸಂದರ್ಭಗಳಲ್ಲಿ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ತೊಂದರೆ ಏನೆಂದರೆ ಎಲ್ಲಾ ಹಿಡುವಳಿದಾರರು ಲೆಕ್ಕಪತ್ರಗಳನ್ನು ಇಡುವುದಕ್ಕೆ ಸಾಧ್ಯವಾಗುವುದಿಲ್ಲ, ಅದರಿಂದ ಕಿರುಕುಳವಾಗುತ್ತದೆ. ಅದೇ ಒಂದು ದೊಡ್ಡ ಅಡಚಣೆ. ಈಪೊತ್ತು ಆಧುನಿಕ ಪ್ರಪಂಚದಲ್ಲಿ ರೈತನಿಗೆ ಕಂದಾಯ ಹಾಕಿ ವಸೂಲು ಮಾಡುವುದು ಶಾಸ್ತ್ರೀಯಪದ್ಧತಿ ಅಲ್ಲ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದು ಒಂದು ಶಾಸ್ತ್ರೀಯ ವಾದ ಪದ್ಧತಿ. ಎಲ್ಲಾ ತಜ್ಞರು ಒಪ್ಪಿರತಕ್ಕ ಮತ್ತು ಒಂದು ಆಧಾರದ ಮೇಲೆ ಹಾಕತಕ್ಕ ಪದ್ಧತಿ ಬೇಡ ಎಂದು ಹೇಳುವುದು ಸರಿಯಲ್ಲ. ಆದರಲ್ಲಿಯೂ ೂ ಕೂಡ ಕನಿಷ್ಟಪಕ್ಷದ ಪ್ರಮಾಣದ ಆದಾಯ ಬರತಕ್ಕವಾದರೆ ಉದಾಹರಣೆಗೆ ೧೦ ಎಕರೆ ೫೦ ಎಕರೆ ಖುಷ್ಕಿ ಜಮೀನಿಗೆ ಅಷ್ಟೊಂದು ಹೆಚ್ಚಿಗೆ ಇನ್‌ಕಂಟ್ಯಾಕ್ಸ್ ಕೊಡತಕ್ಕ ಲಾಭ ಬರುವುದಿಲ್ಲ ಎಂದು ತಿಳಿದು ಇವರನ್ನು ಬಿಟ್ಟು ಬಿಟ್ಟು ಬೇರೆಯವರಿಗೆ ಹಾಕುವುದಕ್ಕೆ ಸಾಧ್ಯವಿದೆ. ನಮ್ಮಲ್ಲಿ ಲೆಕ್ಕ ಇಡುವುದಿಲ್ಲ ಎನ್ನುವುದೇ ದೊಡ್ಡ ಕಾರಣವಾಗಿ ಇಟ್ಟುಕೊಂಡು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದು ಬೇಡ ಎಂದು ಹೇಳುವುದು ಸೂಕ್ತ ಆಗಲಿಕ್ಕಿಲ್ಲ. ಇದನ್ನು ಗಮನಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಸಲಹೆ ತಮ್ಮ ಗಮನಕ್ಕೆ ತರುತ್ತೇನೆ. ಕೇವಲ ಇನ್‌ಕಂ ಟ್ಯಾಕ್ಸ್ ತೆಗೆದುಕೊಂಡರೆ ಬಾಕಿ ಬಿಟ್ಟುಬಿಡಿ ಎಂದು ಹೇಳುತ್ತಾ ಇಲ್ಲ. ಯಾವ ಒಂದು ಕ್ಷೇತ್ರದಲ್ಲಿ ತಾವು ತೆಗೆದುಕೊಂಡೂ ಕೂಡ ಪ್ರಾಡ್ಯೂಸ್ ಮಾಡುವ ವಸ್ತುವಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಮ್ಯಾನೇಜಿಯಲ್ ಕಾಸ್ಟ್ ಎಷ್ಟು ರಾಮೆಟೀರಿಯಲ್ ಕಾಸ್ಟ್ ಎಷ್ಟು ಇದನ್ನೆಲ್ಲಾ ಗಮನದಲ್ಲಿ ತೆಗೆದುಕೊಂಡು ಪ್ರೈಸ್ ಫಿಕ್ಸ್ ಮಾಡುತ್ತಾರೆ. ಹಾಗೆಯೇ ವ್ಯವಸಾಯ ಕ್ಷೇತ್ರದಲ್ಲಿ ರಾಗಿ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ, ಭತ್ತ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂದು ತಿಳಿದುಕೊಂಡು ಅದರ ಮೇಲೆ ಒಂದು ಧಾರಣೆ ಫಿಕ್ಸ್ ಮಾಡುವ ಪದ್ಧತಿ ಇಷ್ಟು ವರ್ಷಗಳಾದರೂ ಮೈಸೂರು ದೇಶದಲ್ಲಿ ಮಾತ್ರ ಬಂದಿಲ್ಲ. ಇಡೀ ಭಾರತ ದೇಶದಲ್ಲಿ ವ್ಯವಸಾಯ ಕ್ಷೇತ್ರದಲ್ಲಿಲ್ಲಿ ಮಾಡತಕ್ಕ ಬೆಳೆಗೆ ಎಷ್ಟು ಖರ್ಚಾಗುತ್ತದೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾದೀತು ಎಂದು ಲೆಕ್ಕಾಚಾರ ಹಾಕಿ ಅದರ-ಮೇಲೆ ಬೆಲೆಯನ್ನು ನಿಗದಿ ಮಾಡುವ ಪದ್ಧತಿಯನ್ನು ತರುವುದಕ್ಕೆ ಸಾಧ್ಯವಾಗಿಲ್ಲ.

ಇದರ ಬಗ್ಗೆ ತೀವ್ರ ಚಿಂತನೆ ಮಾಡಬೇಕಾಗಿದೆ ಈ ವರ್ಷ ತಮಗೆ ಗೊತ್ತಿರುವ ಹಾಗೆ ಹೈಬ್ರಿಡ್ ಜೋಳ ಬೆಳೆದಂಥವರಿಗೆ ಮಾರುಕಟ್ಟೆಯಲ್ಲಿ ಮಾರಿದಂತಹ ಬೆಲೆಗಿಂತ ಹೆಚ್ಚು ಬೆಲೆ ಸಿಕ್ಕಲಿಲ್ಲ. ಬಹಳ ಸುಲಭವಾದ ಬೆಲೆಗೆ ಕೊಡಬೇಕಾಯಿತು. ಬೆಲೆ ಬಹಳ ಕೆಳಗೆ ಬಿದ್ದುಹೋಯಿತು. ಮಿನಿಮಂ ಪ್ರೈಸ್ ಅಂತ ಮಾಡಿದ್ದರೂ ಸುಧಾರಣೆಯಾದಂತಹ ಪ್ರೈಸ್ ಸಿಕ್ಕಲಿಲ್ಲ. ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಇನ್‌ಕಂ ಟ್ಯಾಕ್ಸ್ ಹಾಕಬೇಕು ಅಂತ ಅನ್ನುವಾಗ ನನ್ನ ಸಲಹೆಯಾದರೂ ಏನೆಂದರೆ ಅದರ ಜೊತೆಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇದು ಇಂಡಿಯಾ ಸರ್ಕಾರಕ್ಕೆ ಸೇರಿದ ನೀತಿ ನಾವೇನು ಮಾಡೋಣ ಎಂದು ಹೇಳಬಹುದು. ಇಂಡಿಯಾ ಸರ್ಕಾರಕ್ಕೆ ಸೇರಿದ ನೀತಿಯೇ ಆದರೂ ಕೂಡ ನಿಮ್ಮ ಭಾಗದ ಕರ್ತವ್ಯ ನೀವು ಏನು ಮಾಡಬೇಕು? ತಾವು ಆಗಾಗ್ಗೆ ಹೋಗತಕ್ಕ ಕಾನ್‌ಫರೆನ್ಸ್‌ಗಳಲ್ಲಿ ಆಗಲಿ, ಈ ಸಭೆಯ ಠರಾವಿನ ಮೂಲಕವಾಗಲಿ ಈ ವಿಷಯದ ಕಡೆಗೆ ತೀವ್ರ ಗಮನ ಕೊಡುವುದು ಸೂಕ್ತ. ವಾಟರ್ ರೇಟ್ ವಿಚಾರ ಶ್ರೀಮಾ ಗೋಪಾಲಗೌಡರು ಈಗ ಹೇಳಿದರು. ಇದು ಹಿಂದೆ ಇರಲೇ ಇಲ್ಲ ಈಗ ಬಿಟ್ಟುಬಿಡುವುದು ಒಳ್ಳೆಯದು, ಮಳೆಯಿಂದ ನೀರು ಉಪಯೋಗ ಮಾಡಿದರೆ, ಕೆರೆಗಳಿಂದ ಉಪಯೋಗ ಮಾಡಿದಂತಹ ನೀರಿಗೆ ವಾಟರ್ ರೇಟ್ ಸಂಪೂರ್ಣವಾಗಿ ಬಿಡುವ ರೀತಿಯಲ್ಲಿ

ಹೇಳಿದ್ದಾರೆ. ಇದರಲ್ಲಿ ಅವರು ಹೇಳಿದ ಮಾತಿಗೆ ಸ್ವಲ್ಪ ಬದಲಾವಣೆ ಮಾಡುವುದಕ್ಕೆ ಇಷ್ಟಪಡುತ್ತೇನೆ: ವಾಟರ್ ರೇಟ್ ವಸೂಲು ಮಾಡಬಾರದಾಗಿತ್ತು, ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದು ಹೇಳುವುದು ನಮಗಾದರೂ ಅಷ್ಟು ಸರಿಯಾಗಿ ಕಾಣುವುದಿಲ್ಲ. ನಮಗೆ ಗೊತ್ತಿರುವ ಹಾಗೆ ಈ ನೀರಾವರಿ ಉಪಯೋಗ ಮಾಡತಕ್ಕ ಜನರ ಸಂಖ್ಯೆ ಕಡಿಮೆ ಭಾಗ ಇದೆ, ಶೇಕಡ ೭೦ ಜನ ನೀರಾವರಿ ಸೌಲಭ್ಯ ಇಲ್ಲದೆ ಡ್ರೈ ಕಲ್ಟಿವೇಷ್ ಮೇಲೆ ಆಧಾರವಾಗಿದ್ದಾರೆ. ಉದಾಹರಣೆಗೆ ಪ್ರಕೃತಿಯ ಸಹಾಯ ಗಳಿಸಿರುವ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ೭೦-೮೦ ಇಂಚು ಮಳೆ ಬಂದರೆ, ಕೋಲಾರ ಅಥವಾ ಇನ್ನಾವುದಾದರೂ ಮೈದಾನ ಪ್ರದೇಶದಲ್ಲಿ ೫-೧೦ ಇಂಚು ಮಳೆ ಬರುವ ಪ್ರದೇಶ ನಮ್ಮಲ್ಲಿ ಇದೆ. ಹಾಗಿರುವಾಗ ಮಳೆ ಕಡಿಮೆ ಇರುವ ಪ್ರದೇಶದಲ್ಲಿ ಮಳೆ ಕಡಿಮೆ ನೀರು ಇಲ್ಲ, ಆದ್ದರಿಂದ ನಾವೇನು ಮಾಡುವುದಕ್ಕಾಗುತ್ತದೆ ಎಂದು ಹೇಳಿ ಪ್ರಕೃತಿದತ್ತವಾಗಿ ನಮಗೆ ಮಳೆ ಬಂದು ಬೇಕಾದಷ್ಟು ನೀರು ಸಿಕ್ಕುತ್ತದೆ ನಾವು ಉಪಯೋಗ ಮಾಡಿಕೊಳ್ಳುತ್ತೇವೆ, ದೇವರೇ ಮಳೆ ಕೊಟ್ಟರೆ, ನೀರು ಕೊಟ್ಟರೆ ನಾವೇನು ಮಾಡೋಣ ಅದನ್ನು ನಾವು ಉಪಯೋಗಿಸುತ್ತೇವೆ ನಮಗೆ ಕಂದಾಯ ಹಾಕಬೇಡಿ, ಅಂತ ಹೇಳುವುದು ಸರಿಯಾಗುವುದಿಲ್ಲ. ಇದು ಸಮಾಜವಾದದ ಒಂದು ನೀತಿ ಆಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: —ಕ್ಯಾಚ್‌ಮೆಂಟ್ ಏರಿಯಾದಲ್ಲಿರತಕ್ಕ ಪ್ರದೇಶದಲ್ಲಿ, ನಾಲಾ ಮೇಲ್ಭಾಗದಲ್ಲಿ ಪಂಪ್ ಸೆಟ್‌ನಿಂದ ನೀರು ಕೊಡುವ ಹಾಗೆ ಮಾಡಿರುವುದರಿಂದ ಕೆಳಭಾಗದಲ್ಲಿರುವವರಿಗೆ ನೀರು ಬರುವುದಿಲ್ಲ. ಅವರೂ ಕೂಡ ವಾಟರ್ ರೇಟ್ ಕೊಡಬೇಕಾದ ಪರಿಸ್ಥಿತಿ ಇದೆ. ಡ್ರೈ ಅಸೆಸ್‌ಮೆಂಟ್ ಪ್ಲಸ್ ವಾಟರ್ ರೇಟ್ ಅಂತ ಇರುವುದಕ್ಕೆ ಬದಲಾಗಿ dry assessment merged with water rate ಎಂದು ಮಾಡಿದರೆ ಒಳ್ಳೆಯದಲ್ಲವೇ?

ಶ್ರೀ ಡಿ. ದೇವರಾಜ ಅರಸ್: —ನೀರು ಕಂದಾಯ ಹಾಕುವುದು, ಯಾರು ನೀರು ಉಪಯೋಗ ಮಾಡುತ್ತಾರೆಯೋ ಅವರಿಗೆ, ಅಂತ ತಿಳಿದುಕೊಂಡಿದ್ದೇನೆ, ಕಾನೂನಿನಲ್ಲೂ ಕೂಡ ಹಾಗೆಯೇ ಇದೆ. ರಂಗನಾಥರವರಾಗಲಿ ಮತ್ತೊಬ್ಬರಾಗಲಿ ಹೇಳುವುದು ನೀರು ಇಲ್ಲದೆ ಹೋದರೆ ಕಂದಾಯ ಏಕೆ ತೆಗೆದುಕೊಳ್ಳುತ್ತೀರಿ ಎಂದು. ಅದು ಬೇರೆ ಮಾತು ಆಯಿತು.

ಶ್ರೀ ಕೆ.ಹೆಚ್. ರಂಗನಾಥ್: —ಈಗ ಭತ್ತಕ್ಕೆ ಒಂದು ರೇಟ್ ಹಾಕುತ್ತಾರೆ. ಕಬ್ಬಿಗೆ ಒಂದು ರೇಟ್ ಹಾಕುತ್ತಾರೆ, ತೆಂಗಿಗೆ ಒಂದು ರೇಟ್ ಹಾಕುತ್ತಾರೆ, ಅಡಿಕೆಗೆ ಒಂದು ರೇಟ್ ಹಾಕುತ್ತಾರೆ.

ಶ್ರೀ ಡಿ. ದೇವರಾಜ ಅರಸ್: —ನನಗೂ ಗೊತ್ತು, ಭತ್ತಕ್ಕೆ ಒಂದು ರೇಟ್ ಹಾಕುತ್ತಾರೆ, ಕಬ್ಬಿಗೆ ಒಂದು ರೇಟ್ ಹಾಕುತ್ತಾರೆ, ಭತ್ತ ಬೆಳೆಯಬೇಕಾದರೆ ೪ ತಿಂಗಳವರೆಗೆ ನೀರು ಕೊಡುತ್ತಾರೆ. ಕಬ್ಬನ್ನು ಬೆಳೆಯಬೇಕಾದರೆ ೧೨ ತಿಂಗಳು ನೀರು ಕೊಡುತ್ತಾರೆ. ಎಷ್ಟು ಹೆಚ್ಚು ಪ್ರಮಾಣದಲ್ಲಿ ನೀರನ್ನು ಉಪಯೋಗ ಮಾಡುತ್ತಾರೋ ಆದಕ್ಕೆ ತಕ್ಕಂತೆ ಬದಲಾವಣೆಯಾದ ರೇಟನ್ನು ಹಾಕಲೇಬೇಕಾಗುತ್ತದೆ. ತೆಂಗಿನಕಾಯಿ ಮಾರುವವನು, ಉಪ್ಪು ಮಾರುವವನು ಸಂತೆಯಲ್ಲಿ ಕುಳಿತು ಮಳೆ ಬಂದಾಗ ಉಪ್ಪೆಲ್ಲಾ ಕರಗಿಹೋಯಿತು ಅಂತ ಉಪ್ಪಿನವನು ಬಡಕೊಂಡರೆ ತೆಂಗಿನಕಾಯಿನವನೂ ನನ್ನ ತೆಂಗಿನಕಾಯಿ ಎಲ್ಲ ಹೋಯಿತು ಅಂತ ಒಡಕೊಂಡನಂತೆ ಆ ರೀತಿ ನೀರು ಸಿಕ್ಕದೇ ಇದ್ದವರು ನಾವು ಕಂದಾಯ ಕೊಡುವುದಿಲ್ಲ ಅಂತ ಅಂದರೆ ಅದು ತಪ್ಪಾಗುವುದಿಲ್ಲ, ಅದೇ ಯಾರು ತನ್ನ ಜಮೀನಿಗೆ ನೀರಿನ ಉಪಯೋಗ ಪಡೆಯುತ್ತಾನೋ ಅವನೂ ಕೂಡ ನಾನು ಕಂದಾಯ ಕೊಡುವುದಿಲ್ಲ ಎಂದರೆ ತಪ್ಪಾಗುತ್ತದೆ. ಕೊಡತಕ್ಕ ರೇಟಿನಲ್ಲಿ ಹೆಚ್ಚು ಕಮ್ಮಿ ಆ ಮಾತು ಬೇರೆ, ಅದನ್ನು ಕೊಡುವುದೇ ಬೇಡ ಅಂತ ಅನ್ನುವುದನ್ನು ನಾನು ಎಂದೆಂದಿಗೂ ಒಪ್ಪುವುದಿಲ್ಲ. ಹಾಗೆ ಮಾಡುವುದರಿಂದ ರೈತನನ್ನು ಒಂದು ಕಡೆ ದೊಡ್ಡವನು ದೊಡ್ಡವನೇ ಆಗುತ್ತಾನೆ, ಇನ್ನೊಂದು ಕಡೆ ಬಡವ ಬಡವನಾಗಿಯೇ ಉಳಿಯುವ ಪರಿಸ್ಥಿತಿ ಬರುತ್ತದೆ. ಪ್ರಪಂಚಕ್ಕೆ ಮಳೆ ಕೊಟ್ಟಿರುವವನು ಭಗವಂತ, ಭೂಮಿ ಕೊಟ್ಟಿರುವವನೂ ಭಗವಂತ. ಇದಕ್ಕೆ ಕಂದಾಯ ಏಕೆ ಕೊಡಬೇಕು ಅಂತ ಬೇರೆಯವರೂ ಕೇಳತಕ್ಕ ಪರಿಸ್ಥಿತಿ ಬರುತ್ತದೆ. ಫಂಡಮೆಂಟಲ್ ರೈಟ್ ಟು ಪ್ರಾಪರ್ಟಿ ಇರಬೇಕು ಎಂಬುದನ್ನು ನಾವೆಲ್ಲರೂ ಹೇಳುತ್ತೇವೆ. ಈ ಕಾರಣದಿಂದ ವಾಟರ್ ರೇಟ್ ಕೊಡುವುದು ಸಹಜ. ಎಲ್ಲಿ ಹೆಚ್ಚು ರೇಟ್ ಇದೆ, ಎಲ್ಲಿ ನೀರು ಕೊಡುತ್ತಾ ಇಲ್ಲ ಅಂತಹ ಕಡೆ ನಾನು ತಮ್ಮಲ್ಲಿ ಅರಿಕೆ ಮಾಡುತ್ತಾ ಇರುವುದು ತಾವು ಈ ವಾಟರ್ ರೇಟನ್ನು ೧೯೬೫ರಿಂದ ರಿಟ್ರಾಸ್ಪೆಕ್ಟೀವ್ ಆಗಿ ವಸೂಲು ಮಾಡಬೇಕೆಂದು ಹೊರಟಿದ್ದೀರಿ. ಶ್ರೀಮಾನ್ ರಂಗನಾಥ್‌ರವರು ಹೇಳಿದ ಹಾಗೆ ಒಂದು ತಿಂಗಳು ನೀರು ಬಂದು ಬೆಳೆ ಹಾಳಾಗಿಹೋಗಿರುವುದಕ್ಕೂ ಕೂಡ ಪೂರ್ತಿ ವಾಟರ್ ರೇಟ್ ಕೊಡಿ ಎಂದು ಡಿಮ್ಯಾಂಡ್ ಮಾಡಿದ್ದಾರೆ. ತಹಶೀಲ್ದಾರರು ಬರೆದದ್ದನ್ನು

. (ಶ್ರೀ ಡಿ. ದೇವರಾಜ ಅರಸ್)

ಡೆಪ್ಯೂಟಿ ಕಮೀಷನರು ರೆಕಮೆಂಡ್ ಮಾಡಿದ್ದಾರೆ, ಡೆಪ್ಯೂಟಿ ಕಮೀಷನರು ಹೇಳಿದ್ದೇ ಸರಿ ಅಂತ ಅದನ್ನು ವಸೂಲು ಮಾಡುವುದಕ್ಕೆ ಹೊರಟಿದ್ದೀರಿ, ಇದರಿಂದ ಸಾವಿರಾರು ಜನ ರೈತರಿಗೆ ತೊಂದರೆಯಾಗುತ್ತಾ ಇದೆ. ಇದನ್ನು ಪುನರ್ವಿಮರ್ಶೆ ಮಾಡಬೇಕಾಗುತ್ತದೆ. ನೀರು ಇಲ್ಲದೇ ಇರುವ ಕಡೆ ವಾಟರ್ ರೇಟ್ ತೆಗೆದುಕೊಳ್ಳುತ್ತಾ ಇರುವುದು ಸರ್ವಥಾ ನ್ಯಾಯವಾದುದಲ್ಲ ರೆಕಾರ್ಡ್‌ನಲ್ಲಿ ಹೀಗೆ ಇದೆ ಅಂತ ಹೇಳುವುದು ಸರ್ಕಾರದ ನೀತಿ ಅಲ್ಲ. ಮತ್ತೆ ತಾವು ಕಣ್ಣು ಬಿಟ್ಟು ನೋಡಬೇಕು. ಪುನರ್ವಿಮರ್ಶೆ ಮಾಡಬೇಕು. ಹಾಗೆ ಮಾಡದೇ ಎಲ್ಲಾ ಕಡೆಯೂ ವಸೂಲು ಮಾಡುತ್ತೇವೆ ಎಂದರೆ ಇದರ ಬಗ್ಗೆ ರೈತರಿಗೆ ಜಿಗುಪ್ಸೆ ಉಂಟಾಗಿ ಅವರು ನಿಮ್ಮ ಮೇಲೆ ದಂಗೆ ಏಳುವ ಸ್ಥಿತಿ ಬಂದೀತು ಎಂದು ಹೇಳುತ್ತಾ ಇದ್ದೇನೆ. ಹಿಂದೆ ದೇವೇಂದ್ರ ಮಳೆ ಕೊಡುತ್ತಾನೆ, ಬಸವಣ್ಣ ಉಳುತ್ತಾನೆ ನಾವೇಕೆ ಕಂದಾಯ ಕೊಡಬೇಕು ಅಂತ ಕೇಳುವ ಕಾಲವೂ ಇತ್ತು, ಇವತ್ತು ಆ ಕಾಲ ಇಲ್ಲ. ಇವತ್ತಿನ ಪರಿಸ್ಥಿತಿ ನಕ್ಸಲೈಟ್ಸ್ ಏನು ಹೇಳುತ್ತಾ ಇದ್ದಾರೆ ಆಲ್ಲಿಗೆ ಬರುತ್ತಾ ಇದೆ. ಈ ಸುಧಾರಣೆಗಳನ್ನೆಲ್ಲಾ ಮಾಡದೇ ಹೋದರೆ ಜನ ನಾವು ಉಳುತ್ತಾ ಇರುವುದು ನಮ್ಮದೇ ಭೂಮಿ, ನಮಗೇ ಕೊಡಿ, ನಾವು ಬಾಡಿಗೆಗೆ ವಾಸವಾಗಿರುವ ಮನೆ ನಮ್ಮದೇ ಮನೆ ನಮಗೇ ಕೊಡಿ ಅಂತ ಹೇಳುತ್ತಾರೆಯಲ್ಲಾ ಆ ರೀತಿ ಒಂದು ಕ್ರಾಂತಿ ಈ ಹೊತ್ತು ಆದೀತು ಎಂಬ ಎಚ್ಚರಿಕೆಯನ್ನು ಕೊಟ್ಟು, ಈ ಸುಧಾರಣೆಯನ್ನು ಮಾಡಿ ಎಂದು ಹೇಳುತ್ತಾ ಇದ್ದೇನೆ. ಪಹಣಿ ವಿಷಯ ಹೇಳಬೇಕೆಂದರೆ, ನಮ್ಮ ಮುಂದೆ ಇರತಕ್ಕ ಬಹಳ ದೊಡ್ಡ ಪ್ರಮಾಣದ ವ್ಯಾಜ್ಯಗಳಿಗೆ ಇದೇ ಆಧಾರ ಎಂದು ಗೊತ್ತಾಗುತ್ತಾ ಇದೆ. ೧೯೫೭ನೇ ಇಸವಿಯಲ್ಲಿ ರೆವಿನ್ಯೂ ಮಿನಿಸ್ಟರಾಗಿದ್ದಂತಹ ಶ್ರೀಮಾನ್ ಪಾಟೀಲ್‌ರವರ ಬಗ್ಗೆ ನನಗೆ ತುಂಬಾ ಗೌರವ ಇದೆ, ಏಕೆಂದರೆ ನಾನು ನೋಡಿದಂತಹ ರೆವಿನ್ಯೂ ಮಿನಿಸ್ಟರ ಪೈಕಿ ಬಹಳ ಚೆನ್ನಾಗಿ ಈ ಇಲಾಖೆಯನ್ನು ಅಭ್ಯಾಸ ಮಾಡಿದ್ದವರು ಎಂದರೆ ಶ್ರೀಮಾನ್ ಎಂ ಪಿ. ಪಾಟೀಲರು.

ಶ್ರೀ ಎಂ. ಪಿ. ಪಾಟೀಲರ ಕಾಲದಲ್ಲಿ ಅವರು ಮೊಟ್ಟ ಮೊದಲನೆಯದಾಗಿ ಶ್ರಮ ತೆಗೆದುಕೊಂಡು ಎಲ್ಲಾ ಕಡೆಯೂ ಪಹಣಿ ಬರೆಸಲು ಪ್ರಯತ್ನ ಮಾಡಿದರು, ಅದಕ್ಕೆ ಫಾರಂ ಸಹ ಪ್ರಿಂಟ್ ಮಾಡಿಸಿದರು ಆದರೆ ದುರದೃಷ್ಟವಶಾತ್ ಅದನ್ನು ಜಾರಿಯಲ್ಲಿ ತರುವುದಕ್ಕೆ ಮುಂಜೆಯೇ ಒಂದು ವರ್ಷ ದೊಳಗಾಗಿ ಅವರು ಅಧಿಕಾರದಿಂದ ಹೋಗಬೇಕಾಗಿ ಬಂತು ಆಗ ಮಾಡಬೇಕಾಗಿದ್ದ ಕೆಲಸ ಮಾಡಿದೆ ಇನ್ನೂ ಹಾಗೆಯೇ ಇದೆಯೇ ? ಅಥವ ಬರೆದು ಸಿದ್ಧ ಮಾಡಿದ್ದೀರಾ ? ತಾಲ್ಲೂಕು ಆಫೀಸಿಗೆ ಹೋದರೆ ಯಾವು ಜಮೀನಿನ ಮಾಲೀಕ, ಗೇಣೀದಾರ ಎಂಬುದು ಇನ್ನೂ ಗೊತ್ತಾಗುವಂತಿಲ್ಲ. ಅದನ್ನು ಬರೆದಿದ್ದರೆ ಅಧಿಕಾರಿಗಳಿಗೆ ತೊಂದರೆ ಯಾಗುತ್ತಿತ್ತು, ಬರೆದರೆ ಮಾಮೂಲು ಬರುತ್ತಿರಲಿಲ್ಲ. ಅದಕ್ಕೆ ಅದನ್ನು ಬರೆಯದೆ ಹಾಗೆಯೇ ಇಟ್ಟರು. ಇಂದು ಬೇರೆ ಬೇರೆ ಆಫೀಸರುಗಳು ಬಂದರೆ ಬೇರೆಯವರ ಹೆಸರಿನಲ್ಲಿ ಬರೆಯುವರು. ಇದನ್ನು ಯಾವರೀತಿ ಕಂಟ್ರೋಲ್ ಮಾಡುವುದು ? ನಮ್ಮ ಕಡೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯಾವರೀತಿ ಆಗುತ್ತಿದೆ. ಅಧಿಕಾರಿಗಳ ಗತಿ ಏನಾಗಿದೆ, ಯಾರಿಗೆ ಕೊಡುತ್ತಿದ್ದಾರೆ ಎಂದರೆ ಈಗ ಐಎಎಸ್., ಅಧಿಕಾರಿಗಳು ಜಿಲ್ಲಾಧಿಕಾರಿಗಳಾಗಿ ಬರುತ್ತಿದ್ದಾರೆ, ಪಾಪ ೩೫ ವರ್ಷ ವಯಸ್ಸಾಗುವುದರೊಳಗೆ ಐಎಎಸ್., ಅಧಿಕಾರಿಗಳು ಜಿಲ್ಲಾಧಿಕಾರಿಗಳಾಗುತ್ತಿದ್ದಾರೆ, ಚಿಗುರುಮಿಸೆ ಹುಡುಗರು. ಅನುಭವವಿಲ್ಲದಿರುವವರು ಜಿಲ್ಲಾಧಿಕಾರಿಗಳಾಗಿ ಬರುತ್ತಿದ್ದಾರೆ. ಅವರಿಗೆ ಆಡಳಿತದ ಪರಿಶ್ರಮವಿದೆಯೇ ? ಯಾವರೀತಿ ಆಡಳಿತ ನಡೆಸುತ್ತಿದ್ದಾರೆ ಎಂಬುದನ್ನು ನೋಡಿದರೆ ಅವರಿಂದಲೇ ತೊಂದರೆಯಾಗಿರುವುದು ಕಂಡು ಬರುವುದು. ಯಾವ ತಾಲ್ಲೂಕಿಗೆ ಹೋದರೂ ಅವರಿಗೆ ಸರಿಯಾಗಿ ನೋಡಿ ವಿಚಾರ ಮಾಡುವ ಶಕ್ತಿ ಇಲ್ಲದೆಯೋ ಅಥವ ತಿಳಿವಳಿಕೆ ಇಲ್ಲದೆಯೋ ಸರಿಯಾಗಿ ಕೆಲಸವಾಗುತ್ತಿಲ್ಲ. ಇದನ್ನು ಸುಧಾರಿಸಲು ಯೋಚನೆ ಮಾಡಬೇಕು.

ಇನ್ನು ಡಿವಿಜನಲ್ ಕಮೀಷನರುಗಳ ಹುದ್ದೆ ಇದೆ. ಎಷ್ಟೋ ದಿವಸಗಳಿಂದ ಈ ಹುದ್ದೆ ರದ್ದು ಮಾಡಬೇಕೆಂದು ಹೇಳುತ್ತಿದ್ದರೂ ಇನ್ನೂ ಈ ಪ್ರಶ್ನೆ ಹಾಗೆಯೇ ಇದೆ. ನಾವು ಇದನ್ನು ಎಷ್ಟೋ ಸಂದರ್ಭಗಳಲ್ಲಿ ಹೇಳಿದ್ದೇವೆ, ಇದು ಪರಿಶೀಲಿಸಲು ಯೋಗ್ಯವಾದ ವಿಚಾರ, ಈ ಹುದ್ದೆಯನ್ನು ತೆಗೆದು-ಹಾಕಿದರೆ ಏನೂ ತೊಂದರೆಯಾಗುವುದಿಲ್ಲ, ಮಾಡುವುದು ಒಳ್ಳೆಯದು.

ಇನ್ನು ಲ್ಯಾಂಡ್ ಗ್ರಾಂಟ್ಸ್ ವಿಚಾರ. ಇದರಲ್ಲಿ ನಿಮ್ಮ ನೀತಿ ಎಂದರೆ ಸರಕಾರದ ನೀತಿ ಒಬ್ಬೊಬ್ಬ ಮಂತ್ರಿಗಳು ಬಂದಾಗ ಒಂದೊಂದು ರೀತಿಯಲ್ಲಿ ಬದಲಾಗುತ್ತಿದೆ, ಉದಾಹರಣೆಗೆ ಕೆಲವು ದಿವಸಗಳ ಹಿಂದೆ ತಾಲ್ಲೂಕು ಮಟ್ಟದಲ್ಲಿ ಕಾನೂನನ್ನು ಜಾರಿಗೆ ತರಬೇಕಾದರೆ ಒಂದು ಸಮಿತಿ ಮಾಡಿ ಅದರ ಶಿಫಾರಸಿನ ಮೇರೆಗೆ ಭೂಮಿಯನ್ನು ಹಂಚಬೇಕು ಎಂದು ಒಂದು ಸ್ಪಷ್ಟವಾದ ನಿಲವು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೆ ಆ ಸಮಿತಿ ಮಾಡುವ ವಿಚಾರ ಗಜಗರ್ಭದಂತಾಗಿದೆ. ಮಾಡುವುದೇ,

ಬಿಡುವುದೇ ಎಂಬುದು ಇತ್ಯರ್ಥವಾಗಿಲ್ಲ. ಯಾರನ್ನು ಆ ಸಮಿತಿಗೆ ಹಾಕುವರೋ ಗೊತ್ತಿಲ್ಲ, ಅದು ಕಾನೂನಿಗನುಸಾರವಾಗಿದೆಯೇ ಎಂಬುದೂ ಗೊತ್ತಿಲ್ಲ, ಅನೇಕರು ಕೇಳುತ್ತಿದ್ದಾರೆ. ಈ ತಕ್ಷಣ ಮಾಡುತ್ತೀರೇನು ? ಇರಲಿ, ಈ ರೀತಿಯಾಗಿ ಜಮೀನು ಹಂಚಿಕೆಯನ್ನು ಎಲ್ಲಾ ಕೆಡೆ ಆರೇಳು ತಿಂಗಳಿಂದ ತಡೆದಿಟ್ಟಿದ್ದಾರೆ. ಇದರಿಂದ ತೊಂದರೆಯಾಗಿದೆ. ಮತ್ತು ಬಗರ್‌ಹುಕುಂ ಜಮೀನು ವ್ಯವಸಾಯ-ಮಾಡುವುದು ಹೆಚ್ಚಾಗಿದೆ. ಇದನ್ನು ಗಮನಿಸಬೇಕು. ಈ ಸಮಿತಿ ಮಾಡುವುದು ತಪ್ಪೇ ? ಸರಿಯೋ ? ಅದರ ವಿಚಾರ ಈಗ ಬೇಡ ಏನಾದರೂ ಮಾಡಿ, ನಾನು ಹೇಳುವುದು ಈ ಸಮಿತಿ ಬೇಡ, ಮಾಮೂಲಿನಂತೆ ತಾಲ್ಲೂಕ್ದಾರರು ಮುಂತಾದವರಿಗೆ ಅಧಿಕಾರ ಕೊಡಿ ಜಾಗ್ರತೆ ನಿಮ್ಮಲ್ಲಿರುವ ಭೂಮಿಯನ್ನು ಹಂಚಿಕೆ ಮಾಡಲು ಪ್ರಯತ್ನ ಮಾಡಬೇಕು. ಕೆಲವು ಒದಲಾವಣೆ ಮಾಡಿದ್ದರೆ, ಸರಕಾರ ವಹಿಸಿಕೊಂಡಿದೆ, ಜಮೀನು ಕೊಡುವ ಅಧಿಕಾರ ಸರಕಾರದವರು ಇಟ್ಟು ಕೊಂಡಿದ್ದಾರೆ. ಇದರಿಂದ ಯಾವ ಮಂತ್ರಿಗೂ ಕೆಟ್ಟ ಹೆಸರು ತಪ್ಪುವುದಿಲ್ಲ. ಅಧಿಕಾರ ದುರುಪಯೋಗ ಮಾಡುವರೆಂದು ಹೇಳುವುದಿಲ್ಲ. ಆದರೆ ಕಾರಣಾಂತರದಿಂದ ಅನೇಕ ಕಡೆ ಅಧಿಕಾರ ದುರುಪಯೋಗವಾದಹಾಗೆ ಕಂಡುಬರುವುದು. ಏಕೆ ಹೀಗಾಗುವುದು ? ಈಗ ನಮ್ಮ ಸ್ನೇಹಿತರು ಕೆಲವು ಉದಾಹರಣೆ ಹೇಳುತ್ತಿದ್ದರು ದೊಡ್ಡ ದೊಡ್ಡ ಪಟ್ಟಣಗಳ ಸುತ್ತು ಮುತ್ತು ಇರುವ ಭೂಮಿಯನ್ನು ಲ್ಯಾಂಡ್‌ಟು ದಿ ಲ್ಯಾಂಡ್‌ಲೆಸ್ ಎಂದು ಹೇಳುವಂತೆ ಅನೇಕರಿಗೆ ಕೊಡುತ್ತಿದ್ದಾರೆ. ನಾನು ಮತ್ತು ನನ್ನ ಮನೆಯಲ್ಲಿರುವವರೂ ಬೇರೆ ಉದ್ಯೋಗ ಮಾಡುತಿದ್ದರೂ, ಲ್ಯಾಂಡ್ ಲೆಸ್ ಎಂದು ಹೇಳುತ್ತಿದ್ದಾರೆ, ಒಬ್ಬನ ಹೆಸರಿನಲ್ಲಿ ಜಮೀನಿರುವುದಿಲ್ಲ, ಆತ ಬೆಂಗಳೂರಿನ ಸುತ್ತ ೫೦ ಮೈಲಿ ಪ್ರದೇಶದಲ್ಲಿ ಇರುವ ಜಮೀನನ್ನು ಪಡೆದು ಕೆಲವು ದಿವಸ ತನ್ನು ಹೆಸಸಿನಲ್ಲಿಟ್ಟು ಕೊಂಡು ವ್ಯವಸಾಯ ಮಾಡದೆ ಸುಮ್ಮನಿದ್ದು ನಂತರ ಅದನ್ನು ಬೇರೆ ಕೆಲಸಕ್ಕೆ ಕನ್‌ವರ್ಟ್ ಮಾಡಿಕೊಳ್ಳುವ ಸಂದರ್ಭವಿದೆ ಕನ್‌ವರ್ಷನ್ ಮಾಡಿಕೊಂಡು ಒಂದು ಎಕರೆಗೆ ೫೦೦ ರೂಪಾಯಿ ಕೊಟ್ಟು ತೆಗೆದುಕೊಂಡಿರುವುದನ್ನು ಚದರ ಗಜಕ್ಕೆ ೫೦ ರೂಪಾಯಿಗಳ ಪ್ರಕಾರ ಮಾರಾಟ ಮಾಡಿ ರಾತ್ರೋ ರಾತ್ರಿ ಸಾವಿರಾರು ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ, ಹೀಗೆ ಕೆಲವರಿಗೆ ಅನುಕೂಲವಾಗುವ ನೀತಿಯನ್ನು ಅಸು ಸರಿಸಲಾಗುತ್ತಿದೆ. ಇದಕ್ಕೆ ಉದಾಹರಣೆಯಾಗಿ ಜಾರುಬಂಡೆ ಕಾವಲು ಏನಿದೆ ಅದರಲ್ಲಿ ಕೊಟ್ಟಿರುವ ಜಮೀನಿದೆ. ಕೋ ಆಪರೇಟಿವ್ ಸೊಸೈಟಿ ಎಂದು ಮಾಡಿ ಅದಕ್ಕೆ ೨ ಲಕ್ಷ ಸಾಲ ಕೊಡಲಾಗಿದೆ, ಜಮೀನನ್ನು ಸೊಸೈಟಿಗೆ ಕೊಟ್ಟು ಅದರ ಮೂಲಕ ಮಾರಾಟ ಮಾಡಲಾಗಿದೆ ಯಾರೋ ಫಿಲಂ ಇಂಡಸ್ಟ್ರಿಯವರಿಗೆ - ಮೈಸೂರು ಕರ್ನಾಟಕ ಸ್ಟೂಡಿಯೋಸ್‌ನವರಿಗೆ ಕೊಟ್ಟಿದ್ದಾರೆಂದು ಕೇಳಿದೆ, ಇದನ್ನು ವಿಮರ್ಶೆ ಮಾಡಬೇಕು. ಸರಕಾರಿ ಮಟ್ಟದಲ್ಲಿ ಚಿಕ್ಕನಾಯಕನ ಹಳ್ಳಿ ಒಳಿ ಇರುವ ಕೆರೆ ಅಂಗಳವನ್ನು ವ ಂತ್ರಿಗಳು ಮಂಜೂರು ಮಾಡಿದ್ದಾರೆ ಎಂದು ಹೇಳುತ್ತಾರೆ, ಆದನ್ನು ಡಿಸಿಗೆ , ಹೇಳಿ ಹಾಗೆಯೇ ನಿಲ್ಲಿಸಿ ಎಂದು ತಿಳಿಸಿರುವಂತೆ ವರ್ತಮಾನವಿದೆ. ನಾನು ವಿನಂತಿ ಮಾಡುವುದಿಷ್ಟ, ಒಂದು ದುರುದ್ದೇಶದಿಂದ ಮಾಡಿದ್ದೀರೆಂದಲ್ಲ ಜಮೀನು ಕೊಡಬೇಕೆಂಬ ಒತ್ತಾಯ ಮಂತ್ರಿಗಳ ಮೇಲೆ ಅಗಾಧವಾಗಿದೆ. ರಾಜಕೀಯ ಒತ್ತಾಯವಿದೆ, ಇಂತಹ ಒಂದು ಕಷ್ಟಕರ ಪರಿಸ್ಥಿತಿ ಈಗ ಇದೆ ಏಕೆಂದರೆ ಆಯಾರಾಮ್ ಗಯಾರಾಂ ಪರಿಸ್ಥಿತಿ ಇರುವಾಗ ಏನಾಗುವುದು ಎಂದರೆ ನೀವು ಅಧಿಕಾರದಲ್ಲಿದ್ದಾಗ ಕೊಡುತ್ತೀರೆತೋ, ಇಲ್ಲವೋ ಕೊಡದಿದ್ದರೆ ಬೇರೆ ಪಕ್ಷಕ್ಕೆ ಹೋಗುತ್ತೇನೆ ಎಂದು ಹೆದರಿಸ ಬಹುದು, ಪಕ್ಷ ಎಲ್ಲಿ ಬಿಡುವರೋ ಎಂಬ ಗಾಬರಿ ಬೇರೆ ಇರುವುದು.

ಶ್ರೀ ಡಿ. ಎಂ ಸಿದ್ದಯ್ಯ :—ಆ ಮಾತು ಇದುವರೆಗೆ ಯಾರೂ ಹೇಳಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ :—ಹೆಸರು ಬೇಕಾದರೆ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ :—ಸಿದ್ದಯ್ಯನವರಿಗೆ ಗೊತ್ತಿಲ್ಲ, ರಿಕಾರ್ಡಿನಲ್ಲಿ ತೋರಿಸ ಬಹುದು, ಪ್ರತಿನಿತ್ಯವೂ ಇಂಥ ತೊಂದರೆ ಕಂಡುಬರುತ್ತಿಲ್ಲ. ಪೊಲಿಟಿಕಲ್ ಸಫರರ್ ಹೆಸರಿನಲ್ಲಿ ಜಮೀನು ತೆಗೆದುಕೊಳ್ಳುವುದು ಬೇರೆ ಇದೆ ಒಂದು ಸಾರಿ ಅಲ್ಲಿ. ಪೊಲಿಟಿಕಲ್ ಸಫರರ್ ಆಗುವುದು, ಮಂತ್ರಿಗಳ ಬದಲಾವಣೆಯಾದಾಗಲೆಲ್ಲಾ ಒಬ್ಬನೇ ಮನುಷ್ಯ ಬಂದು ಪೊಲಿಟಿಕಲ್ ಸಫರರ್ ಎಂದು ಜಮೀನು ಪಡೆಯುವುದು, ಮಾರಾಟ ಮಾಡುವುದು ಮತ್ತು ಜಮೀನು ಕೇಳಿ ಪಡೆಯುವುದು ಈ ರೀತಿ ಮಾಡುತ್ತಿದ್ದಾರೆ ಹೀಗೆ ಪೊಲಿಟಿಕಲ್ ಸಫರರ್ಸ್‌ಗೆ ಜಮೀನು ಕೊಡಬಾರದು. ಮತ್ತು ಒಂದೇ ಸಂಸಾರದಲ್ಲಿ ಯಜಮಾನನ ಹೆಸರಿನಲ್ಲಿ, ಹೆಂಡತಿ ಹೆಸರಿನಲ್ಲಿ, ಮಕ್ಕಳ ಹೆಸರಿನಲ್ಲಿ, ಪೆಮ್ಮಕ್ಕಳ ಹೆಸರಿನಲ್ಲಿ ಜಮೀನಿಲ್ಲ-ವೆಂದು ಹೇಳಿ ತೆಗೆದುಕೊಳ್ಳುವುದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಅಧಿಕಾರಿಗಳು ಹೀಗೆ ಮಾಡುತ್ತಿದ್ದಾರೆ. ಇದನ್ನು ಮಂತ್ರಿಗಳು ಹೇಗೆ ತಪ್ಪಿಸುವರು ಎಂದು ಕೇಳುತ್ತಿದೇನೆ. ತಪ್ಪಿಸುವುದಕೆ ಸಾಧ್ಯವಿದೆಯೇ ?

(ಶ್ರೀ ಡಿ. ದೇವರಾಜ ಅರಸ್)

ಭೂಮಿಯನ್ನು ಕೊಡತಕ್ಕ ನೀತಿ ಏನಿದೆ, ಭೂಮಿಯ ಹಂಚಿಕೆ ನೀತಿ ಏನಿದೆ, ಇದರಲ್ಲಿ ಸರ್ಕಾರದವರಂ ಒಂದುಬದಲಾವಣೆ ಮಾಡಬೇಕಾಗಿದೆ. ನನ್ನ ದೃಷ್ಟಿಯಲ್ಲಿ ನನ್ನ ಖಚಿತವಾದ ಅಭಿಪ್ರಾಯವೇನೆಂದರೆ, ಯಾವ ಮನುಷ್ಯ ಬೇರೆ ಉದ್ಯೋಗವನ್ನು ಮಾಡಿ ಸಂಪಾದನೆ ಮಾಡುತ್ತಿದ್ದಾನೆ ಅಂಥವನಿಗೆ ಎಂದೆಂದಿಗೂ ಭೂಮಿಯನ್ನು ಕೊಡಬಾರದು ಎಂದು ಹೇಳುವವನು ನಾನು. ಈ ನೀತಿಯನ್ನು ಸರ್ಕಾರ ನಿರ್ದಿಷ್ಟವಾಗಿ ಅನುಸರಿಸುತ್ತದೆ, ಕಡ್ಡಾಯವಾಗಿ ಎಲ್ಲ ಹಂತದಲ್ಲಿಯೂ ಜಾರಿಗೆ ತರುತ್ತದೆ ಎಂದು ನಾನು ನಂಬುತ್ತೇನೆ. ಸರ್ಕಾರದವರೇನಾದರೂ ಈ ನೀತಿಯನ್ನು ಜಾರಿಗೆ ತರದೆ, ಇದಕ್ಕೆ ವಿರೋಧವಾಗಿ ನಡೆದರೆ, ಈ ದೇಶಕ್ಕೆ ಅದರಲ್ಲಿಯೂ ಬಡಜನಗಳಿಗೆ, ವ್ಯವಸಾಯ ಮಾಡತಕ್ಕ ಜಮೀನಿಲ್ಲದ ಕುಟುಂಬಗಳಿಗೆ ದ್ರೋಹವೆಸಗುತ್ತಾರೆ ಮತ್ತು ಜಮೀನಿಲ್ಲ ಎನ್ನುವ ಹೆಸರಿನಲ್ಲಿ, ಬೇರೆ ಬೇರೆ ಉದ್ಯಮದಿಂದ ಸಂಪಾದನೆ ಮಾಡುವ ಜನ ಭೂಮಿಯನ್ನು ಪಡೆದು ಹೆಚ್ಚು ಹೆಚ್ಚು ಲಾಭಕ್ಕೆ ಮಾರಿಕೊಂಡು ಅದರಿಂದ ದೊಡ್ಡ ದೊಡ್ಡದಾಗಿ ಯಾರು ಸಂಪಾದನೆ ಮಾಡುತ್ತಾರೆ ಅಂಥವರಿಗೆ ಮಾತ್ರ ಸರ್ಕಾರ ಸಹಾಯ ಮಾಡಿದ ಹಾಗೆ ಆಗಿದೆ ಎನ್ನುವ ದೋಷಕ್ಕೆ ಒಳಗಾಗಬೇಕಾಗುತ್ತದೆ. ಅದಕ್ಕಾಗಿ ಈ ಮೂಲಭೂತವಾದ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

3 -30. P. M.

ರೆವಿನ್ಯೂ ಮ್ಯಾಪುಗಳು ಹಿಂದೆ ತಾಲ್ಲೂಕು ಮಟ್ಟದಲ್ಲಿ ಒಂದೆರಡು ರೂಪಾಯಿ ಕೊಟ್ಟರೆ ತೆಗೆದು ಕೊಳ್ಳುವುದಕ್ಕೆ ಸಾಧ್ಯವಿತ್ತು. ಈಗ ಒಂದುಗ್ರಾಮದ ನಕಾಸೆ ಕೊಡಿ ಎಂದರೆ ಬೇರೆ ಬೇರೆ ಕಡೆಯಿಂದ ಬೆಂಗಳೂರಿಗೆ ಬರಬೇಕು ಎನ್ನುವ ಪದ್ಧತಿಯನ್ನು ಮಾಡುತ್ತಿದ್ದಾರೆ. ದಯಮಾಡಿ, ಈ ಗ್ರಾಮ ನಕಾಸೆಗಳೇನಿವೆ ಅವುಗಳನ್ನು ಹೆಚ್ಚು ಹೆಚ್ಚು ಆಚ್ಚು ಹಾಕಿಸಿ ಎಲ್ಲ ತಾಲ್ಲೂಕು ಹಂತದಲ್ಲಿಯೂ ದುಡ್ಡು ಕೊಟ್ಟರೆ ಸಿಕ್ಕುವಂಥ ವ್ಯವಸ್ಥೆ ಮಾಡಬೇಕು.

ಇಷ್ಟು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಂಚೇಗೌಡ (ಮದ್ದೂರು);ಮಾನ್ಯ ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತ ಕೆಲವು ಅಂಶಗಳನ್ನು ಈ ಸಭೆಯ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಇದುವರೆಗೆ ಭೂಸುಧಾರಣೆಯ ಬಗ್ಗೆ ಏನು ಅಭಿಪ್ರಾಯವನ್ನು ನನ್ನ ಸ್ನೇಹಿತರು ವ್ಯಕ್ತ ಪಡಿಸಿದರು, ಆ ಬಗ್ಗೆ ಎರಡು ಮಾತನ್ನು ಹೇಳಿ ಮುಂದಿನ ಅಂಶಗಳಿಗೆ ಹೋಗುತ್ತೇನೆ.

ಭೂ ಸುಧಾರಣೆ ಬಗ್ಗೆ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ರೈತವಾರಿ ಪದ್ಧತಿ ಜಾರಿಯಲ್ಲಿರುವ ಕಡೆಗೆ ಇಷ್ಟೊಂದು ಭಾಷಣದ ಅಗತ್ಯವಿದೆಯೇ ಎನ್ನುವುದರ ಬಗ್ಗೆ ನನಗೆ ಸಂಶಯವಿದೆ. ಈ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ. ನನ್ನ ಮನಸ್ಸಿನಲ್ಲಿ ತಾಳಿ ಬಂದಂಥ ಅಭಿಪ್ರಾಯವನ್ನು ಮಾತ್ರ ವ್ಯಕ್ತಪಡಿಸುತ್ತೇನೆಯೇ ವಿನಾ ಬೇರೆ ಪಕ್ಷದ ಪತಿಯಿಂದ, ಬೇರೆ ದೃಷ್ಟಿಯಿಂದ ಹೇಳುತ್ತೇನೆಂದು ಭಾವಿಸಬಾರದು. ಸೀಲಿಂಗ್ ಲಿಮಿಟ್ ಏನಿದೆ, ಕಾನೂನು ರೀತ್ಯ ಏನು ಮಾಡಿದ್ದೇವೆ, ಅದನ್ನು ಕೆಳಗಡೆಗೆ ಇಳಿಸಬೇಕು ಎಂದುಹೇಳಿದರು. ಅದೇ ರೀತಿ ಅವರು ಅಂಕಿ ಅಂಶಗಳನ್ನು ಕೊಡತಕ್ಕ್ಕ ಸಂದರ್ಭದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಇರತಕ್ಕ ರೈತರ ಜನಸಂಖ್ಯೆ ಮತ್ತು ಭೂಮಿ, ಎರಡನ್ನೂ ತೆಗೆದುಕೊಂಡರೆ ಸರಾಸರಿ ಒಂದುಎಕರೆಗಿಂತ ಹೆಚ್ಚು ಬರುವುದಿಲ್ಲ ಎಂದುಹೇಳಿದರು. ಅವರೂ ಸ್ವತಃ ವ್ಯವಸಾಯಗಾರರು, ನಾನೂ ಕೂಡ ವ್ಯವಸಾಯಗಾರ. ಒಂದೆರಡು ಎಕರೆ ಜಮೀನು ಇಟ್ಟುಕೊಂಡು ವ್ಯವಸಾಯಕ್ಕೆ ದನಕರುಗಳ ಸಹಾಯ ಪಡೆದುಕೊಂಡು ಬೇಸಾಯ ಮಾಡತಕ್ಕ ಮನುಷ್ಯ ತನ್ನ ಮನೆಯನ್ನು ಎಲ್ಲಿ ಕಟ್ಟುತ್ತಾನೆ, ದನಗಳನ್ನು ಎಲ್ಲಿ ಕಟ್ಟುತ್ತಾನೆ, ಹುಲ್ಲು ಮೆದೆ ಎಲ್ಲಿಹಾಕುತ್ತಾನೆ. ತರಕಾರಿ ಎಲ್ಲಿ ಬೆಳೆಯುತ್ತಾನೆ, ಬಾವಿ ಎಲ್ಲಿ ತಗೆಯುತ್ತಾನೆ, ಈ ರೀತಿ ಎಲ್ಲ ಸೌಲಭ್ಯಗಳನ್ನೂ ಮಾಡಿಕೊಂಡು ರೈತ ತನ್ನ ಕಾಲ ಮೇಲೆ ತಾನು ನಿಂತುಕೊಂಡು ಜೀವನ ಮಾಡುವುದಕ್ಕಾಗುತ್ತದೆ ಎನ್ನುವುದನ್ನು ಒಹುಶಃ ಸರಿಯಾಗಿ ಯೋಚನೆ ಮಾಡಬೇಕು. ಎಲ್ಲಿ ರೈತವಾರಿ ಪದ್ಧತಿ ಜಾರಿಯಲ್ಲಿದೆಯೋ, ಜಮೀನು ಉಳುವವನೇ ಒಡೆಯನಾಗಿರುವಂಥ ಕಡೆ ಭೂಸುಧಾರಣೆಯ ಬಗ್ಗೆ ಈ ರೀತಿಯ ಭಾಷಣ ಸಲ್ಲದು ಎಂದು ನನ್ನ ಅಭಿಪ್ರಾಯ ಕಳೆದ ಸಾರಿ ಭೂಸುಧಾರಣೆಯನ್ನು ತರುತ್ತೇವೆಂದು ಹೇಳಿ,ಸೀಲಿಂಗ್ ಲಿಮಿಟ್‌ಗೊತ್ತು ಮಾಡುತ್ತೇವೆಂದು ಹೇಳಿ ಭೂಸುಧಾರಣೆ ಕಾನೂನು ಜಾರಿಗೆ ಬರುವ ಹೇಳಿಗೆ ಜಮೀನೆಲ್ಲ ಹಂಚಿಕೆಯಾಗಿತ್ತು. ಮದ್ರಾಸಿನಲ್ಲಿ ಸೀಲಿಂಗ್ ಲಿಮಿಟ್ ಅರ್ಧದಷ್ಟಕ್ಕೆ ಇಳಿಸುತ್ತಾರೆಂದು ಪತ್ರಿಕೆಯಲ್ಲಿ ಓದಿದೆವು.ಇಲ್ಲಿ ಕೂಡ ಅದೇಧಾಟಿಯಲ್ಲಿ ಹೇಳುತ್ತಿದ್ದಾರೆ. ಆಷ್ಟೋ ಇಷ್ಟೋ ಸೀಲಿಂಗ್ ಲಿಮಿಟ್‌ಏರಿಗೆ ಇಟ್ಟುಕೊಂಡಿರತಕ್ಕ ಜನ ಕೆಲವೇ ದಿವಸಗಳಲ್ಲಿ ಅದನ್ನು ಕಡಿಮೆ ಮಾಡಿಕೊಳ್ಳುವುದ

ರಲ್ಲಿ ಯಾವ ಸಂಶಯವು ಇಲ್ಲ ಎಂದು ನನಗನ್ನಿಸುತ್ತದೆ. ಈ ಕಾರಣದಿಂದ ಭೂಸುಧಾರಣೆಯ ಸೋಗಿನಲ್ಲಿ ಜನಗಳನ್ನು ದಿಗ್ಭ್ರಾಂತರನ್ನಾಗಿ ಮಾಡತಕ್ಕುದು ತಪ್ಪು. ಭೂಸುಧಾರಣೆ ಮಾಡುತ್ತೇವೆ ಎಂದರೆ ಆಕಾಶ ಕೈಗೆ ಸಿಕ್ಕುತ್ತದೆ ಎಂದು ಜನ ಭಾವಿಸಿಕೊಂಡಿದ್ದರು. ಇರತಕ್ಕ ಜಮೀನನ್ನು ಭೂಸುಧಾರಣೆಯಿಂದ ಹೆಚ್ಚು ಮಾಡುವುದಕ್ಕೆ ಯಾವತ್ತಿಗೂ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಭೂಸುಧಾರಣೆ ಬಗ್ಗೆ ರಾಜಕೀಯ ಪಕ್ಷಗಳು ಏನು ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತವೇ, ತಮ್ಮ ನಿಲುವನ್ನು ಏನು ವ್ಯಕ್ತ ಪಡಿಸುತ್ತವೆ, —ನಾನು ಇರತಕ್ಕ ಪಕ್ಷವಾಗಲೀ, ನನ್ನ ಸ್ನೇಹಿತರು ಇರತಕ್ಕ ಪಕ್ಷವಾಗಲೀ—ಅದು ಜನಗಳ ಮನಸ್ಸು ಕೆಡಿಸತಕ್ಕ ರೀತಿಯಲ್ಲಿ ಹೋಗಬಾರದು ಎನ್ನುವುದು ನನ್ನ ನಿಲುವು.

ಶ್ರೀ ಬಿ ದೊಡ್ಡಬೋರೇಗೌಡ:-ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಇದುವರೆಗೆ ರಾಜಕೀಯವಾಗಿ ಭೂಸುಧಾರಣೆಗೆ ಸಂಬಂಧಪಟ್ಟ ಹಾಗೆ ಅಥವಾ ಇತರೆ ಯಾವುದೇ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಪ್ರತಿಪಾದಿಸಿದರು. ಜನತೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಅವರು ಹಾಗೆ ಮಾತನಾಡಿದರೇ ಹೇಗೆ ಎನ್ನುವುದನ್ನು ಆ ಭಾಗದ ಸದಸ್ಯರು ಹೇಳಲಿ.

ಅಧ್ಯಕ್ಷರು:-ತಾವು ಎತ್ತಿದ ಪಾಯಿಂಟ್ ಆಫ್ ಆರ್ಡರಿನಲ್ಲಿ ಏನೂ ತಿರುಳಿಲ್ಲ ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿ ಸಭೆಯ ಕಾಲವನ್ನು ಅಪವ್ಯಯ ಮಾಡಿದ್ದಾರೆ.

Sri A. R. BADARINARAYAN:-What is the penalty for misusing a point of order?

Mr. SPEAKER:-Hon. Member has to withdraw the point of order. if he does not withdraw, he can be suspended from the House.

ಶ್ರೀ ಎಂ ವಂಜೇಗೌಡ: ಸ್ವಾಮಿ, ಮುಖ್ಯ ಉದ್ದೇಶವೇನೆಂದರೆ, ಜಮೀನು ಏನಿದೆ, ರೈತರು ತಮ್ಮ ಜಮೀನನ್ನು ಉಳಿಸಿಕೊಂಡು ಶಾಂತ ರೀತಿಯಲ್ಲಿ ಬೇರೆಯವರ ಗೂಂಡಾಗಿರಿಗೆ ಒಳಗಾಗದೆ, ತಮ್ಮ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಸುಖವಾಗಿ ಜೀವನ ನಡೆಸಿಕೊಂಡು ಹೋಗುವ ವಾತಾವರಣವನ್ನು ಸರ್ಕಾರ ಕಲ್ಪಿಸಿದರೆ ಜನಗಳು ಬಹಳವಾಗಿ ಕೃತಜ್ಞರಾಗಿರುತ್ತಾರೆ ಎನ್ನುವುದು ನನ್ನ ಅಭಿಪ್ರಾಯ. ಅನೇಕ ಕಡೆ ನಮ್ಮ ರಾಷ್ಟ್ರದಲ್ಲಿ ಶಾಂತಿ ಹದಗೆಟ್ಟು, ಸುಖ ಜೀವನಕ್ಕೆ ಧಕ್ಕೆ ಬಂದಿರತಕ್ಕ ಸಂದರ್ಭದಲ್ಲಿ ಮತ್ತಷ್ಟು ಆ ರೀತಿಯ ಶಾಂತ ವಾತಾವರಣ ಹದಗೆಡದಂತೆ ರಾಜಕೀಯದಲ್ಲಿರತಕ್ಕ ವ್ಯಕ್ತಿಗಳು ಹೋದದ್ದೇ ಆದರೆ, ಬಹುಶಃ ನಮ್ಮ ಜನಗಳಿಗೆ ಅದರಿಂದ ಮಹದುಪಕಾರವನ್ನು ನಾವು ಮಾಡಬಹುದು ಎನ್ನುವುದು ನನ್ನ ಭಾವನೆ.

ಸ್ವಾಮಿ, ಈ ಸಂದರ್ಭದಲ್ಲಿ ಒಂದು ವಿಚಾರ ಹೇಳಬೇಕಾಗಿದೆ. ಕಾನೂನಿನಲ್ಲಿ ರೀ-ಕ್ಲಾಸಿಫಿಕೇಷನ್ ಆದ ಮೇಲೆ ಗ್ರಾಮದ ಮಟ್ಟದಲ್ಲಿ ಐಎಲ್. ಅಂದರೆ ಇಂಡೆಕ್ಸ ಆಫ್ ಲ್ಯಾಂಡ್ಸ್ ನಮೂನೆಯಲ್ಲಿ ಸರಕಾರ ಪ್ರಿಸ್ಕ್ರೈಬ್ ಮಾಡಿದ ಪ್ರಕಾರ ಲೆಕ್ಕವನ್ನು ಒಂದು ರೀತಿಯಲ್ಲಿ ಇಟ್ಟುಕೊಂಡು ಬಂದಿದ್ದರು. ಆದರೆ ಅದು ಈಗ ಬದಲಾವಣೆಯಾಗಿದೆ. ಇದರಿಂದ ಜನಗಳಿಗೆ ತೊಂದರೆಯಾಗಿದೆ. ಒಂದು ವೇಳೆ ಜಮೀನು ಬಗ್ಗೆ ಕೊಟ್ಟಿರತಕ್ಕಂಥ ಪಟ್ಟಿ ಕಳೆದು ಹೋದರೆ ಮತ್ತೊಂದು ಕಾಪಿ ಪಡೆಯಬೇಕು ಅಂದರೆ ಅದು ಸಿಕ್ಕುವುದಿಲ್ಲ. ಈಗ ಫಾರಂ ನಂಬರು ೩ ಗ್ರಾಮ ನಮೂನೆ ಪ್ರಿಂಟ್ ಮಾಡಿ ಗ್ರಾಮಾಧಿಕಾರಿಗಳಿಗೆ ಲೆಕ್ಕ ಬರೆಯಲು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಮೊದಲಿನ ಫಾರಂನಲ್ಲಿದ್ದ ಹಾಗೆ ಸರಿಯಾದ ವಿವರಗಳಿದ್ದ ಕಾಲಂಗಳು ಇಲ್ಲ. ರೈತನಿಗೆ ಸರ್ವೇ ನಂಬರು ಗೊತ್ತು ಇರಲಿಲ್ಲವೆಂದರೆ ತಾಲೂಕ ಆಫೀಸಿಗೆ ಹೋಗಿ ಕೇಳಿರಿ ಗೊತ್ತಾಗುತ್ತದೆ ಎಂದು ಹೇಳಲಾಗುವುದು. ಹೊಸ ನಮೂನೆಯಿಂದ ಜನರಿಗೆ ತೊಂದರೆಯಾಗಿದೆ. ಆದುದರಿಂದ ಮೊದಲು ಇದ್ದ ಹಾಗೆ ಲೆಕ್ಕ ಬರೆಯುವುದು ಒಳ್ಳೆಯದು. ಕಂದಾಯ ಮಂತ್ರಿಗಳು ಇದನ್ನು ಪೂರ್ಣವಾಗಿ ಒಪ್ಪಿಕೊಳ್ಳುತ್ತಾರೆಂದು ನನ್ನ ಭಾವನೆ. ದಯವಿಟ್ಟು ಇದನ್ನು ಪರಿಶೀಲಿಸಿ ಜಮೀನುಗಳ ಬಗ್ಗೆ ಒಂದೇ ರೀತಿಯಲ್ಲಿ ಒಂದು ರಿಕಾರ್ಡ ಇದ್ದು ಅದರಲ್ಲಿ ಖಾತೆ ಬರೆಯುತ್ತಾ ಇದ್ದರೆ ಅನುಕೂಲವಾಗುತ್ತದೆ ಮತ್ತು ಹಾಗೆ ಬರೆಯಬೇಕು. ಇದರಲ್ಲಿ ಬೆಟರ್‌ಮೆಂಟ್ ಲೀವಿ ಬಗ್ಗೆ ಒಂದು ಹೊಸ ಕಾಲಂ ಸೇರಿಸಿ ಬರೆದರೆ ಅನುಕೂಲವಾಗುತ್ತದೆ. ಇದೆಲ್ಲವನ್ನೂ ಸರಿಯಾಗಿ ಬರೆಯದೇ ಇರುವುದರಿಂದ ಈ ರಿಕಾರ್ಡ್ ಕಲಸುಮೇಲೋಗರವಾದಂತಾಗಿದೆ. ಈ ತೊಂದರೆ ನಿವಾರಣೆಯಾಗಬೇಕು ಎನ್ನುವುದಕ್ಕೆ ಗಮನ ಕೊಡಬೇಕು.

(ಶ್ರೀ ಎಂ. ಮಂಜೇಗೌಡ)

ಇನ್ನು ರಿಲೀಫ್ ವರ್ಕ್ಸ್ ಬಗ್ಗೆ ಅನೇಕ ಮಾನ್ಯ ಸ್ನೇಹಿತರು ಟೀಕೆ ಮಾಡಿದ್ದಾರೆ ಅದಕ್ಕೆ ಕಾರಣ ಕೂಡ ಇದೆ. ಇದು ವರೆಗೆ ಅನೇಕ ವರ್ಷಗಳಿಂದ ಕ್ಷಾಮ ನಿವಾರಣೆ ಕೆಲಸ ಮಾಡುತ್ತಾ ಬಂದಿದ್ದಾರೆ. ಇದರಲ್ಲಿ ಬಹು ಭಾಗ ಕೆಲಸವನ್ನು ಕಂಟ್ರಾಕ್ಟರ ಮೂಲಕ ನಡೆಸುತ್ತಾರೆ. ಆದರೆ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಕೂಲಿಕಾರರನ್ನು ಸರಿಯಾಗಿ ನೇಮಕ ಮಾಡಿಕೊಳ್ಳುವುದಿಲ್ಲ. ಕ್ಷಾಮ ನಿವಾರಣೆಯ ಕೆಲಸ ಸರಿಯಾದ ರೀತಿಯಲ್ಲಿ ನಡೆಯುವ ವ್ಯವಸ್ಥೆ ಮಾಡಬೇಕಾದದು ಅಗತ್ಯ. ನಾಲ್ಕಾರು ವರ್ಷಗಳಿಂದ ಕ್ಷಾಮದ ಮೇಲೆ ಕ್ಷಾಮ ಬರುತ್ತಿದೆ. ಅನೇಕ ಹಳ್ಳಿಗಳಲ್ಲಿ ಇಂದು ಕ್ಷಾಮ ಪರಿಸ್ಥಿತಿ ಇದೆ. ಮಂಡ್ಯ ಜಿಲ್ಲೆಯಲ್ಲಿ ಕೆರೆಗಳು ಒಣಗಿ, ನೀರು ಇಲ್ಲದೆ ಬೆಳೆ ಕೂಡ ಒಣಗಿ ಹೋಯಿತು. ಅಲ್ಲಿಯ ಅಧಿಕಾರಿಗಳಿಗೆ ಇದು ಗೊತ್ತಿದ್ದರೂ ಕೂಡ ಇನ್ನೂ ವರೆಗೆ ಯಾವ ಕಾಮಗಾರಿ ಕೆಲಸ ಪ್ರಾರಂಭ ಮಾಡಿಲ್ಲ. ಜನರಿಗೆ ತೊಂದರೆಯಾಗಿದೆ. ಆದುದರಿಂದ ಅಧಿಕಾರಿಗಳು ಅಂಥ ಪ್ರದೇಶದಲ್ಲಿ ಕಾಮಗಾರಿ ಕೆಲಸ ಜಾಗ್ರತೆ ಪ್ರಾರಂಭ ಮಾಡಿದರೆ ಒಳ್ಳೆಯದಾಗುತ್ತದೆ. ಇಂದು ಗ್ರಾಮಗಳಲ್ಲಿ ಅನೇಕ ಗೋಕಟ್ಟೆಗಳು ನಿರ್ಮಾಣವಾಗಿದೆ. ಸಣ್ಣ ನೀರಾವರಿ ಕೆರೆಮಾಡಲು ಸಾಧ್ಯವಿದೆ ಮತ್ತು ಇದರಿಂದ ಅನುಕೂಲವಾಗುತ್ತದೆ. ತಾಲ್ಲೂಕ ಅಭಿವೃದ್ಧಿ ಮಂಡಲಿಗೆ ಈ ಬಗ್ಗೆ ಪೆಚ್ಚಿನ ಅವಕಾಶ ಮಾಡಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕ್ಷಾಮದ ಮೇಲೆ ಕ್ಷಾಮ ಬಂದರೆ ಕಂದಾಯ ವಸೂಲಿ ರೆಮಿಷನ್ ಮಾಡಿ ಎಂದು ಸರ್ಕ್ಯುಲರ್ ಮೂಲಕ ಸರಕಾರ ಹೇಳಿದ್ದಾರೆ. ಆದರ ಸ್ಥಳೀಯ ಅಧಿಕಾರಿಗಳು ಕಾನೂನು ಅರ್ಥ ಮಾಡಿಕೊಂಡು ರೆಮಿಷನ್ ಕೆಲಸ ನಡೆಸುತ್ತಿಲ್ಲ ಡಿಸ್ಟ್ರಸ್ಡ ಏರಿಯಾ ಎಂದು ಡಿಕ್ಲೇರ್ ಮಾಡಿದ ಮೇಲೆ ತಾಲ್ಲೂಕಿನಲ್ಲೆಲ್ಲಾ ರೆಮಿಷನ್ ಮಾಡಬೇಕು ಮತ್ತು ಜನರಿಗೆ ತೊಂದರೆಯಾಗುವುದನ್ನು ತಪ್ಪಿಸ ಬೇಕು. ಇದರ ಬಗ್ಗೆ ಸರ್ವೆ ಮಾಡಿ ಇಡೀ ಗ್ರಾಮಕ್ಕೆ ಅನ್ವಯಿಸುವಂತೆ ಡಿಸ್ಟ್ರೆಸ್ಡ ಏರಿಯಾ ಎಂದು ಡಿಕ್ಲೇರ್ ಮಾಡಿ ಗ್ರಾಮಕ್ಕೆ ಒಟ್ಟಾಗಿ ರೆಮಿಷನ್ ಕೊಡ ಬಹುದು ಆಂದರೆ ಈ ಕೆಲಸ ಸುಲಭವಾಗುತ್ತದೆ.

ಕೊನೆಯದಾಗಿ ಡಿವಿಜನಲ್ ಕಮಿಷನರ್ ಹುದ್ದೆ ಮಾಡಿದ ಉದ್ದೇಶ ಅಧಿಕಾರ ಡೀಸೆಂಟ್ರಲೈಜ ಮಾಡುವುದಕ್ಕಾಗಿ ಇದೆ. ಆಂದರೆ ಅನುಕೂಲವಾಗುತ್ತದೆ ಎಂದು. ಆದರೆ ಆ ರೀತಿ ಹುದ್ದೆ ನಿರ್ಮಾಣವಾದ ಮೇಲೆ ಕೆಲಸ ಕಾರ್ಯ ಇನ್ನೂ ಹೆಚ್ಚು ನಿಧಾನವಾಗುವುದಕ್ಕೆ ಕಾರಣವಾಗಿದೆ. ಹಣ ಮಾತ್ರ ಖರ್ಚಾಗುತ್ತಿದೆ. ಆದುದರಿಂದ ಡಿವಿಜನಲ್ ಕಮಿಷನರ್ ಹುದ್ದೆಯನ್ನು ಖಡಾ ಖಂಡಿತವಾಗಿ ರದ್ದು ಮಾಡಬೇಕು. ಇದಕ್ಕೆ ಸರಕಾರ ತೀವ್ರಗಮನ ಕೊಟ್ಟು ಈ ಹುದ್ದೆ ವಜಾಮಾಡುತ್ತಾರೆ ಎಂದು ಭಾವಿಸಿಕೊಂಡು ಅಧ್ಯಕ್ಷರು ಮಾತನಾಡಲು ಕಾಲಾವಕಾಶ ಕೊಟ್ಟದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪಿ. ಆರ್ ರಂಗೇಗೌಡ (ಮಾಗಡಿ):—ಸನ್ಮಾನ್ಯ ಸಭಾಪತಿಗಳೇ. ನಮ್ಮ ರೆವಿನ್ಯೂ ಸಚಿವರು ಮಂಡಿಸಿದ ರೆವೆನ್ಯೂ ಡಿಮ್ಯಾಂಡುಗಳನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟು ೨ನೇ ಅಕ್ಟೋಬರ್ ೧೯೬೫ ರಂದು ಜಾರಿಗೆ ತರಲಾಯಿತು. ಇದರ ಬಗ್ಗೆ ಸಾಧಕ ಬಾಧಕ ಯೋಚನೆ ಮಾಡಬೇಕಾಗಿದೆ. The Land Reforms Act provis ons have safeguarded the tenants from eviction.

ಸ್ವಾಮಿ ಲ್ಯಾಂಡ್ ರಿಫಾರ್ಮ್ಸ್ ಜಾರಿಗೆ ತಂದಿದ್ದಾರೆ. ಆದರೆ ಇದರ ಪ್ರಾವಿಜನ್ಸ್ ಸ್ಥಳೀಯ ಅಧಿಕಾರಿಗಳಿಗೆ ಸರಿಯಾಗಿ ಗೊತ್ತಿಲ್ಲ. ಸರಿಯಾದ ತಿಳುವಳಿಕೆ ಇಲ್ಲ. ಗ್ಯಾಜಿಟ್ಟಿನಲ್ಲಿ ನೋಟಿಫಿಕೆಷನ್ ಮಾಡುತ್ತಾರೆ. ಆದರೆ ಜನಗಳಿಗೆ ಇದರ ತಿಳುವಳಿಕೆಯಾಗುತ್ತದೆಯೇ ಎನ್ನುವದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು ಲ್ಯಾಂಡ್ ರಿಫಾರ್ಮ್ಸ್ ಆಕ್ಟಿನಲ್ಲಿ ಕೆಲವು ಸೆಕ್ಷನ್ಗಳಿವೆ. ಇದರಿಂದ ಗೇಣಿದಾರನಿಗೆ ರಕ್ಷಣೆ ಇದೆ. ಉದಾಹರಣೆಗೆ Sectio 82 'Reporting of illegal transactions: Every village Officer and every officer of the Revenue, Registration and Land Records Departments sha l report to the Tribun l or other prescribed authority, as the case may be, every transaction in respect of any land in contravention of any of the provisions of this Act, which comes to the notice of such Officer. ಎಂತ ಇದೆ'' ಇಂತಹ ಅವಕಾಶವಿದೆ ಎಂದು ಎಷ್ಟು ಜನ ಸ್ಥಳೀಯ ಅಧಿಕಾರಿಗಳಿಗೆ ಗೊತ್ತಿದೆ ಅಥವಾ ಎಷ್ಟು ಜನ ಗೇಣಿದಾರರಿಗೆ ಗೊತ್ತಿದೆ ಎಂದು ನಾನು ತಿಳಿಯಬೇಕಾಗಿದೆ.

ಸ್ವಾಮಿ, ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯ ತರುತ್ತೇನೆ ಕಾನೂನು ಜಾರಿಯಲ್ಲಿ ಇದ್ದಾಗ್ಯೂ ಎಷ್ಟು ಇಲ್ಲೀಗಲ್ ಟ್ರಾನ್ಸಾಕ್ಷನ್ಸ್ ಲಿನೇ ಸೆಕ್ಷ ಪ್ರಕಾರ ಸರಕಾರದ ಗಮನಕ್ಕೆ

ಸಂಬಂಧಪಟ್ಟವರು ತಿಳಿಸಿದ್ದಾರೆ. ಎಷ್ಟು ಇವೆ ಎನ್ನುವುದಕ್ಕೆ ಅಂಕಿ ಅಂಶಗಳನ್ನು ಒದಗಿಸಿದರೆ ನಾನು ಸಂತೋಷ ಪಡುತ್ತೇನೆ. ಇದರಂತೆ ಗೇಣೀದಾರನ ರಕ್ಷಣೆ ಬಗ್ಗೆ ಮತ್ತೊಂದು ಪ್ರಾವಿಜನ್ ಇದೆ.

Section 83. "Inquiry regarding illegal transactions: The prescribed authority shall, after a summary inquiry, determine whether the transaction reported to it under Section 82 or coming to its notice in any other manner is in contravention of the provisions of this Act, and make a declaration accordingly. Any transaction so declared to be in contravention of any of the provisions of this Act shall be *null* and *void*".

ಸ್ವಾಮಿ, ಗ್ರಾಮಾಧಿಕಾರಿಗಳು ರಿಪೋರ್ಟ್ ಮಾಡಿದ್ದಾರೆಯೆ? ಪ್ರಿಸ್ಕ್ರೈಬ್ಡ್ ಅಥಾರಿಟೀಜ್ ಎಷ್ಟು ಸಮರಿ ಇನ್‌ಕ್ವಾಯರಿ ಮಾಡಿದ್ದಾರೆ ಮತ್ತು ಎಷ್ಟು ಇಲ್ಲೀಗಲ್ ಟ್ರಾನ್ಸಾಕ್ಷನ್ಸ್ ಇವೆ, ಎಷ್ಟು ನಲ್ ಅಂಡ್ ವೈಡ್ ಎಂದು ಡಿಕ್ಲೇಯರ್ ಮಾಡಿದ್ದಾರೆ? ಇದನ್ನು ಸಭೆಯ ಗಮನಕ್ಕೆ ತರಬೇಕು. ಎಷ್ಟು ಜನ ಟೆನೆಂಟ್ಸ್‌ಗಳಿಗೆ ಇದು ಗೊತ್ತಿದೆ? ಮೇಲ್ಕಂಡ ಪ್ರಾವಿಜನ್‌ಗಳನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿಸಿ ವಿಲೇಜ್ ಆಫೀಸರ್ಸ್‌ಗೆ ತಾಲ್ಲೂಕ ಆಫೀಸಿಗೆ ಪಂಚಾಯಿತಿಗಳಿಗೆ ಕಾನೂನು ಸಂಬಂಧಪಟ್ಟ ವಿಷಯವನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿಸಿ ಕೊಟ್ಟರೆ ಜೆನ್ನಾಗಿ ಇರುತ್ತದೆ. ಏಕೆಂದರೆ ಇಲ್ಲಿ ಶಾಸನ ಸಭೆಯಲ್ಲಿ ನಡೆಯತಕ್ಕ ಆನೇಕ ಕಾರ್ಯ ಕಲಾಪಗಳು ದಿನ ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಆದರೆ ಹಾಗೆ ಪತ್ರಿಕೆಗಳಲ್ಲಿ ಸರಿಯಾಗಿ ವರದಿಯಾಗುತ್ತಿಲ್ಲ. ನಾನು ಇದೇ ಸಭೆಯಲ್ಲಿ ಸ್ಪ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಆಕ್ರಮವಾಗಿ ಭಡ್ತಿಕೊಟ್ಟ ವಿಚಾರವನ್ನು ಪ್ರಶ್ನೆ ಮಾಡಿದ್ದರೆ ಆದನ್ನು ತಪ್ಪಾಗಿ ವರದಿಮಾಡಿದ್ದಾರೆ ಇದನ್ನು ನೋಡಿದರೆ ಪತ್ರಿಕೆಗಳಿಗೂ ಶ್ರದ್ಧೆಯಿಲ್ಲವೆಂದು ತಿಳಿಯುತ್ತದೆ.

ಸರ್ಕಾರದವರು ಈಗ ಮೈಸೂರ್ ಲ್ಯಾಂಡ್ ರಿಫಾರಂಸ್ ಲೀಗಲ್ ಅಸಿಸ್ಟೆಂನ್ಸ್ ಟು ಪೂರ್ (ಫಾರ್ಮರ್ಸ್) ಟೆನೆಂಟ್ಸ್ ರೂಲ್ಸ್—೧೯೬೮ ಎಂಬುದಾಗಿ ಒಂದು ರೂಲ್ಸ್‌ನ್ನು ಮಾಡಿದ್ದಾರೆ. ಆದರೆ ಅದಕ್ಕನುಗುಣವಾಗಿ ಎಷ್ಟು ಜನ ಬಡ ಟೆನೆಂಟ್ಸ್‌ಗೆ ಹಾಗೆ ಲೀಗಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ ಎಂಬುದಕ್ಕೆ ಅಂಕೀಅಂಶಗಳನ್ನು ತಿಳಿಸಬೇಕು. Rule 6 says:—

"Fees for legal practitioners: — The fees to be paid to the Legal Practitioners authorised to appear for a poor tenant under these rules shall be as follows:—

(1) before the Tribunal or Assistant Commissioner or Deputy Commissioner, Thirty rupees per case;

(2) before the Appellate Authority or the Mysore Revenue Appellate Tribunal, Rupees Seventy-five per case;

ಸ್ವಾಮಿ ಇಲ್ಲಿ ಲೀಗಲ್ ಪ್ರಾಕ್ಟೀಷನರುಗಳಾಗಿ ಕೆಲಸಮಾಡತಕ್ಕ ಜನರು ಆನೇಕರಿದ್ದಾರೆ. ರೆವಿನ್ಯೂ ಟ್ರೈಬ್ಯುನಲ್‌ನಲ್ಲಿ ಎಷ್ಟು ಜನರಿಗೆ ತಮ್ಮ ವಾದಗಳನ್ನು ಮಂಡಿಸಿ ವ್ಯವಹಾರ ನಡೆಸುವುದಕ್ಕೆ ಶಕ್ತಿಯಿದೆ? ನಾವು ಅವರಿಗೆ ಕೊಡುತ್ತಿರುವ ಸಹಾಯಧನವೂ ಕೂಡ ಬಹಳ ಕಡಮೆ ಅಲ್ಲದೆ ಯಾರ ವರಮಾನ ವರ್ಷಕ್ಕೆ ೧೨೦೦ ರೂಪಾಯಿಗಳಿಗೆ ಕಡಿಮೆ ಇರುತ್ತದೋ ಅಂಥವರಿಗೆಲ್ಲಾ ಸರ್ಕಾರದವರು ಲೀಗಲ್ ಅಸಿಸ್ಟೆನ್ಸ್‌ನ್ನೂ ಕೂಡ ಆ ಲೀಗಲ್ ಪ್ರಾಕ್ಟೀಷನರ್ ಆಕ್ಟ್‌ನಲ್ಲಿ ಹೇಳಿರುವುದಕ್ಕನುಸಾರವಾಗಿ ಧನಸಹಾಯವನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಳೆದ ೪-೫ ವರ್ಷಗಳಲ್ಲಿ ನಾವು ಪ್ರಕೃತಿವಿಕೋಪಗಳಾಗಿ ಮಳೆ ಬೆಳೆ ಇಲ್ಲದೆ ಆನೇಕ ರೀತಿಯಲ್ಲಿ ತೊಂದರೆಗೊಳಗಾಗಿದ್ದೇವೆ. ೪ ಆಣೆಗಳ ಬೆಳೆಯಾಗದೆ ಕಡೆ ಕಂದಾಯ ಮಾಫಿಮಾಡಬೇಕೆಂಬ ನಿಬಂಧನೆ ಇದ್ದರೂ ಮತ್ತು ಆದಕ್ಕೆ ಸ್ಥಳೀಯ ಅಧಿಕಾರಿಗಳಿಂದ ಶಿಫಾರ್ಸಾಗಿ ಬಂದಿದ್ದರೂ ಮೇಲಧಿಕಾರಿಗಳನ್ನು ಆರ್ಡರ್ ಮಾಡದೆ ಅವುಗಳನ್ನು ಹಾಗೇ ಇಟ್ಟುಕೊಂಡಿದ್ದಾರೆ. ಇನ್ನು ಆನೇಕ ಕಡೆಗಳಲ್ಲಿ ಮಳೆಬಾರದೆ ಕೆರೆಗಳಿಗೆ ನೀರು ಬಾರದೆ ಬೆಳೆಯಾಗಿರುವುದಿಲ್ಲ. ಅಂಥ ಕಡೆ ಎರಡಾಣೆ ಬೆಳೆಯಾಗದಿದ್ದರೂ ಅಧಿಕಾರಿಗಳು ರೈತನ ಮನೆಯ ಮುಂದೆ ಟಾಂ ಟಾಂ ಹೊಡೆಸಿ ಜುಲುಂನಿಂದ ಕಂದಾಯವನ್ನು

(ಶ್ರೀ ಸಿ. ಆರ್. ರಂಗೇಗೌಡ)

ವಸೂಲ್ಮಾಡುತ್ತಿದ್ದಾರೆ. ಅಲ್ಲಿ ಒಂದು ಹಿಂದಿನ ಪಾಳ್ಯೆಗಾರ ಕೆಂಪೇಗೌಡನು ಕಟ್ಟಿಸಿದ ಕೆರೆ ಅಲ್ಲಿದೆ ಅದೂ ಸಹಾ ಈ ವರ್ಷ ತುಂಬಿಲ್ಲ. ಅಲ್ಲಿಯ ರೈತರಿಂದ ಕೂಡ ಜುಲುಂನಿಂದ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ. ಸರ್ಕಾರದವರು ಅದನ್ನು ಕಟ್ಟಿಸದೆ ಇದ್ದಾಗ್ಗೂ ಇವರು ಯಾವ ನೀತಿಯ ಮೇಲೆ ಅಲ್ಲಿ ವಾಟರ್ ರೇಟನ್ನು ವಸೂಲ್ಮಾಡುತ್ತಾರೆ? ಎಲ್ಲಿ ಮಳೆ ಬೆಳೆಗಳು ಆಗುವುದಿಲ್ಲವೋ ಅಲ್ಲಿ ಜನಗಳಿಂದ ಬಲವಂತವಾಗಿ ಕಂದಾಯವನ್ನು ವಸೂಲ್ಮಾಡಬಾರದೆಂಬ ತಿಳುವಳಿಕೆಯನ್ನು ಅಧಿಕಾರಿಗಳಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಪಕ್ಕಾ ಫೋಡಿ ಆಗದೆ ಇರತಕ್ಕಂಥ ಗ್ರಾಮಗಳು ೩೦ ಇರುತ್ತವೆ ಅಲ್ಲಿನ ಜಮೀನುಗಳು ಇನ್ನು ಫೋಡಿಯಾಗಿಲ್ಲ ಈಗ ಆನೇಕಲ್ ತಾಲ್ಲೂಕಿನಲ್ಲಿ ಫೋಡಿ ಕೆಲಸವನ್ನು ಪ್ರಾರಂಭಿಸಿದ್ದಾರೆ. ಅದೇ ಪ್ರಕಾರ ನಮ್ಮ ಮಾಗಡೀ ತಾಲ್ಲೂಕಿಗೂ ಒಂದು ಸ್ಪೆಷಲ್ ಸ್ಕ್ವಾಡನ್ನು ನೇಮಕ ಮಾಡಿ ಅಲ್ಲಿಯ ಜಮೀನುಗಳನ್ನು ಜಾಗ್ರತೆ ಫೋಡಿ ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ. ಈ ಕೆಲಸ ಆಗದೆ ರೈತರಿಗೆ ಬಹಳ ತೊಂದರೆಯಾಗಿದೆ. ಇನ್ನು ಕೆಲವು ಗ್ರಾಮಗಳಲ್ಲಿ ಹದ್ದುಬಸ್ತನ್ನು ಮಾಡಿಕೊಡಲು ಸರ್ಕಾರದವರು ಯಾವ ಕ್ರಮಗಳನ್ನೂ ಕೈಕೊಂಡಿಲ್ಲ. ರೈತರು ದುಡ್ಡನ್ನು ಕಟ್ಟಿ ೨ ವರ್ಷಗಳ ಮೇಲಾಗಿದೆ. ಆದರೆ ಅಲ್ಲಿ ಇನ್ನೂ ಆ ಜಮೀನುಗಳ ಹದ್ದುಬಸ್ತನ್ನು ಮಾಡಲಿಲ್ಲ. ಈ ವಿಚಾರದಲ್ಲಿ ನಾನು ಮಾನ್ಯ ಲಿನ್ಲೂ ಮಂತ್ರಿಗಳಿಗೆ ಒಂದು ಪತ್ರವನ್ನು ಕೂಡ ಬರೆದಿದ್ದೆ. ನಮ್ಮಲ್ಲಿ ಜಯಪುರ ಮತ್ತು ವಿಜಯಪುರಗಳೆಂಬ ಎರಡು ಗ್ರಾಮಗಳಿವೆ. ಅಲ್ಲಿ ಕಣ್ವಾಕೆರೆ ಕೆರೆಯನ್ನು ಕಟ್ಟಿ ೨೦—೩೦ ವರ್ಷಗಳ ಮೇಲಾಯಿತು. ಆ ಕೆರೆಯ ಕೆಳಗೆ ಜಮೀನು ಸರ್ವೆ ಇನ್ನೂ ಆಗಿಲ್ಲ. ಆದಕ್ಕೆ ಕೂಡಲೇ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ಇಲಾಖೆಯ ಬಗ್ಗೆ ಅಕ್ರಮ ಭಕ್ತಿ ವಿಚಾರದಲ್ಲಿ ಆಗಲೇ ಹೇಳಿದ್ದೇನೆ. ಅಲ್ಲಿ ಒಬ್ಬ ಸಾಮಾನ್ಯ ನೌಕರರನ್ನು ವರ್ಗಮಾಡತಕ್ಕ ಅಧಿಕಾರಿ ಇದ್ದಾರೆ. ಆತನಿಗೆ ಒಂದಾವರ್ತಿ ಈ ಜನರಲ್ ಟ್ರಾನ್ಸ್ಫರ್ ಮಾಡಿದಾಗ ದುಡ್ಡಿನ ಸುರಿಮಳೆ ಆಗುತ್ತದೆ. ಅವರು ನಾಳೆ ಬರುವ ಜೂನಿನಲ್ಲಿ ನಿವೃತ್ತಿಯಾಗುವವರಿದ್ದಾರೆಂದು ಕೇಳಿದೆ. ಆದ್ದರಿಂದ ಅವರು ನಿವೃತ್ತಿಯಾಗುವ ಮುನ್ನ ಈ ಜನರಲ್ ಟ್ರಾನ್ಸ್ಫರುಗಳನ್ನು ಮಾಡದಂತೆ ಸರ್ಕಾರದವರು ನಿಲ್ಲಿಸಿದ ಪಕ್ಷಕ್ಕೆ ಬಡನೌಕರರಿಗೆ ದುಡ್ಡೂ ಉಳಿಯುತ್ತದೆ ಮತ್ತು ಇಲ್ಲಿ ನಮ್ಮೆಲ್ಲರಿಗೂ ಗೌರವವೂ ಬರುತ್ತದೆಂದು ಹೇಳುತ್ತೇನೆ.

ಇನ್ನು ನಮ್ಮ ಮಾಗಡಿ ತಾಲ್ಲೂಕಿನಲ್ಲಿ ೨೪೦ ಫಡಾರೆಷ್ಟ್ಯೂರೇಷನ್ ಕೇಸುಗಳಿರುತ್ತವೆ. ಅವು ಜನರ ಬಳಕೆಯಲ್ಲಿದ್ದರೂ ಸರ್ಕಾರಿ ಲೆಕ್ಕದಲ್ಲಿ ಸರ್ಕಾರಿ ಬಂಜರೆಂತಲೇ ಇದೆ. ವಿಲೇಜು ಆಫೀಸಿನವರು ರೈತರುಗಳಿಂದ ದುಡ್ಡನ್ನು ವಸೂಲ್ಮಾಡಿಕೊಂಡು ಅದನ್ನು ಸರ್ಕಾರಕ್ಕೂ ಕೊಡದೆ ತಿಂದು ಹಾಕಿದ್ದಾರೆ ಅತ್ತ ರೈತರಿಗೂ ಜಮೀನನ್ನು ರೆಸ್ಟೋರ್ ಮಾಡಿ ಕೊಟ್ಟಿಲ್ಲ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಜಮೀನು ಹಂಚಿಕೆ ವಿಚಾರಕ್ಕೆ ಬಂದರೆ ಗೋಮಾಳ ಭೂಮಿಯನ್ನು ಪಂಚಾಯತಿಗಳ ಕಸ್ಟಡಿಯಲ್ಲಿಡಲಾಗಿದೆ ಅವರು ಆ ಜಮೀನುಗಳನ್ನು ಒಬ್ಬೊಬ್ಬರಿಂದಲೂ ೨೫—೩೦ ರೂಪಾಯಿಗಳ ಲಂಚ ಪಡೆದು ಮಾರಾಟ ಮಾಡುತ್ತಿದ್ದಾರೆ. ಹೀಗೆ ನಮ್ಮಲ್ಲಿ ಎರಡು ಗ್ರಾಮಗಳಲ್ಲಿ ನ್ಯಾತನಹಳ್ಳಿ ಮತ್ತು ಮಾಯಸಾಯಕನಹಳ್ಳಿ ಈ ಎರಡು ಕಡೆಗಳಲ್ಲಿ ಹೀಗಾಗಿದೆ. ಇನ್ನು ಅವ್ವೇರಹಳ್ಳಿ ಎಂಬ ಗ್ರಾಮದಲ್ಲಿ ೪೦೦—೫೦೦ ಹುಣುಸೇ ಮರಗಳಿದ್ದವು. ಅವುಗಳಿಂದ ಹೆಚ್ಚಿನ ಆದಾಯವು ಉತ್ಪನ್ನ ಬರುತ್ತಿತ್ತು, ಈಗ ವರ್ಷ ವರ್ಷ ಕಡಿಮೆಯಾಗುತ್ತಿದೆ. ಆದಕ್ಕೆ ಕಾರಣವೇನು ಎಂಬುದನ್ನು ಅಧಿಕಾರಿಗಳು ಕಂಡುಹಿಡಿದಿಲ್ಲ. ಆ ಆಮರಾಯಿ ಮರಗಳು ಮಾಯವಾಗುತ್ತಿವೆ.

ಈ ದಿವಸ ನಮ್ಮ ರಾಜ್ಯವನ್ನು ಸೆಕ್ಯೂಲರ್ ಸ್ಟೇಟ್ ಎಂದು ಹೇಳಲಾಗುತ್ತಿದೆ ಆದರೆ ಇಲ್ಲಿಯ ಸರ್ಕಾರದಲ್ಲಿ ರಿಲಿಜಿಯಸ್ ಆಂಡ್ ಛಾರಿಟಿಬಲ್ ಇನ್ಸ್ಟಿಟ್ಯೂಷನ್ಸ್‌ಗಳೆಂದು ಬೇರೆ ಬೇರೆ ಇರುತ್ತವೆ. ಆದ್ದರಿಂದ ಇವುಗಳನ್ನೂ ಮತ್ತು ವಾಕ್ಫ್ ಬೋರ್ಡ್ ಎರಡಕ್ಕೂ ಈಒಂದೇ ಕಾನೂನನ್ನು ಮಾಡಬೇಕೆಂದು ಸಲಹೆ ಮಾಡಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಯನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P.M.

†SRI J. P. SARWESH (Serum). Mr Speaker, Sir, while opposing the demands that are placed before the House, I would like to say a few words on the points which many of the Hon. members have not dealth with.

Let me say a word regarding Village Accountants Particularly the trained Accountants have been doing very good work. They are maintaining the records in a way much better than the Patwaris. The Village patwaris do not make proper entries and they write different names in pahni registers. There is no provision in the Land Revenue Code to punish these erring Patwaris. I feel that Government should take steps to give training to all Patwaris. Further, the Government should also take necessary steps to see all the posts that are being assigned to the Patwaris are filled up by trained Village Accountants before the end of April this year.

One other thing in this behalf is that the persons who are working as Village Patwaris since centuries belong to only one or two castes. Government should make an attempt to give representation to almost all the communities while filling up the posts of Village Accountants.

Regarding gairon or grazing lands, I once brought it to the notice of the Hon. Revenue Minister that Government has utterly failed to implement the Land Reforms Act and take over the excess lands from the landholders. Sir, at present, under this gairon land, for each of the hundred cattle-head about 30 acres of land is reserved. I feel that it should be reduced to 10 acres and the remaining 20 acres of land should be given to the landless people and thereby the Government can help the poor and landless people.

Sir, in Gulbarga many of the labourers have occupied Government lands. Though the Village patwaris collect land revenue from these landholders, they do not make entries in the record and also do not issue any receipt for the revenue collcetions. The Deputy Commissioner of Gulbarga is not prepared to carry out the instructions and orders issued by the Government. I would therefore request the Hon. Minister to instruct the Deputy Commissioner of Gulbarga to work in the true spirit to suit the policies of the Government and not according to his own whims and fancies. Recently, many people have occupied Government grazing lands and the Deputy Commissioner has attached many of the standing crops in Guldarga. I represented this to both the Deputy Commissioner and the Hon. Minister for Revenue I am sorry to say, that in spite of the Hon. Minister saying that he has instructed the Deputy Commissioner to release those standing crops, the Deputy Commissioner has not done anything in this matter. I would like the Hon. Minister to issue such orders as were issued by Sri

(SRI J. P. SARWESH)

Kadidal Manjappa stating that wherever Harijans and Girijans are in possession of Government lands, they should not be evicted till the Government appoints a committee to go into the matter and see whether the cultivators have illegally occupied the lands.

Recently, the Hon. Chief Minister made a statement that about 10 lakhs acres of land will be distributed. I want to know many acres of land Government are going to distribute in Gulbarga where there is no land available! Just now, the Hon. Member Sri Devaraj Urs referred to the increase of population in our country. The birth rate is 2 crores 10 lakhs every year and about 8 lakhs people die every year that is to say, every year 1 crore 30 lakhs of people are added on to our population. The Goverument should see that the landlords who are more interested in taking up Public Works Department contracts, etc., rather than taking up agriculture work, do not possess any lands. Their lands should be given to actual tillers and unless that is done we cannot expect the production of our country to increase. I want to know which are all the places where 10 lakhs acres of land is to be distributed by the Government? I am prepared to provide one thousand families who are prepared to go and stay in any corner of the State by forming a new village and taking up agricultural profession on co-operative farming basis.

Sir, recently the Hon. Revenue Minister was kind enough to visit Gulbarga District, he also visited the Serum taluka. A number of Harijans and Girijans submitted to him that nearly 50 acres of land is available for cultivation and it does not belong to anybody. Nobody is cultivating the land. Recently a tank has also been built there. The Revenue officers have said that there is no use in giving this land to the poor people. And that It should be auctioned. Sir, when the Government wants to uplift the backward people, I do not know, how they could think of auctioning the lands? In auctions, only the persons who are capable of paying heavy price would get the land and not the poor and deserving Harijans and Girijans people. I therefore urge upon the Government to see that wherever such lands are available in our State are not auctioned, but given to the landless poor especially to those who are actually tillers of land.

In regard to Land Grant Rules, the Hon. Minister for Revenue takes pride in saying that the Government has been very progressive in this matter. I would like to bring to his notice, that in Nizam's time in Hyderabad, the Government issued a progressive circular stating that even if there is less grazing land and if the tillers are not in possession of any Government lands, they should be granted the lands which they have been cultivating and they should in no case be evicted. But unfortunately Sir, our Government which believes and preaches socialism wants to evict the landless poor people, the tillers

and weaker sections of the community. I would therefore urge upon the Government to see that even if the grazing land is meagre in a particular village, the actual tillers of lands should not be evicted and the pattas of those lands should be issued in their names.

With these words, I thank the Chair and conclude my speech.

†ಶ್ರೀ ಜೆ ಆರ್. ಹಾಲಸ್ವಾಮಿ (ಜಗಳೂರು) :—

ಸನ್ಮಾನ್ಯ ಸಭಾಪತಿಗಳೇ, ಸ್ವಾತಂತ್ರ್ಯ ಬಂದು ಹಲವಾರು ವರ್ಷಗಳಾದುವು. ಆದರಲ್ಲಿ ಕೆಲವು ವರ್ಗದ ಜನರ ಸರ್ಕಾರದ ಮನ ಒಲಿಸಿಯೋ ಅಥವಾ ಹೆದರಿಸಿಯೋ ಅಥವಾ ಸರ್ಕಾರಕ್ಕೆ ದ್ರೋಹ ಮಾಡಿಯೋ ಸರ್ಕಾರದ ಅನುಕೂಲತೆಗಳನ್ನು ಪದೇ ಪದೇ ಪಡೆಯುತ್ತಿದ್ದಾರೆ. ಉದಾಹರಣೆ ಹೇಳುವುದಾದರೆ ಸರ್ಕಾರಿ ನೌಕರರು, ಬ್ಯಾಂಕ್ ಸಿಬ್ಬಂದಿ ವರ್ಗದವರು ಕಾರ್ಖಾನೆಯಲ್ಲಿ ಕೆಲಸಮಾಡತಕ್ಕಂಥಾವರು, ಕಾರ್ಪೋರೇಷನ್‌ನಲ್ಲಿ ಕೆಲಸ ಮಾಡತಕ್ಕಂಥಾವರು, ಎಲೆಕ್ಟ್ರಿಸಿಟಿ ಬೋರ್ಡ್‌ನೌಕರರುರ್ ಇನ್ನೂ ಅನೇಕ ಸಂಸ್ಥೆಗಳಲ್ಲಿ ಮಾಡತಕ್ಕಂಥಾವರು ಪದೇ ಪದೇ ಬೋನಸ್, ಸಂಬಳ ಇತ್ಯಾದಿಯಾಗಿ ಜಾಸ್ತಿ ಮಾಡುವುದು ಈ ರೀತಿಯಾದ ಅನುಕೂಲತೆಗಳನ್ನು ವರ್ಷ ವರ್ಷೇ ಪಡೆಯುತ್ತಿದ್ದಾರೆ. ಅದೇ ರೀತಿ ಇನ್ನೂ ಕೆಲವು ವರ್ಗದ ಜನ ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾ ಇರುವವರು ಕನಿಷ್ಟ ಪಕ್ಷ ಎರಡು ಹೊತ್ತು ಊಟಕ್ಕೆ ಏನೂ ತೊಂದರೆ ಇಲ್ಲದೆ ಜೀವನ ನಡೆಸುತ್ತಿದ್ದಾರೆ ಆದೇ ರೀತಿ ನೀರಾವರಿ ಭಾಗದಲ್ಲಿ ಇರತಕ್ಕಂಥ ರೈತರೂ ಕೂಡ ಜೀವನ ಮಾಡುತ್ತಿದ್ದಾರೆಂದು ಹೇಳಿದರೂ ಕೂಡ ತಪ್ಪಾಗಲಾರದು. ೧೨೦ ಕ್ಕೆ ೮೦ ಪರ್ಸೆಂಟು ಡ್ರೈ ಲ್ಯಾಂಡ್ ರೈತರು ಏನು ಇದ್ದಾರೆ ಅವರಿಗೆ ಅನೇಕ ವರ್ಷಗಳಿಂದಲೂ ಸಕಾಲದಲ್ಲಿ ಮಳೆ ಬಾರದೆ, ಒಂದು ಬೆಳೆ ಮಳೆ ಒಂದರೂ ಬೆಳೆಗಳು ರೋಗರುಜಿನಗಳಿಗೆ ತುತ್ತಾಗಿ ಈಡಾಗಿರತಕ್ಕಂಥ ಕಣ್ಣಿನಲ್ಲಿ ನೀರು ಇಡುವಂಥ ಅಂಶವನ್ನು ಪ್ರತಿಯೊಬ್ಬರು ಕಾಣುತ್ತಾ ಇದ್ದೇವೆ. ಉದಾಹರಣೆಗೆ ನಮ್ಮ ಜಗಳೂರು ಪ್ರದೇಶ ಹಿಂದುಳಿದಿರತಕ್ಕಂಥ ಪ್ರದೇಶ. ಅಲ್ಲಿ ದಿನ ಬೆಳಗಾದರೆ ಇಂತಹ ಕಠಿಣ ಪರಿಸ್ಥಿತಿಯನ್ನು ನೋಡುತ್ತಾ ಇದ್ದೇನೆ.

ಸರ್ಕಾರ ೧೦೦ ಕ್ಕೆ ೮೦ ರಷ್ಟು ಒಣ ಜಮೀನನ್ನು ಹೊಂದಿರುವ ರೈತ ವರ್ಗ ಏನಿದೆ ಅವರ ಕಡೆ ಬಹಳ ನಿರ್ಲಕ್ಷ್ಯ ವಹಿಸದೆ, ಮಲತಾಯಿ ಧೋರಣೆ ತಾಳುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತಿನ ಪರಿಸ್ಥಿತಿ ಮುಂದುವರಿಯುತ್ತಾ ಹೋದರೆ ಒಂದು ಕ್ರಾಂತಿ ಆಗುತ್ತದೆಂದು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡಬಯಸುತ್ತೇನೆ ಮತ್ತು ಅಭಾವ ಪರಿಸ್ಥಿತಿ ಬಂದಾಗ ಸರ್ಕಾರದವರು ರಿಲೀಫ್ ಕಾಮಗಾರಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ, ಅದಕ್ಕೆ ಬದಲಾಗಿ ಶಾಶ್ವತವಾದ ಪರಿಹಾರ ಕ್ರಮ ತೆಗೆದುಕೊಳ್ಳಬೇಕೆಂದು ಪದೇ ಪದೇ ಅಸೆಂಬ್ಲಿಯೊಳಗೆ ಕೂಡ ಹೇಳಿದ್ದೇನೆ; ಮತ್ತು ಮಾನ್ಯ ಗೋಪಾಲಗೌಡರು ಈ ಸಭೆಯಲ್ಲಿ ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಅಭಾವ ಪರಿಸ್ಥಿತಿಯನ್ನು ಅನುಭವಿಸುತ್ತಿರುವುದರಿಂದ ಲಕ್ಷಾಂತರ ರೂಪಾಯಿಗಳನ್ನ ಈ ರೀಲೀಫ್ ಕಾಮಗಾರಿಗಳಿಗಾಗಿ ಖರ್ಚುಮಾಡಿದ್ದಾರೆ. ಅದಕ್ಕೆ ಬದಲಾಗಿ ಶಾಶ್ವತವಾದ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಮಾಡಿ ಅದಕ್ಕಾಗಿ ಒಂದು ಕಮಿಟಿಯನ್ನು ನೇಮಕಮಾಡಿ, ಅದರಲ್ಲಿ ಉಪಮಂತ್ರಿಗಳಾದ ಕೆಂಡಜ್ಜಿ ಬಸಪ್ಪನವರು ಮತ್ತು ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಬೋರಯ್ಯನವರು ಅನೇಕಸಾರಿ ಮೀಟಿಂಗುಗಳನ್ನು ನಡೆಸಿದರು ಆದರೂ ಕೂಡ ಯಾವುದೇ ವಿಧವಾದ ಶಾಶ್ವತವಾದ ಪರಿಹಾರಕ್ರಮವನ್ನು ಕೈಗೊಂಡಿಲ್ಲ. ಚಿತ್ರದುರ್ಗ ಕೋಲಾರ, ತುಮಕೂರು, ಗುಲ್ಬರ್ಗ, ಬಿಜಾಪುರ ಇನ್ನಿತರ ಜಿಲ್ಲೆಗಳಲ್ಲಿ ಪದೇ ಪದೇ ರೈತರು ಅಭಾವ ಪರಿಸ್ಥಿತಿಯನ್ನು ಅನುಭವಿಸುವುದರಿಂದ ಅಂತಹ ಕಡೆ ಶಾಶ್ವತವಾದ ಪರಿಹಾರ ಕ್ರಮವನ್ನು ಕೈಕೊಳ್ಳಬೇಕೆಂದು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ಒಂದು ಅಭಾವ ಪರಿಸ್ಥಿತಿ ರಾಜ್ಯದಲ್ಲಿ ಬಂದಾಗ ಸರ್ಕಾರದವರು ಕುದಾಯ ಸಸ್ಪೆನ್ಷನ್ ಅಥವಾ ಕಮಿಷನ್ ಮಾಡಿರುವುದು ಗೆಜೆಟ್ಟಿನಲ್ಲಿ ಬರುವಾಗ ಬಹಳ ವಿಳಂಬವಾಗುತ್ತದೆ. ಮತ್ತು ಸರ್ಕಾರ ಗೆಜೆಟ್ಟಿನಲ್ಲಿ ಅನೌನ್ಸ್ ಮಾಡುವುದರೊಳಗೆ ಜಿಲ್ಲೆಯಲ್ಲಿ ಇರತಕ್ಕ ಸಿಬ್ಬಂದಿ ಆಗಲೀ ಎಷ್ಟೋಜನಗಳ ಹತ್ತಿರ ಕುದಾಯ ವಸೂಲು ಮಾಡಿರುವ ಮತ್ತು ಸಹಕಾರ ಸಂಘಗಳು ವಸೂಲು ಕ್ರಮಗಳನ್ನು ಕೈಗೊಂಡು ಹರಾಜು ಮುಂತಾದ ಕ್ರಮಗಳನ್ನು ಕೈಗೊಂಡಿರುವ ಅನೇಕ ಉದಾಹರಣೆಗಳನ್ನು ನಾವು ನೋಡುತ್ತಿದ್ದೇವೆ. ಈ ವಿಳಂಬವನ್ನು ತಪ್ಪಿಸುವುದಕ್ಕೋಸ್ಕರ ಮಹಾರಾಷ್ಟ್ರದಲ್ಲಿ ಒಂದು ಕಾನೂನು ಜಾರಿಯಲ್ಲಿದೆ ಎಂದು ಕೇಳಿದ್ದೇವೆ. ಇಲ್ಲಿಯೂ ಕೂಡ ಜಿಲ್ಲಾಧಿಕಾರಿಗಳಿಗೆ ಕುದಾಯ ಸಸ್ಪೆನ್ಷನ್ ಅಥವಾ ರೆಮಿಷನ್ ಮಾಡತಕ್ಕ ಅಧಿಕಾರ ಕೊಡಬೇಕು. ಹಾಗೆ ಮಾಡಿದರೆ ಆದರಿಂದ ಬೇಗನೆ ಪರಿಹಾರ ಒದಗಿಸಲು ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

(ಶ್ರೀ ಜೆ. ಆರ್. ಹಾಲಸ್ವಾಮಿ)

ಹಾಗೆ ಮಾಡದೆ ಹೋದರೆ ಅದಕ್ಕೆ ಒಂದು ಗಾದೆ ಇದೆ "ಕೊಟ್ಟವನು ಕೋಡಂಗಿ ಈಸಿಕೊಂಡವನು ವೀರಭದ್ರ" ಎನ್ನುವ ರೀತಿಯಲ್ಲಿ ಈಗಿನ ಪರಿಸ್ಥಿತಿ ಆಗಿದೆ. ಆದುದರಿಂದ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟರೆ ತಕ್ಷಣ ರೈತರಿಗೆ ಅನೂಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

SRI H. V. KOUJALGI :—If the Hon. Member yields, I want to bring to his notice that as soon as the Deputy Commissioner recommends for remission or suspension of land revenue, automatically he stops recovery. Recovery is not made. He has got to recommend which village is fit for suspension or remission.

ಶ್ರೀ ಜೆ. ಆರ್. ಹಾಲಸ್ವಾಮಿ:—ರೆಕಮಂಡ್ ಮಾಡುವುದಕ್ಕೆ ಅಧಿಕಾರ ಇದೆ. ಆದರೆ ಗೆಜೆಟಿನಲ್ಲಿ ಪಾಯಿಷ್ ಆಗಿ ಬರುವರೆಗೂ ವಸೂಲಿಮಾಡುವುದನ್ನು ನಿಲ್ಲಿಸದೆ ಕ್ರಮ ಕೈಕೊಳ್ಳುತ್ತಾರೆ. ನಮ್ಮ ರೆವಿನ್ಯೂ ಮಂತ್ರಿಗಳು ಬಂದ ಮೇಲೆ ಅನೇಕ ವಿಧವಾದಂಥ, ಉತ್ತಮವಾದಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಲ್ಯಾಂಡ್ ಅಸೆಸಮೆಂಟ್ ಬಗ್ಗೆ ೪೦ ಲಕ್ಷ ರೈತರಿಗೆ ನೋಟೀಸ್ ಕೊಟ್ಟು ಅವರಿಂದ ಆಬ್‌ಜಕ್ಷನ್ ಕಾಲ್‌ಫಾರ್ ಮಾಡಿರುವುದು ಸ್ವಾಗತಾರ್ಹವಾದ ವಿಷಯ. ಮತ್ತು ರೈತರಿಗೆ ತಮ್ಮ ಅಸೆಸ್‌ಮೆಂಟ್ ಬಗ್ಗೆ ಮಾಹಿತಿ ಸರಿಯಾಗಿ ತಿಳಿದಿರುವುದಿಲ್ಲ. ರೆಕಾರ್ಡ್ ಆಫ್‌ರೈಟ್ಸ್‌ನಲ್ಲಿ ಏನೇನು ಬರೆದಿರುತ್ತಾರೆ ಅದು ಎಲ್ಲಾ ರೈತರಿಗೆ ತಿಳಿದಿರುವುದಿಲ್ಲ. ಬ್ಯಾಂಕುಗಳಿಂದ ಆಗಲಿ, ಸಹಕಾರ ಸಂಘಗಳಿಂದ ಆಗಲಿ, ಸಾಲಪಡೆಯಬೇಕಾದರೂ ಎಲ್ಲಾ ರೆಕಾರ್ಡ್ಸ್ ಒದಗಿಸಬೇಕೆಂದರೆ ಬಹಳ ದಿವಸಗಳ ಕಾಲ ಹಿಡಿಯುತ್ತದೆ. ಹೀಗಾಗಿ ಬಹಳ ತೊಂದರೆಯನ್ನು ರೈತರು ಅನುಭವಿಸುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೋಸ್ಕರ ಸರಕಾರದವರು ಸರ್ವೆ ನಂಬರು, ಅಸೆಸ್‌ಮೆಂಟ್, ಯಾವ ಯಾವ ಬೆಳೆಯನ್ನು ಯಾವ ಯಾವ ಜಮೀನಿನಲ್ಲಿ ಬೆಳೆಯುತ್ತಾರೆ ಎನ್ನುವ ರೈತನಿಗೆ ಬೇಕಾದ ಪ್ರತ್ಯಕ್ಷ ಮತ್ತು ಪರೋಕ್ಷ ವಿವರಗಳನ್ನು ಒಳಗೊಂಡಂತಹ ಪಠ್ಯ ಪುಸ್ತಕಗಳನ್ನು ಸರಕಾರದವರು ಪ್ರಿಂಟ್ ಮಾಡಿಸಿದ್ದಾರೆ ಮತ್ತು ಅನೇಕ ಕಡೆ ಹಂಚಿದ್ದಾರೆ ಎಂದು ಕೇಳಿದ್ದೇನೆ. ಆದಷ್ಟು ಜಾಗ್ರತೆ ರೈತರಿಗೆ ಆ ಪಠ್ಯ ಪುಸ್ತಕಗಳ ವಿಲೇವಾರಿ ಆಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ನಿಜವಾಗಿಯೂ ಇದು ರೆವಿನ್ಯೂ ಇತಿಹಾಸದಲ್ಲಿ ಸ್ವಾಗತಾರ್ಹವಾದ ಮತ್ತು ಹೆಮ್ಮೆ ಪಡತಕ್ಕ ವಿಷಯ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಈ ಬಗ್ಗೆ ಸರಕಾರಕ್ಕೆ ಅಭಿನಂದನೆಯನ್ನೂ ಕೂಡ ಸಲ್ಲಿಸ ಬಯಸುತ್ತೇನೆ.

ಒಂದು ಪಠ್ಯ ಪುಸ್ತಕದಿಂದ ಇನ್ನೊಂದು ಅನುಕೂಲವಾಗುತ್ತದೆ ಎಂದು ಕೇಳಿದ್ದೇನೆ. ಷೆಡ್ಯೂಲ್ ಬ್ಯಾಂಕುಗಳಿಂದ ಸಾಲಪಡೆಯತಕ್ಕ ಸಂದರ್ಭದಲ್ಲಿ ಸಬ್‌ರಿಜಿಸ್ಟ್ರಾರ್‌ರ ಆಫೀಸಿಗೆ ಹೋಗಿ ಪತ್ರಗಳನ್ನು ರಿಜಿಸ್ಟರ್ ಮಾಡುವ ಸಂದರ್ಭದಲ್ಲಿ ಪಠ್ಯಪುಸ್ತಕಗಳಲ್ಲಿ ಬ್ಯಾಂಕಿನವರು ಎಫ್ಬ್ರಮಾಡಿದರೆ ಸಾಕು ಎಂದು ಕೇಳಿದ್ದೇವೆ. ನಿಜವಾಗಿಯೂ ಕೂಡ ಇದು ಸಂತೋಷಪಡತಕ್ಕ ವಿಷಯ. ಸರಕಾರಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಎಲ್ಲೆಲ್ಲಿ ಅತಿಕ್ರಮಣ ನಡೆದಿದೆಯೋ ಅಂತಹ ಕಡೆ ಸರ್ವೆ ಮಾಡಿಸಲಿಕ್ಕೆ ಸ್ಪೆಷಲ್ ಸಿಬ್ಬಂದಿಯನ್ನು ನೇಮಕಮಾಡಿರುತ್ತಾರೆ ಎಂದು ಕೇಳಿದ್ದೇನೆ. ಅದನ್ನು ಮಾಡಿರುವುದರಿಂದ ರೆವಿನ್ಯೂ ವರಮಾನ ಕೂಡ ಬಹಳ ಹೆಚ್ಚಾಗತಕ್ಕ ನಿರೀಕ್ಷೆ ಇದೆ. ಈಕಾರ್ಯವನ್ನು ಬೇಗನೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳ ಬಯಸುತ್ತೇನೆ.

ಇನ್ನು ಮುಜರಾಯಿ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಾದರೆ ನಮ್ಮ ರಾಜ್ಯದಲ್ಲಿ ವಿವಿಧ ಭಾಗದಲ್ಲಿ ವಿವಿಧ ರೂಪದ ಕಾನೂನುಗಳು ಇದ್ದು ಏಕರೂಪತೆ ತರುವುದಕ್ಕೆ ಸರಕಾರ ಪ್ರಯತ್ನಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಹಿಂದೆ ಮಹಾರಾಜರ ಕಾಲದಲ್ಲಿ ಇದ್ದಂಥ ಮಾನ್ಯುಯಲ್ ಮುಂದುವರಿಯುತ್ತಾ ಇವೆ ಎಂದು ಕೇಳಿದ್ದೇನೆ. ಆದುದರಿಂದ ಆದಷ್ಟು ಬೇಗನೆ ಮುಜರಾಯಿ ಇನ್‌ಸ್ಟಿಟ್ಯೂಷನ್‌ಗಳ ಮಾನ್ಯುಯಲಿನಲ್ಲಿ ಏಕರೂಪತೆಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಅನೇಕ ಲೋಪ ದೋಷಗಳು ಇವೆ. ಆದುದರಿಂದ ಈ ಬಗ್ಗೆ ವಿಕೇಂದ್ರೀಕರಣ ಕೂಡ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾನೆ. ಕೆಳಗಿನ ಮಟ್ಟದಲ್ಲಿ ತಹಸೀಲ್ದಾರರಿಗೆ, ಜಿಲ್ಲಾಧಿಕಾರಿಗಳಿಗೆ ಮುಜರಾಯಿ ಇನ್‌ಸ್ಟಿಟ್ಯೂಷನ್ನುಗಳ ಸಂಬಂಧವಾಗಿ ಹೆಚ್ಚಿನ ಹಣವನ್ನು ಖರ್ಚುಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮುಜರಾಯಿ ಇನ್‌ಸ್ಟಿಟ್ಯೂಷನ್ನುಗಳಲ್ಲಿ ಧರ್ಮದರ್ಶಿಗಳು ಎಂದು ನೇಮಕವಾಡಿರುತ್ತಾರೆ. ಆದರೆ ಅವರಿಗೆ ಯಾವುದೇ ವಿಧವಾದಂಥ ಅಧಿಕಾರ ಇರುವುದಿಲ್ಲ. ಸಭೆಸೇರಿ ರೆಸಲ್ಯೂಷನ್ ಪಾಸ್ ಮಾಡಿ

ಕಳುಹಿಸಬೇಕೇ ಹೊರತು ಇನ್‌ಸ್ಟಿಟ್ಯೂಷನ್ನಿಗೆ ಅತ್ಯವಶ್ಯಕವಾಗಿ ಮಾಡಬೇಕಾದ ಕೆಲಸಕ್ಕೆ ಹಣ ಖರ್ಚು ಮಾಡಬೇಕೆಂದರೆ ಯಾವ ವಿಧವಾದ ಅಧಿಕಾರವು ಇರುವುದಿಲ್ಲ ಉದಾಹರಣೆಗಾಗಿ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಇರತಕ್ಕ ಮಜರಾಯಿಗೆ ಸೇರಿದಂಥ ಒಂದು ದೇವಸ್ಥಾನ ಇದೆ ಅಲ್ಲಿ ತೇರನ್ನು ನಿಲ್ಲಿಸಲು ಒಂದು ಷಡ್ ಇರುತ್ತದೆ. ಆ ಷೆಡ್ ಶಿಥಿಲವಾಗಿಹೋಗಿದೆ ಅದನ್ನು ಕಟ್ಟಬೇಕೆಂದು ಧರ್ಮದರ್ಶಿಗಳು ತೀರ್ಮಾನ ಮಾಡಿ ೫–೬ ವರ್ಷಗಳಾದರೂ ಕೂಡ ಏನೂ ಕಾರ್ಯಕ್ರಮ ಕೈಕೊಂಡಿರುವುದಿಲ್ಲ. ಆದುದರಿಂದ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟರೆ ಇಂತಹ ಒಂದು ತೊಂದರೆ ನಿವಾರಣೆಯಾಗಲು ಅನುಕೂಲ ವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ತಿಳಿಸ ಬಯಸುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನಾಲ್ಕು ಮಾತುಗಳನ್ನು ಆಡಲು ಅವಕಾಶಕೊಟ್ಟದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ (ಹೊಳೆನರಸೀಪುರ);—ಸನ್ಮಾನ್ಯ ಸಭಾಪತಿಯವರೇ, ಭೂಕಂದಾಯದ ಬಗ್ಗೆ ಏನೇನು ಬೇಡಿಕೆಗಳು ಇವೆ ಅವುಗಳ ಬಗ್ಗೆ ಮಾತನಾಡಲು ಹೆಚ್ಚು ಕಾಲ ತೆಗೆದುಕೊಳ್ಳದೆ ಜಾಗ್ರತೆ ಮಂಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಲಾಂಡ್ ರಿಫಾರವ್ಸ್ ಮತ್ತು ಲ್ಯಾಂಡ್ ರೆವಿನ್ಯೂ ಅಬಾಲಿಷನ್ ಇವೆರಡರ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಇದು ಕೇವಲ ಮೈಸೂರು ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಇದು ಇಂಡಿಯಾ ದೇಶದ ಎಲ್ಲ ಭಾಗಕ್ಕೂ ಅನ್ವಯವಾಗುವ ಪ್ರಶ್ನೆಯಾಗಿದೆ. ಇವತ್ತು ಅನೇಕ ರಾಜ್ಯಗಳಲ್ಲಿ ಲ್ಯಾಂಡ್ ರಿಫಾರವ್ಸ್‌ನ್ನು ತ್ವರಿತವಾಗಿ ಜಾರಿಗೆ ತರುವ ಬಗ್ಗೆ ನಿರ್ಣಯ ತೆಗೆದು ಕೊಂಡಿದ್ದಾರೆ. ಈ ಕೆಲಸದಲ್ಲಿ ನಮ್ಮ ರಾಜ್ಯವೂ ಕೂಡ ಬೇರೆ ರಾಜ್ಯಗಳಿಗಿಂತ ಒಂದು ಹೆಜ್ಜೆ ಮುಂದೆ ಇದೆ ಪ್ರಗತಿಪರವಾಗಿ ಕೆಲಸ ಮಾಡುತ್ತಿದೆ. ಕೇಂದ್ರದ ನಾಯಕರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಈ ವಿಚಾರದಲ್ಲಿ ಜಗಜ್ಜೀವನರಾಂ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಮೈಸೂರು ರಾಜ್ಯದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದಾಗ ವಿವರಣೆ ಕೊಡಿ ಎಂದು ಕೇಳಿದಾಗ ನಾನು ಆ ರೀತಿ ಹೇಳಲಿಲ್ಲ ಎಂಬುದಾಗಿ ಮತ್ತೊಮ್ಮೆ ಹೇಳಿದರು. ಈ ವಿಚಾರದಲ್ಲಿ ನಾಲ್ಕಾರು ಅಭಿಪ್ರಾಯಗಳು ಈ ಸಭೆಯಲ್ಲಿ ವ್ಯಕ್ತವಾಗಿದೆ. ಮಾನ್ಯ ದೇವರಾಜ ಅರಸ್ ಅವರು ಮಾತನಾಡುವಾಗ ಒಂದು ಸಂಸಾರಕ್ಕೆ ಇಷ್ಟು ಭೂಮಿ ಇರಬೇಕು ಎಂಬ ಬಗ್ಗೆ ಮಿತಿ ಹಾಕಬೇಕು, ಆ ಬಗ್ಗೆ ಕನಿಷ್ಠ ಮತ್ತು ಗರಿಷ್ಠ ಮಿತಿಯನ್ನು ನಿಗದಿ ಮಾಡಬೇಕು ಎಂದು ಹೇಳಿದರು. ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಅವರು ನೋಡಲಿಲ್ಲ. ಇವತ್ತು ಒಬ್ಬ ರೈತನಿಗೆ ನಾಲ್ಕು ಜನ ಮಕ್ಕಳು ಇದ್ದರೆ ಮುಂದೆ ಆತನ ಜಮೀನು ನಾಲ್ಕು ಜನರಿಗೂ ಹಂಚಿಕೆಯಾಗಬೇಕಾಗುತ್ತದೆ. ಒಂದು ಪಕ್ಷ ಕನಿಷ್ಠ ಮಿತಿಯನ್ನು ನಿಗದಿ ಮಾಡಿಬಿಟ್ಟರೆ ಕೆಲವರಿಗೆ ಭೂಮಿ ಸಿಗುತ್ತದೆ ಮತ್ತೆ ಕೆಲವರಿಗೆ ಸಿಗುವುದಿಲ್ಲ ಆ ರೀತಿ ಪಾಲು ಸಿಗದಿದ್ದವರಿಗೆ ಬೇರೆ ವೃತ್ತಿಯನ್ನು ಕಲ್ಪಿಸುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಇದು ಮೂಲಭೂತವಾಗ ಪ್ರಶ್ನೆ. ಇಂತಹವರಿಗೆ ಬೇರೆ ಕೆಲಸ ಒದಗಿಸಲು ಕೈಗಾರಿಕೆಯನ್ನು ನಾವು ಸಾಕಷ್ಟು ಬೆಳೆಸಿಲ್ಲ. ಇವತ್ತು ನೂರಕ್ಕೆ ೭೫ರಷ್ಟು ಜನರು ವ್ಯವಸಾಯದಿಂದ ಜೀವನ ಮಾಡುತ್ತಿದ್ದಾರೆ. ಇದರಲ್ಲಿ ಕೃಷಿ ಕಾರ್ಮಿಕರು, ಸಣ್ಣ ಹಿಡುವಳಿದಾರರು ಮುಂತಾದವರೆಲ್ಲಾ ಸೇರಿದ್ದಾರೆ ಇವತ್ತು ಕನಿಷ್ಠ ಮತ್ತು ಗರಿಷ್ಠ ಮಿತಿಯನ್ನು ಜಾರಿಗೆ ತರುವ ಪ್ರಶ್ನೆ ಅಷ್ಟೊಂದು ಸುಲಭವಾಗಿಲ್ಲ ಎಂಬುದನ್ನು ನಾವು ತಿಳಿಯಬೇಕಾಗಿದೆ. ಆದರಲ್ಲೂ ಕನಿಷ್ಠ ಮಿತಿಯನ್ನು ಜಾರಿಗೆ ತರುವುದರಿಂದ ಬಡಪಾ ಜನರಿಗೆ ತೊಂದರೆಯಾಗುತ್ತದೆ ಎಂಬುದು ನನ್ನ ವೈಯಕ್ತಿಕವಾದ ಅಭಿಪ್ರಾಯವಾಗಿದೆ. ಕಳೆದ ಸಾರಿ ನಾನು ಇದೇ ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ ೫ ಎಕರೆ ವರೆಗೆ ಖುಷ್ಕಿ ಜಮೀನಿಗೆ ಕಂದಾಯ ರದ್ದು ಮಾಡಬಹುದು ಎಂದು ಸಲಹೆ ಮಾಡಿದಾಗ ಮಾನ್ಯ ದೇವರಾಜ ಅರಸ್ ಅವರು ತರಿ ಮತ್ತು ಬಾಗಾಯಿತು ಜಮೀನು ಬಗ್ಗೆ ಎಷ್ಟು ನಿಗದಿ ಮಾಡಬಹುದು ಎಂದು ಕೇಳಿದರು. ಆಗ ಅವರು ಮಂತ್ರಿಗಳಾಗಿದ್ದರು ಇದು ಕ್ಲಿಷ್ಟವಾದ ಸಮಸ್ಯೆ. ಇವತ್ತು ಒಂದು ಎಕರೆ ತರಿ ಜಮೀನಿನಲ್ಲಿ ಕಬ್ಬು ಬೆಳೆದರೆ ಒಂದು ಸಾವಿರ ರೂಪಾಯಿಗಳ ಆದಾಯ ಬರಬಹುದು. ಒಂದು ವರ್ಷ ಬಾಗಾಯಿತು ಜಮೀನಿನಲ್ಲಿ ಅಡಕೆ ಬೆಳೆದರೆ ಮೂರು ಸಾವಿರ ರೂಪಾಯಿಗಳ ಆದಾಯ ಬರಬಹುದು ಉತ್ಪತ್ತಿ ಆಧಾರದ ಮೇಲೆ ಆನ್-ಇಕನಾಮಿಕ್ ಹೋಲ್ಡಿಂಗನ್ನು ನಿರ್ಧಾರ ಮಾಡಬೇಕೇ ಅಥವಾ ವಿಸ್ತಾರದ ಮೇಲೆ ನಿರ್ಧಾರ ಮಾಡಬೇಕೇ ಎಂಬುದು ಜಟಿಲ ಪ್ರಶ್ನೆಯಾಗಿದೆ. ಈ ಬಗ್ಗೆ ಮಾನ್ಯ ದೇವರಾಜ ಅರಸ್ ಅವರೇ ಒಂದು ಪರಿಹಾರ ಕೊಟ್ಟಿದ್ದರೆ ಚೆನ್ನಾಗಿತ್ತು. ಇವತ್ತು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ನೋಡ-ಬೇಕಾಗಿದೆ. ಭೂಕಂದಾಯವನ್ನು ರದ್ದು ಮಾಡುವುದನ್ನು ಈ ಸಭೆ ಒಪ್ಪುವುದಾದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಇವತ್ತು ರೈತರಿಗೆ ಹೆಚ್ಚಿನ ಬೆನಿಫಿಟ್ ಕೊಡುತ್ತಿಲ್ಲ. ಇವತ್ತು ಸರ್ಕಾರೀ ನೌಕರರಿಗೆ ಮತ್ತು ಬೇರೆ ಬೇರೆ ವರ್ಗದ ಜನರಿಗೆ ಕೊಡುತ್ತಿರುವ ಸವಲತ್ತುಗಳನ್ನು ನೋಡುವುದಾದರೆ ಮತ್ತು ರೈತರಿಗೆ ಕೊಡುತ್ತಿರುವ ಸವಲತ್ತುಗಳನ್ನು ನೋಡುವುದಾದರೆ ಒಂದಕ್ಕೊಂದು ಹೊಂದಾಣಿಕೆ ಯಾಗುವುದಿಲ್ಲ. ರೈತರಿಗೆ ಕೊಡುತ್ತಿರುವ ಸವಲತ್ತುಗಳು ಬಹಳ ಕನಿಷ್ಠವಾಗಿದೆ. ಆದರಲ್ಲಿಯೂ ಕೂಡ

(ಶ್ರೀ ಹೆಚ್. ಡಿ. ದೇವೇಗೌಡ)

ಭೂಕಂಬಾಯದಿಂದ ಬರುತ್ತಿರುವ ಆದಾಯ ಕೂಡ ಬಹಳ ಕಡಿಮೆಯಾಗಿದೆ. ಈ ಆದಾಯವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತೇವೆಂದು ಸರ್ಕಾರದವರು ಹೇಳಬಹುದು. ನನ್ನ ತಾಲ್ಲೂಕ್‌ನಲ್ಲಿರುವ ಕೆಲವು ಪಂಚಾಯಿತಿಗಳಲ್ಲಿ ವಿಚಾರ ಮಾಡಿದಾಗ ಭೂಕಂದಾಯವನ್ನು ನಮಗೇ ಕೊಟ್ಟರೆ ೪೫೦ ರಿಂದ ೫೦೦ ರೂಪಾಯಿಗಳು ಬರುತ್ತದೆ ಎಂದು ಹೇಳಿದರು. ೧೮೦೦ ರೂಪಾಯಿಗಳವರೆಗೆ ಆದಾಯ ಬರುವ ಪಂಚಾಯಿತಿಗಳು ಒಹಳ ಕಡಿಮೆ ಇವೆ ಇಷ್ಟೊಂದು ಅಲ್ಪ ಆದಾಯ ಇರುವ ಈ ಭೂಕಂದಾಯವನ್ನು ರದ್ದು ಮಾಡುವುದು ಒಳ್ಳೆಯದು. ಇವತ್ತು ಅನೇಕ ರಾಜ್ಯಗಳಲ್ಲಿ ೫-೬ ಎಕರೆ ವರೆಗೆ ಭೂಕಂದಾಯವನ್ನು ರದ್ದು ಮಾಡಿದ್ದಾರೆ. ಈ ರೀತಿ ರದ್ದುಮಾಡಿದ ರಾಜ್ಯಗಳಲ್ಲಿಯೂ ಕೂಡ ಸರ್ಕಾರಗಳು ಉರುಳಿ ಹೋಗಿ ಬೇರೆ ಸರ್ಕಾರಗಳು ಬರುತ್ತಿವೆ ಆದ್ದರಿಂದ ನಮ್ಮ ಸರ್ಕಾರದವರು ಈ ಬಗ್ಗೆ ಶಾಶ್ವತವಾಗಿ ಉಳಿಯುವಂತಹ ಕಾನೂನನ್ನು ಜಾರಿಗೆ ತರಬೇಕು. ಮತ್ತು ಆ ರೀತಿ ಒಂದು ನಿರ್ಣಯ ಮಾಡುವುದು ಒಳ್ಳೆಯದೆಂದು ತಿಳಿಸುತ್ತೇನೆ. ಇವತ್ತು ಜಮೀನು ಹಂಚುವ ಬಗ್ಗೆ ಗೊಂದಲ ಇದೆ. ಇವತ್ತು ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಕೆಲವರಿಗೆ ಕಾಫಿ ಬೆಳೆಯಲು, ರಬ್ಬರ್ ಬೆಳೆಯಲು, ಕಾರ್ಡಮಮ್ ಬೆಳೆಯಲು ಮತ್ತು ಪ್ಲಾಂಟೇಷನ್ ಬೆಳೆಯಲು ಬೇಕಾದಂಥ ಭೂಮಿಯನ್ನು ಅಲಾಟ್ ಮಾಡುತ್ತಿದ್ದೀರಿ. ಯಾವ ಉದ್ದೇಶಕ್ಕಾಗಿ ಜಮೀನು ಕೊಡುತ್ತೀರೋ ಆ ಉದ್ದೇಶಕ್ಕಾಗಿ ತೆಗೆದುಕೊಂಡ ಜಮೀನನ್ನು ಉಪಯೋಗಿಸದಿದರೆ ಮತ್ತು ಗೊತ್ತಾದ ಅವಧಿಯೊಳಗೆ ಆ ಬೆಳೆಯನ್ನು ಬೆಳೆಯದಿದ್ದರೆ ಅಂತಹ ಜಮೀನನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದುವರೆಗೆ ಈ ಉದ್ದೇಶಕ್ಕಾಗಿ ಯಾರು ಯಾರಿಗೆ ಎಷ್ಟೆಷ್ಟು ಜಮೀನನ್ನು ಕೊಟ್ಟಿದ್ದೀರಿ, ಎಷ್ಟುಜನ ಉಪಯೋಗ ಮಾಡಿಕೊಂಡಿದ್ದಾರೆ, ಎಷ್ಟು ಜನ ಉಪಯೋಗ ಮಾಡಿಕೊಳ್ಳದೆ ಆ ಜಮೀನನ್ನು ವಾಪಸ್ ಸರ್ಕಾರಕ್ಕೆ ಪಡೆದುಕೊಂಡಿದ್ದೀರಿ ಎಂಬ ಅಂಕಿ ಅಂಶಗಳನ್ನು ಈ ಸಭೆಗೆ ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳ ಬಗ್ಗೆ ನನಗೆ ಅಪಾರ ಗೌರವ ಇದೆ. ಅವರು ಸರಳ ಸ್ವಭಾವದವರು. ಬೆಳಿಗ್ಗೆ ೯-೩೦ ಗಂಟೆಗೆ ಆಫೀಸಿಗೆ ಬಂದರೆ ಸಾಯಂಕಾಲ ೬ ಗಂಟೆಯವರೆಗೆ ಕೆಲಸ ಮಾಡುತ್ತಾರೆ. ಬಡವರ ಬಗ್ಗೆ ಅವರಿಗೆ ಕನಿಕರ ಇದೆ ಅವರಿಗೆ ಹಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಬೇರೆಯವರು ಸಹ ಇವರ ಪದ್ಧತಿಯನ್ನು ಅನುಸರಿಸಿದರೆ ಒಳ್ಳೆಯದಾಗುತ್ತದೆ. ಒಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳು ತೆಗೆದುಕೊಂಡಿರುವ ಕ್ರಮ ಸರಿಯೇ ಎಂಬುದನ್ನು ಆಲೋಚನೆ ಮಾಡಬೇಕಾದ ಸಂದರ್ಭ ಬಂದಿದೆ.

ನಮ್ಮ ಹಾಸನ ಜಿಲ್ಲೆಯ ಗುಡ್ಡೇನಹಳ್ಳಿಯ ಪ್ರಕರಣದ ಬಗ್ಗೆ ಹೇಳುವುದಾದರೆ ಅದು ನಮ ಜಿಲ್ಲೆಯ ಸಿಮ್ಮನ್ವರ್ಗದ ಎಲ್ಲ ಜನರ ಮನಸ್ಸನ್ನು ಕಲಕಿದೆ. ಆ ವಿಚಾರ ಪತ್ರಿಕೆಗಳಲ್ಲಿಯೂ ಬಂದಿತ್ತು. ಅದನ್ನು ಎಲ್ಲರೂ ಓದಿರಬಹುದು. ಯಾರು ಜಮೀನನ್ನು ಸಾಗುವಳಿ ಮಾಡುತ್ತಿದ್ದರೋ ಅಂತಹವರನ್ನು ಅರೆಸ್ಟ್ ಮಾಡಿ ಅವರ ಮೇಲೆ ಕೇಸ್ ಹಾಕಿದ್ದಾರೆ. ಮಾನ್ಯ ಮಂತ್ರಿಗಳು ಕೈಗಾರಿಕೆಗಾಗಿ ಆ ಜಮೀನನ್ನು ಕಾನೂನಿನ ಚೌಕಟ್ಟಿನೊಳಗೆ ಕೊಟ್ಟಿದ್ದೇವೆಂದು ಹೇಳಬಹುದು. ಹೊಸ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಆಯಾ ತಾಲ್ಲೂಕ್ ಆಥವಾ ಆಯಾ ಜಿಲ್ಲೆಯ ಹೆಡ್‌ಕ್ವಾರ್ಟರ್ಸ್‌ನ ೫ ಮೈಲಿ ಸುತ್ತಳತೆಯೊಳಗೆ ಇರುವ ಜಮೀನನ್ನು ದರಖಾಸ್ತು ಕೊಡುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಬಹುದು. ಕೆಳಗಿನ ಅಧಿಕಾರಿಗಳು ಆ ಜಮೀನನ್ನು ಕೈಗಾರಿಕೆಗೋಸ್ಕರ ಕೊಡಬಹುದೆಂದು ಶಿಫಾರಸ್ ಮಾಡಿರುವುದರಿಂದ ನಾವು ಅಪ್ರೂವ್ ಮಾಡಬೇಕಾಗಿ ಬಂತು ಎಂದು ಸಹ ಮಾನ್ಯ ಮಂತ್ರಿಗಳು ಹೇಳಬಹುದು. ನನ್ನ ಪ್ರಶ್ನೆ ಇಷ್ಟೆ, ಆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದ ೫೦-೬೦ ಕುಟುಂಬಗಳು ದರಖಾಸ್ತು ಅರ್ಜಿಯನ್ನು ಆದೇ ಜಮೀನಿಗಾಗಿ ಹೊಸ ಲ್ಯಾಂಡ್ ಗ್ರಾಂಟ್ ರೂಲ್ಸ್ ಜಾರಿಗೆ ಬರುವುದಕ್ಕೆ ಮುಂಚೆ ಹಾಕಿದ್ದಾರೆ ಅಥವಾ ನಂತರ ಹಾಕಿದ್ದಾರೆ.? ಮೊದಲೇ ಹಾಕಿದ್ದರೆ ಯಾವ ರೂಲ್ಸ್ ಪ್ರಕಾರ ಅವರ ಅರ್ಜಿಯನ್ನು ರಿಜೆಕ್ಟ್ ಮಾಡಿದಿರಿ ಎಂಬುದನ್ನು ಹೇಳಬೇಕು. ಹೊಸ ರೂಲ್ಸ್ ಬರುವುದಕ್ಕೆ ಮೊದಲೇ ಅವರು ಅರ್ಜಿಯನ್ನು ಹಾಕಿಕೊಂಡಿದ್ದರೆ ಆ ಜಮೀನನ್ನು ಏತಕ್ಕೆ ಮಂಜೂರು ಮಾಡಲಿಲ್ಲ ಎಂಬುದನ್ನು ಹೇಳಬೇಕು. ಕೈಗಾರಿಕೆಗೋಸ್ಕರ ಆ ಜಮೀನನ್ನು ಕೊಡುವುದಕ್ಕೆ ಮುಂಚೆ ಅಲ್ಲಿ ಸಾಕಷ್ಟು ಗೋಮಾಳ ಇದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

ಇವೊತ್ತು ಒಂದು ಕೈಗಾರಿಕೆಯನ್ನು ಮಾಡತಕ್ಕ ಬಗ್ಗೆ ಬೇಕಾಗತಕ್ಕ ಜಮೀನು ೫ ಎಕರೆ ಆದರೆ ಸಾಕು ಎಂದು ತಜ್ಞರ ಅಭಿಪ್ರಾಯ ಇದೆ. ಆದರೆ ಹಲವಾರು ಕೈಗಾರಿಕೆಗಳನ್ನು ಕ್ರೋಢೀಕರಿಸಿ ಮಾಡುತ್ತಾರೆ ಎಂದು ಹೇಳಿ ಸುಮಾರು ೫ ಲಕ್ಷ ರೂಪಾಯಿ ಬೆಲೆ ಬಾಳತಕ್ಕ ೪೫-ಎಕರೆ ಜಮೀನನ್ನು ೨೫ ವರ್ಷಗಳ ಲೀಜ್ ಮೇಲೆ ಅವರಿಗೆ ಕೊಟ್ಟಿರುವುದು ಬಹಳ ಅನ್ಯಾಯವಾಗಿದೆ. ಈ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿ

ಗಳೊಡನೆ ಚರ್ಚೆ ಮಾಡಿದ್ದೇನೆ, ಇದನ್ನು ಪುನರ್ ಪರಿಶೀಲನೆ ಮಾಡಿ ಸರ್ಕಾರದವರು ಈ ಬಗ್ಗೆ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು, ಆಶ್ವಾಸನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ ಇದನ್ನು ಆದಷ್ಟು ತೀವ್ರವಾಗಿ ಮಾಡಬೇಕು. ಈ ಭೂಮಿಗೆ ಅವರು ನಾಳೆ ದಿವಸ ಕಾಂಪೆನ್‌ಸೇಷನ್ ಕೇಳತಕ್ಕ ಪರಿಸ್ಥಿತಿ ಒದಗಬಹುದು. ಆದಕ್ಕಾಗಿ ಆ ರೆಕಾರ್ಡ್ ತರಿಸಿ ಈ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಹಿಂದೆ ಮುಂದೆ ನೋಡದೆ ಆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು.

ಈಗ ಯಾವುದೇ ಇಂಪ್ರೂವ್‌ಮೆಂಟ್ ಲೋನ್ ಅನ್ನು ರೈತರಿಗೆ ಸ್ಯಾಂಕ್ಷನ್ ಮಾಡುವಾಗ ಅದಕ್ಕೆ ಸಂಬಂಧಪಟ್ಟ ಕೆಲಸವನ್ನು ಎನ್. ಇ. ಎಸ್. ಆಫೀಸರಿಗೆ ವಹಿಸಿದ್ದೀರಿ ಅಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ ಈಗ ಅವರಿಗೆ ಹಲವಾರು ತರಹ ಕೆಲಸಗಳು ಇವೆ. ಮೈನರ್ ಇರಿಗೇಷನ್ ಕೆಲಸ, ರೋಡ್ಸ್, ಬಿಲ್ಡಿಂಗ್ಸ್, ಅಗ್ರಿಕಲ್‌ಚರಲ್ ಆಕ್ಟಿವಿಟೀಸ್, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಲ್ ಆಕ್ಟಿವಿಟೀಸ್ ಇವುಗಳ ಹೊರೆಯನ್ನೆಲ್ಲಾ ಅವರು ಹೊತ್ತಿರುವಾಗ, ರೈತರಿಗೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಇತ್ಯಾದಿ ಲೋನುಗಳನ್ನು ಅವರೇ ಮಂಜೂರು ಮಾಡಬೇಕಾಗಿದೆ. ಆ ರೀತಿ ಮಂಜೂರಾತಿ ನೀಡುವಾಗ ಲ್ಯಾಂಡ್ ರೆಕಾರ್ಡ್ಸ್ ನೋಡಿ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ಅದಕ್ಕೆ ಅವರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಒಂದು ಆರ್ಡರ್‌ನ್ನು ಸರ್ಕಾರದವರು ಮಾಡಿದ್ದಾರೆ. ಅದು ಸರಿಯಲ್ಲ. ಅದನ್ನು ರದ್ದು ಮಾಡಬೇಕು. ಅದನ್ನು ರೆವಿನ್ಯೂ ಇಲಾಖೆಗೆ ಪಹಿಸುವುದು ಸೂಕ್ತ.

ದೇವಸ್ಥಾನಗಳಿಗೆ ಸಂಬಂಧಪಟ್ಟ ಆಸ್ತಿಗಳ ಬಗ್ಗೆ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಯೂನಿಫಾರಂ ಲೆಜಿಸ್ಲೇಷನ್ ತರುತ್ತೇವೆಂದು ಹಿಂದೆಯೇ ಮಾನ್ಯ ಮಂತ್ರಿಗಳು ಹೇಳಿದ್ದರು. ಅದು ಬಂದ ಹಾಗೆ ಕಾಣುವುದಿಲ್ಲ; ದೇವಸ್ಥಾನದ ಜಮೀನು ಯಾರ ವಶದಲ್ಲಿ ಇರುತ್ತದೆಯೋ, ಅದರಲ್ಲಿ ಎಷ್ಟು ರೆಂಟ್ ಬರುತ್ತದೆ ಯಾರಿಗೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಯಾರೋ ಅದನ್ನು ಅನುಭವಿಸುತ್ತಿರುತ್ತಾರೆ. ಆದರೆ ಅದನ್ನು ಅರ್ಚಕರೂ ಅನುಭವಿಸುವುದಿಲ್ಲ. ಆದ್ದರಿಂದ ಈ ದೇವಸ್ಥಾನಗಳ ಬಗ್ಗೆ ಮತ್ತು ಅದರ ಆಸ್ತಿಗಳ ಬಗ್ಗೆ ಒಂದು ಯೂನಿಫಾರಂ ಲೆಜಿಸ್ಲೇಷನ್ ತರಬೇಕು ಎಂದು ನಾನು ಸರ್ಕಾರದ ಗಮನವನ್ನು ಆ ಕಡೆ ಸೆಳೆಯುತ್ತೇನೆ ಶ್ರೀಮಾನ್ ಶಿವಪ್ಪನವರೂ, ಶ್ರೀಮಾನ್ ಗೋಪಾಲಗೌಡರೂ, ಮತ್ತು ಶ್ರೀ ಮಾನ್ ದೇವರಾಜ್ ಅರಸ್ ಅವರೂ ಈ ಬಗ್ಗೆ ಹೇಳಿದ್ದಾರೆ ಇದರಲ್ಲಿ ಬಹಳ ಅನ್ಯಾಯಗಳು ಆಗಿವೆ. ಇದನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ವಾಟರ್ ರೇಟ್ ಹಾಕುವಾಗ ಆಕ್ಚುಲ್ ಆಗಿ ಯಾರು ನೀರನ್ನು ಉಪಯೋಗ ಮಾಡಿದ್ದಾರೆಯೋ ಅಂಥವರಿಗೆ ಆ ಬಗ್ಗೆ ಸರ್ಟಿಫಿಕೇಟ್ ತರಿಸಿ ವಾಟರ್ ರೇಟನ್ನು ಹಾಕಬೇಕು. ನೀರನ್ನು ಉಪಯೋಗಿಸದ ಕೊಳ್ಳದೇ ಇರುವವರ ಮೇಲೆ ವಾಟರ್ ರೇಟ್ ಹಾಕುವುದನ್ನು ರದ್ದು ಮಾಡಬೇಕು. ಕೆರೆಯ ಕೆಳಗಿನ ಜಮೀನಿಗೆ ನಾಲಾ ಜಮೀನಿಗೆ ೫ ವರ್ಷಗಳ ವಾಟರ್ ರೇಟ್ ಏನು ಹಾಕಿದ್ದೀರಿ ಅದನ್ನು ವಜಾಮಾಡಬೇಕು. ಸರಿಯಾದ ರೆಕಾರ್ಡನ್ನು ತರಿಸಿ ವಾಟರ್ ರೇಟ್ ಹಾಕುವುದಕ್ಕೆ ಕ್ರಮತೆಗೆದುಕೊಳ್ಳಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಈ ಬೇತಿಕೆಯ ಮೇಲೆ ನಾನು ಮಾತನಾಡಬಾರದು ಎಂದು ಇದ್ದೆ. ಆದರೆ ಒಂದು ಅಂಶವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿರುವುದರಿಂದ ಸ್ವಲ್ಪ ಮಾತನಾಡಬೇಕಾಗಿದೆ. ಶ್ರೀ ಮಾನ್ ದೇವೇಗೌಡರು ಮಾತನಾಡುತ್ತಾ ಸ್ವಜನ ಪಕ್ಷಪಾತ ಮತ್ತು ಅಧಿಕಾರ ದುರುಪಯೋಗದ ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಹೇಳುವುದೆಂದರೆ ಒಂದನೆಯದು ಅಧಿಕಾರ ದುರುಪಯೋಗ, ಎರಡನೆಯದು ರಾಜಕೀಯ ಭ್ರಷ್ಟಾಚಾರ. ಮೂರನೆಯದು ಆಡಳಿತ ಅವನತಿ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ಬಗ್ಗೆ ಶ್ರೀಮಾನ್ ರಾಜಯ್ಯನವರು ರಾಜಿನಾಮೆಯನ್ನು ಕೊಡಬೇಕು. ಶ್ರೀಮಾನ್ ದೇವೇಗೌಡರು ಬಹಳ ಮೊಗಂ ಆಗಿ ಮಾತನಾಡಿದರು. ಇವರು ಜಮೀನು ಕೊಟ್ಟಂಥ ಮನುಷ್ಯರು ಎ ಐ. ಸಿ. ಸಿ. ಸದಸ್ಯರು, ಸಿಂಡಿಕೇಟ್ ಪಕ್ಷಕ್ಕೆ ಸೇರಿದವರು ಎಂದು ಅವರ ಒಲವು ಪಡೆಯುವುದಕ್ಕಾಗಿ ಅವರಿಗೆ ಜಮೀನು ಕೊಟ್ಟಿದ್ದಾರೆ. ಲಿಂಗಾಯಿತರು ಎಂದು ಹೇಳಿ ಸ್ವಜನ ಪಕ್ಷಪಾತದ ದೃಷ್ಟಿಯನ್ನು ಇಟ್ಟುಕೊಂಡು ಅವರಿಗೆ ಜಮೀನು ಕೊಟ್ಟಿದ್ದಾರೆ, ಲ್ಯಾಂಡ್ ಗ್ರ್ಯಾಂಟ್ ಕಾನೂನು ಬರುವ ಮೊದಲೇ ಶ್ರೀಮಾನ್ ದೇವೇಗೌಡರು ಹರಿಶ್ಚಂದ್ರನಂತೆ ಭರವಸೆಯನ್ನು ನೀಡಿ ನಕ್ಷತ್ರಕನಂತೆ ಕೆಲಸ ಮಾಡಿದ್ದಾರೆ. ಹಾಸನಕ್ಕೆ ಇವರೆಲ್ಲರೂ ಜಾತಾ ಬಂದಿದ್ದರು, ಇವರನ್ನು ಭೇಟಿ ಮಾಡುವುದಕ್ಕೆ ನಾನು ಬರಲಿಲ್ಲ. ಬಡುಗ್ಗರು ಮತ್ತು ಹರಿಜನರು ಉಕ್ಕಿರಿ ಶಕ್ಯಂತ ಜಮೀನನ್ನು ಪೋಲೀಸ್ ರಕ್ಷಣೆಯಲ್ಲಿ ಎ ಐ. ಸಿ. ಸದಸ್ಯರಾದ ಪ್ಲಾಂಟರ್ ಶ್ರೀ ಗುರಪ್ಪನವರಿಗೆ ಕೊಡಲಾಗಿದೆ. ಯಾವ ಒಂದು ಕೈಗಾರಿಕೆಗಾಗಲೀ ೫ ಎಕರೆಗಿಂತ ಜಾಸ್ತಿ ಜಮೀನನ್ನು ಕೊಡಕೂಡದು ಎಂದು

(ಶ್ರೀ ಎಚ್. ಎನ್. ನಂಜೇಗೌಡ)

ರಲ್ಲಿ ಇದ್ದರೂ ಕೂಡ ಅವರಿಗೆ ೪೫ ಎಕರೆ ಜಮೀನನ್ನು ಕೊಟ್ಟಿದ್ದಾರೆ. ಯಾವ ಕಾರಣಕ್ಕಾಗಿ ಅವರಿಗೆಷ್ಟು ಜಮೀನನ್ನು ಸರ್ಕಾರದವರು ಕೊಟ್ಟಿದ್ದಾರೆ ಎಂದು ನಾನು ಕೇಳುತ್ತೇನೆ. ಇವೊತ್ತು ಪ್ಲಾಂಟರುಗಳು ಮಂತ್ರಿಗಳ ಜೇಬಿನಲ್ಲಿದ್ದಾರೆ ಎಂದು ಜನ ಹಾಸನದಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ನೀವು ಯಾವ ಉದ್ದೇಶಕ್ಕಾಗಿ ಅವರಿಗೆ ಆ ಜಮೀನನ್ನು ಕೊಟ್ಟಿದ್ದೀರೋ ಆ ಉದ್ದೇಶಕ್ಕೆ ಅವರು ಅದನ್ನು ಉಪಯೋಗ ಮಾಡುತ್ತಾರೆಯೇ? ಅವರಿಗೆ ಕೊಟ್ಟಿರತಕ್ಕ ಜಮೀನಿಗೆ ಅದರ ಆಜೂಬಾಜಿನಲ್ಲಿರತಕ್ಕ ಬೆಲೆಯ ಪ್ರಕಾರ ಒಂದುಎಕರೆಗೆ ೧೦ ಸಾವಿರ ರೂಪಾಯಿಗಳಾಗುತ್ತದೆ. ಆ ಪ್ರಕಾರ ೪೫ ಎಕರೆಗೆ ೪ ೧/೨ ಲಕ್ಷ ರೂಪಾಯಿಗಳಾಗುತ್ತದೆ, ಇವರು ಆ ರೀತಿ ಆ ಜಮೀನನ್ನು ಆಗ್ಗವಾಗಿ ಅವರಿಗೆ ಕೊಡುವುದಕ್ಕೆ ಇದು ಅವರ ಸ್ವಂತದ್ದಾಗಿದ್ದರೆ ದಾನ ಕೊಡಲಿ. ಅದು ಇವರ ಪಿತ್ರಾರ್ಜಿತ ಆಸ್ತಿಯೇ ಅಥವಾ ಇವರ ಮಾವ ಬಳುವಳಿ ಕೊಟ್ಟಿದ್ದೆ? ಹಾಗಿದ್ದರೆ ಇವರು ಕೊಟ್ಟರೂ ಪರವಾಯಿಲ್ಲ. ಆದರೆ ಇದು ಸಾರ್ವಜನಿಕ ಆಸ್ತಿ. ಈ ಸ್ವತ್ತನ್ನು ಬೇಕಾಬಿಟ್ಟಿ ಕೊಡುವುದಕ್ಕೆ ನೀವೇಕೆ ಅಧಿಕಾರದಲ್ಲಿರಬೇಕು? ಕಂದಾಯ ಮಂತ್ರಿಗಳು ಮುಖ್ಯ ಮಂತ್ರಿ ಳು ಹೇಳಿದಂತೆ ಕುಣಿಯುತ್ತಿದ್ದರೆ ಇವರು ರೆವಿನ್ಯೂ ಮಂತ್ರಿಗಳಾಗಿ ಏತಕ್ಕೆ ಇರಬೇಕು ಎಂದು ನಾನು ಅವರನ್ನು ಪ್ರಶ್ನೆ ಮಾಡುತ್ತೇನೆ. ರೈತರು ಅನಧಿಕೃತವಾಗಿ ಭೂಮಿಯನ್ನು ರೂಢಿಸಿಕೊಂಡಿದ್ದರೆ ಅದನ್ನು ಅಧಿಕೃತ ಎಂದು ಮಾಡಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಹೀಗಿರುವಾಗ ಪಾಪ ಬಡಬಗ್ಗರು ಹರಿಜನರು ೩ ವರ್ಷಗಳಿಂದ ಉತ್ತುಕೊಂಡಿದ್ದಂತಹ ಜಮೀನನ್ನು ಪೋಲೀಸಿನವರ ರಕ್ಷಣೆಯಲ್ಲಿ ಪ್ಲಾಂಟರ್ ಗುರಪ್ಪನವರಿಗೆ ಕೊಟ್ಟಿದ್ದಾರೆ: ಹೀಗಿರುವಾಗ ಯಾವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆಯೋ ನನಗೆ ಗೊತ್ತಿಲ್ಲ. ಹರಿಜನರನ್ನು ಉದ್ಧಾರ ಮಾಡುತ್ತೇವೆ ಎಂದು, ರೈತರನ್ನು ಉದ್ಧಾರ ಮಾಡುತ್ತೇವೆ ಎಂದು ಶ್ರೀಮಾನ್ ರಾಚಯ್ಯನವರು ಹೇಳುತ್ತಾರೆ ನಿಜವಾಗಿಯೂ ಇವರಿಗೆ ಆತ್ಮಗೌರವ ವಿದ್ದರೆ, ಇವರು ನುಡಿದಂತೆ ನಡೆಯುತ್ತೇವೆ ಎನ್ನುವ ಮನುಷ್ಯರಾಗಿದ್ದರೆ, ಇವರಿಗೆ ತೂಕ ಇದ್ದರೆ ಈ ಜಮೀನು ನೀಡಿಕೆಯನ್ನು ರದ್ದುಪಡಿಸಬೇಕು. ಇಲ್ಲವಾದರೆ ಇವರಿಗೆ ಆತ್ಮಗೌರವ ಇಲ್ಲ ಎಂದು ಹೇಳಬೇಕಾಗುತ್ತದೆ. ಇವರು ಈ ಅಧಿಕಾರ ಸ್ಥಾನದಲ್ಲಿ ಇರುವುದಕ್ಕೆ ಅರ್ಹರಲ್ಲ ಎಂದು ಹೇಳಬೇಕಾಗುತ್ತದೆ. ಇವರು ಅಧಿಕಾರಕ್ಕೆ ಅಂಟಿಕೊಂಡಿಲ್ಲದಿದ್ದರೆ ರಾಜೀನಾಮೆಯನ್ನು ಕೊಡಬೇಕು, ಇಲ್ಲದಿದ್ದರೆ ಈ ಭೂಮಿ ನೀಡಿಕೆಯನ್ನು ರದ್ದುಪಡಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಈ ಜಮೀನು ನೀಡಿಕೆಯಲ್ಲಿ ಸ್ವಜನ ಪಕ್ಷಪಾತ ನಡೆದಿದೆ. ಅವರು ಸಿಂಡಿಕೇಟ್ ಕಡೆಯವರು ಅಂತ ನಿಮ್ಮ ಜಾತಿಯವರು ಅಂತ ಅವರಿಗೆ ಜಮೀನು ನೀಡಿದ್ದೀರಿ ಇದನ್ನು ನೀವು ಹೇಗೆ ನಿರಾಕರಿಸುತ್ತೀರಿ ಎಂದು ನಾನು ಕೇಳುತ್ತೇನೆ. ಇದು ರಾಜಕೀಯ ಭ್ರಷ್ಟಾಚಾರವಲ್ಲವೇ? ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡತಕ್ಕವರು, ಪ್ರ ಜಾ ಪ್ರ ಭು ತ್ವ ವ ನ್ನು ರೂಢಿಸಿಕೊಂಡಿರತಕ್ಕವರು ಸಿಂಡಿಕೇಟ್ ಸ್ಟೈಲ್ ಕಡಿಮೆಯಾಗುತ್ತದೆ ಎಂದು ವಿರೋಧ ಪಕ್ಷದವರನ್ನು ತೇಜೋವಧೆ ಮಾಡಿ, ಆಸೆ ತೋರಿಸಿ ಈ ಕಡೆಯವರನ್ನು ಆಕಡೆಗೆ ಎಳೆಯುವುದಕ್ಕೆ ಪ್ರ ಯ ತ್ನ ಮಾಡುತ್ತಿದ್ದಾರೆ. ಇ ದು ಒಂದು ಭ್ರಷ್ಟಾಚಾರ ತುಮಕೂರು ಟೌನ್ ಲಿಮಿಟ್‌ನಲ್ಲಿ ಜನಪತಿ ಇರುವ ಸ್ಥಳದಲ್ಲಿ ರೆವಿನ್ಯೂ ೧೪ ಗುಂಟೆ ಜಮೀನನ್ನು ವಿರೋಧಪಕ್ಷದ ಸದಸ್ಯರೊಬ್ಬರಿಗೆ ಸರ್ಕಾರದವರು ಕೊಟ್ಟಿದ್ದಾರೆ. ೧೪ ಗುಂಟೆ ಜಮೀನನ್ನು ಇಂಡಸ್ಟ್ರಿಯಲ್ ಪರ್ಪಸಿಗೋಸ್ಕರ ಕೊಟ್ಟಿದ್ದಾರೆ. ಪುನಃ ಅದೇ ವ್ಯಕ್ತಿಗೆ ೧೪ ಗುಂಟೆ ಕೊಟ್ಟಿದ್ದಾರೆ. ಮಂತ್ರಿಯವರಿಗೆ ಇದನ್ನು ಕೊಟ್ಟದ್ದು ಗೊತ್ತಿಲ್ಲವೇ ? ಅಲ್ಲಿ ಸೂರಾರು ಎಕರೆ ಜಮೀನು ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಕೊಳೆಯುತ್ತಾ ಇದೆ. ಆದರೆ ಆಜುಬಾಜಿನಲ್ಲಿ ಜನರು ವಾಸಮಾಡತಕ್ಕ ಪ್ರದೇಶದಲ್ಲಿ ೧೪ ಗುಂಟೆ ಜಮೀನು ಕೊಡುವುದು, ಇದು ಲಂಚವಲ್ಲವೇ ? ನಾನು ಹಾಸನಕ್ಕೆ ಹೋಗುವಾಗ ರೋಡಿನ ಪಕ್ಕದಲ್ಲಿ ವಿಚಾರಿಸಿದೆ. ಆದರ ಬೆಲೆ ಒಂದು ಲಕ್ಷಕ್ಕಿಂತಲೂ ಹೆಚ್ಚಾಗುತ್ತದೆ. ಇದು ರಾಜಕೀಯ ಭ್ರಷ್ಟಾಚಾರವಲ್ಲವೇ ? ಈ ರೀತಿಯಾದರೆ ರಾಜ್ಯದ ಸ್ಥಿತಿಯನ್ನು ದೇವರೆ ಕಾಪಾಡಬೇಕು. ನೀವು ಅಧಿಕಾರಕ್ಕೆ ಜೆಗಣಿಯಂತೆ ಅಂಟಿಕೊಂಡಿರುವುದಾದರೆ, ಹೇಳಿ, ಇಲ್ಲವೆ, ಇಂಥ ಅನ್ಯಾಯ ಕೆಲಸಗಳನ್ನು ಮಾಡಬೇಡಿ.

ಶ್ರೀ ಎಚ್. ಸಿದ್ದವೀರಪ್ಪ :—ಅದನ್ನು ಎಷ್ಟು ದಿವಸಗಳಲ್ಲಿ ಕೊಟ್ಟರು ಎಂಬುದು ಹೇಳಿದರೆ ಚೆನ್ನಾಗಿ ಗೊತ್ತಾಗುತ್ತದೆ. ಎರಡು ಮೂರು ದಿನಗಳಲ್ಲೇ ಬಹುಶಃ ವ್ಯವಹಾರವಾಗಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ:—ಈ ಸಭೆಯು ಪ್ರಾರಂಭವಾದ ಮೇಲೆ ಇದನ್ನು ಕೊಟ್ಟಿದ್ದಾರೆ. ಈ ರೀತಿ ದುರ್ವ್ಯವಹಾರ ಮಾಡುವುದು ಬೇಡ. ಅಧಿಕಾರಕ್ಕೆ ಅಂಟಿಕೊಂಡಿರುವುದಾದರೆ, ಒಳ್ಳೆಯ ರೀತಿಯಿಂದ ಅಧಿಕಾರವನ್ನು ನಡೆಸಲಿ ಮಾಡಬಾರದ ಕೆಲಸವನ್ನು ಮಾಡಿ, ರಾಜ್ಯದ ಆಸ್ತಿಯನ್ನು ತನ್ನ ಪಿತ್ರಾರ್ಜಿತ ಆಸ್ತಿಯೆಂದು ವ ವಹಾರ ಮಾಡುವುದು ತೀರಾ ಅನ್ಯಾಯವೆಂದು ಹೇಳಬೇಕಾಗಿದೆ.

ಶ್ರೀ ಬಿ. ಪಿ. ಗಂಗಾಧರ್:—ಬೆಂಗಳೂರು ಕಾರ್ಪೊರೇಷನ್ನಲ್ಲಿ ಎಕರೆಗಟ್ಟಲೆ ಬೇಕಾದಷ್ಟು ಜಮೀನನ್ನು ಡಿಸ್ಟ್ರಿಬ್ಯೂಟ್ ಮಾಡಿರುವುದು ತಮಗೆ ಗೊತ್ತಿದೆಯೋ ಇಲ್ಲವೋ?

ಶ್ರೀ ಎಚ್. ಎನ್. ನಂಜೇಗೌಡ :—ಅದು ಹಿಂದಿನ ಕಾಲದಲ್ಲಿ, ಬೆಂಗಳೂರಿನಲ್ಲಿ ಎಷ್ಟು ರೆವೆನ್ಯೂ ಲ್ಯಾಂಡ್ಸ್ ಇತ್ತು. ಯಾವ್ಯಾವ ಕಾಲದಲ್ಲಿ ಏನಾಗಿದೆ ಎಂಬುದರ ಬಗ್ಗೆ ಅಂಕಿ ಅಂಶ ನನ್ನ ಹತ್ತಿರ ಇದೆ. ಆದರೆ ಕೌಜಲ ಗಿರಿಯವರು ಈ ತರಹ ಮಾಡುವುದು ತರವಲ್ಲ. ಬೇರೆ ಯಾರಾದರೂ ಮಾಡಿದ್ದರೆ ಅದು ಬೇರೆ ಉದಾಹರಣೆಗೆ ವೀರೇಂದ್ರ ಪಾಟೀಲರು ಟೆಂಡರ್ ಕೊಡತಕ್ಕ ಕಾಲದಲ್ಲಿ ಕೋಡ್‌ರೂಲ್ಸ್ ಮೀರಿ ವ್ಯವಹಾರ ಮಾಡತಕ್ಕವರು. ಆದರೆ ಕೌಜಲಗಿರಿಯವರಿಗೆ ಏಕೆ ಈ ಬುದ್ಧಿ ಬಂತೋ ಅರ್ಥ ವಾಗುವುದಿಲ್ಲ. ನಾನು ಇವರನ್ನು ಬಹಳ ನಿಷ್ಕಾವಂತ ಮಂತ್ರಿಯೆಂದು ತಿಳಿದಿದ್ದೆ. ಆದರೆ, ಇದು ಸಹವಾಸ ದೋಷವೆಂದು ಕಾಣುತ್ತದೆ. ಆದ್ದರಿಂದ ಇಂಥ ಕಾರ್ಯಗಳನ್ನು, ನೀವು ಏನು ಮಾಡಿದ್ದೀರಿ ಇದನ್ನು ರದ್ದು ಮಾಡಬೇಕು. ಇಲ್ಲದಿದ್ದರೆ ನಮ್ಮ ಪಾಲು ತೆಗೆದುಕೊಂಡಿದ್ದೇವೆಂದು ನೀವು ಒಪ್ಪಿಕೊಳ್ಳಬೇಕು. ನೀವು ಅವರಲ್ಲಿ ಮಾರಿಕೊಂಡು ದುಡ್ಡು ಕೊಡಿ ಎಂದು ಹೇಳಿರಬೇಕು. ಇದಕ್ಕೆಲ್ಲಾ ಏನೇ ಆಗಲಿ ನೀವು ಸರಿಯಾದ ಉತ್ತರವನ್ನು ಕೊಡುತ್ತೀರೆಂದು ನಾನು ನಂಬಿದ್ದೇನೆ ವೀರೇಂದ್ರ ಪಾಟೀಲರು ಹೇಳಿದ ಹಾಗೆ ನೀವು ಹೊರಗಡೆ ಅಪಾದನೆ ಮಾಡಿರಿ ಎಂದು ಹೇಳುವುದಾದರೆ, ಆ ರೀತಿ ಹೊರಗಡೆ ಬೇಕಾದರೆ, ಅಲ್ಲಿಯೂ ಈ ಅಪಾದನೆಗಳನ್ನು ಮಾಡಲು ನಾನು ತಯಾರಾಗಿದ್ದೇನೆ.

ಇನ್ನೊಂದು ವಿಷಯ ನಮ್ಮ ತಾಲ್ಲೂಕಿನಲ್ಲಿ ರಿಲೀಫ್ ಕಾಂಗಾರಿಗೆ ಬೋಗಸ್ ಅಂಡ್ ಫೊಟಾಷ್ಟಿಕ್ ಬಿಲ್ ಮಾಡಿದ್ದನ್ನು ಹೇಳುತ್ತೇನೆ. ಇವತ್ತು ನೀವು ನಿಮ್ಮ ಎಕ್ಸಿಕ್ಯೂಟಿವ್ ಇಂಜಿನಿಯರ ಮೇಲೆ ವಿಜಿಲೆನ್ಸ್ ಕಮಿಶನರ ಮುಖಾಂತರ ಏನು ಕ್ರಮ ತೆಗೆದುಕೊಂಡಿದ್ದೀರಿ ? ತಕ್ಕ ಸಮಯದಲ್ಲಿ ಕಾರ್ಯ ಕ್ರಮ ತೆಗೆದುಕೊಳ್ಳದಿದ್ದರೆ, ಅಪರಾಧಿಯನ್ನ ತಪ್ಪಿತಸ್ಥನೆಂದು ಪೂಡುವುದಾದರೂ ಹೇಗೆ ? ಅಲ್ಲಿ ಎಗ್ಸಿಕ್ಯೂಟಿವ್ ಇಂಜಿನಿಯರಿಗೆ ಮೂರು ಸಾವಿರ ರೂಪಾಯಿ ಕೊಟ್ಟು ಬಿಟ್ಟಿದ್ದಾರೆ. ಅದರ ಬಗ್ಗೆ ಏನು ಮಹಜರ್ ಆಗಿದೆ ಎಂಬುದನ್ನು ಈ ಸಭೆಯಲ್ಲಿ ಮಂಡಿಸಬೇಕು. ಅದನ್ನು ಈಗ ನಿವು ಹಶ್ ಅಪ್ ಮಾಡು ವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಆ ರೀತಿ ನೀವು ಮಾಡಬೇಡಿ. ಇದು ನಿಮಗೆ ಗೌರವ ತರುವುದಿಲ್ಲ. ಮತ್ತು ಇದರಿಂದ ಆಡಳಿತದ ಅವನತಿಗೆ ಕಾರಣವಾಗುತ್ತದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ):—ಸ್ವಾಮಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ೨೩ ವರ್ಷವಾದರೂ ಕೂಡ ಈ ಭೂಸುಧಾರಣೆಯ ಬಗ್ಗೆ ಮತ್ತು ರೈತರ ಏಳಿಗೆಯ ಬಗ್ಗೆ ನಿರಂತರವಾದ ಪ್ರಚಾರ ನಡಿಯುತ್ತಾ ಇದ್ದರೂ, ಕಾರ್ಯತಃ ಯಾವುದನ್ನೂ ಮಾಡಿಲ್ಲವೆಂದು ಹೇಳಬೇಕಾಗಿದೆ. ನಿಜವಾಗಿಯೂ ಶ್ರಮಜೀವಿ ಯಾದಂತಹ ರೈತರು ಮತ್ತು ವ್ಯವಸಾಯಗಾರರಿಗೆ ಅನುಕೂಲವಾಗುವಂತಹ ಧೋರಣೆಗಳನ್ನು ತಾಳುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇದೇ ಸಭೆಯಲ್ಲಿ ಮೂರು ವರ್ಷದ ಹಿಂದೆ ಮಾನ್ಯ ಹಣಕಾಸಿನ ಸಚಿವರು ಭೂಕಂದಾಯ ರದ್ದು ಮಾಡುತ್ತೇವೆ ಆ ಯೋಚನೆ ಸರ್ಕಾರಕ್ಕೆ ಇದೆ ಎಂದು ಹೇಳಿದ್ದರು. ಅದು ಮಹಾಚುನಾವಣೆಯ ಮುಂಚೆ. ಚುನಾವಣೆಗಳು ಆದ ಮೇಲೆ, ಬಹುಮತದಿಂದ ಅಧಿಕಾರಕ್ಕೆ ಬಂದ ಮೇಲೆ ಈ ಭೂ ಕಂದಾಯ ರದ್ದತಿಯ ವಿಷಯ ಪೂರ್ಣವಾಗಿ ಕೈಬಿಟ್ಟರು. ಈ ದಿನ ಏನಾದರೂ ಸರ್ಕಾರದವರಿಗೆ ತಾವು ಕೊಟ್ಟ ಮಾತನ್ನು ನಡೆಸಿಕೊಡಬೇಕೆಂಬ ಆಸಕ್ತಿ ಇದ್ದರೆ ಅವರು ಹಿಂದೆ ಕೊಟ್ಟಿರತಕ್ಕ ಮಾತನ್ನು ನಡೆಸಿಕೊಡಬೇಕು. ಹಿಂದೆ ಕಾಂಗ್ರೆಸ್ಸಿನವರ ಭಾಷಣದಲ್ಲಿ ಭೂಕಂದಾಯ ರದ್ದು ಮಾಡುತ್ತೇವೆ ಎಂದು ಹೇಳಿದ್ದನ್ನು ನಡೆಸಿ ಕೊಡದೆ ಇವತ್ತು ಪಜನಭ್ರಷ್ಟರಾಗಿದ್ದಾರೆಂದು ಹೇಳುತ್ತೇನೆ. ಭೂಸುಧಾರಣೆ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಇಪ್ಪತ್ತಿನ ದಿವಸ ಮುಖ್ಯವಾಗಿ ಬಂಜರು ಜಮೀನುಗಳು, ಸಾಗು ವಳಿಗೆ ಯೋಗ್ಯವಾದ ಜಮೀನುಗಳು—ಇವುಗಳನ್ನು ಹಂಚುವ ವಿಷಯ ಬಹಳ ಸಣ್ಣ ವಿಷಯ ಯಾವ್ಯಾವ ಊರಿನಲ್ಲಿ ಎಷ್ಟೆಷ್ಟು ಜಮೀನು ಇವೆ, ಅವನ್ನೆಲ್ಲಾ ಪಟ್ಟಿ ಮಾಡಿ ಯಾವ ಜನರು ಜಮೀನು ಇಲ್ಲದೆ ಇದ್ದಾರೆ ಮತ್ತು ಸಣ್ಣ ರೈತರು ಇದ್ದಾರೆ ಅವರಿಗೆ ಹಂಚಬೇಕು. ಈ ಕೆಲಸವನ್ನು ಒಂದೆರಡು ವರ್ಷಗಳಲ್ಲಿ ಮುಗಿಸಬಹುದು. ಇವರು ವರ್ಷಾನುಗಟ್ಟಲೆ ಬರೆ ಮಾತಿನಲ್ಲೇ ಹೇಳಿದ್ದಾರೆ ವಿನಹ ಕಾರ್ಯತಃ ಏನೂ ಮಾಡಿಲ್ಲ ಸಾಲದ್ದಕ್ಕೆ ಲ್ಯಾಂಡ್ ಗ್ರಾಂಟ್ ಕಮಿಟಿ. ಭೂಮಿ ಹಂಚಿಕೆ ಮಾಡತಕ್ಕ ಕಮಿಟಿಯೆನ್ನೆಲ್ಲಾ ಮಾಡು ವುದಕ್ಕೆ ಸರ್ಕಾರ ಹೊರಟಿದೆ. ತಾವು ಮಾಡುವ ಕೆಲಸವನ್ನು ಮಾಡದೆ, ಇಂಥ ಕಮಿಟಿಗಳನ್ನು ಮಾಡಿ ಜನರು ನೇರವಾಗಿ ಕಮಿಟಿಗಳನ್ನು ಬಯ್ಯಲಿ ಎಂದು ಮಾಡಿದ್ದಾರೆ. ಇದರಲ್ಲಿಯೂ ಕೂಡ ಬಹಳ ರಾಜಕೀಯವನ್ನು ಮಾಡಿದಾರೆ. ಕಮಿಟಿ ಸದಸ್ಯರಾಗಿರಬೇಕಾದರೆ, ಅವರು ಶಾಸನ ಸಭಾ ಸದಸ್ಯರು, ಮತ್ತು ತಾಲ್ಲೂಕು ಬೋರ್ಡು ಸದಸ್ಯರು, ಇನ್ನೊಬ್ಬ ಹರಿಜನ ಮೆಂಬರ್ ಎಂದು ಮಾಡಿದ್ದಾರೆ. ಆದರೆ ಎಷ್ಟೋ ತಾಲ್ಲೂಕು ಗಳಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರೂ, ಶಾಸನ ಸಭಾ ಸದಸ್ಯರೂ,—ಇಬ್ಬರೂ ಕಾಂಗ್ರೆಸ್ ಸದಸ್ಯರೇ ಆಗಿರುತ್ತಾರೆ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಇಂತಹ ಸ್ಥಳಗಳಲ್ಲಿ ಬೇರೆಯವರಿಗೆ ಪ್ರಾತಿನಿಧ್ಯ ಇರುವುದಿಲ್ಲ. ನಾವು ನಿಜವಾಗಿಯೂ ಕೂಡ ಕಮಿಟಿಗಳಿಗೆ ಸರಿಯಾದ ಪ್ರಾತಿನಿಧ್ಯ ಕೊಡಬೇಕೆಂದರೆ ಎಲ್ಲರಿಗೂ ನ್ಯಾಯ ವಿತರಣೆಯಾಗಬೇಕು. ಈ ಕಮಿಟಿಯಲ್ಲಿ ಆ ರೀತಿ ಪ್ರಯತ್ನ ಮಾಡಬೇಕು ಯಾರಾದರೂ ಸೋತಿರುವ ಕಾಂಗ್ರೆಸ್ ಮೆಂಬರು ಇದ್ದರೆ, ಅಂಥ ಕಡೆ ಅವರಿಗೆ ಅವಕಾಶ ಕೊಡುತ್ತೀರಿ ವಿರೋಧ ಪಕ್ಷದಲ್ಲಿ ಗೆದ್ದು ಬಂದಿರುವವರಿಗೆ ಕೊಡುತ್ತಾ ಇಲ್ಲ. ಕೋಲಾರ ತಾಲ್ಲೂಕಿನಲ್ಲಿ ನಮ್ಮ ಪಾರ್ಟಿಯಲ್ಲಿರುವವರು ತಾಲ್ಲೂಕು ಬೋರ್ಡ್ ಅಧ್ಯಕ್ಷರು ಆಗಿದ್ದಾರೆ, ಶಾಸನ ಸಭಾ ಮೆಂಬರ್ ಕೂಡ ಆಗಿದ್ದಾರೆ. ಅಂತಹವರು ಕಮಿಟಿಗಳಲ್ಲಿ ಇರಬಾರದೆಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ರೈತರು ತಮ್ಮ ಸಂಘಗಳ ಪರವಾಗಿ ಈಗ ಬಾರೀ ಜಾಗೃತಿಯಿಂದ ಕೆಲಸ ಮಾಡುತ್ತಿದ್ದಾರೆ. ರೈತರ ಸಂಘಗಳ ಪ್ರತಿನಿಧಿಗಳು ಎಲ್ಲೆಲ್ಲಿ ಇದ್ದಾರೋ ಅಂತಹ ಸಂಘಗಳ ಪ್ರತಿನಿಧಿಗಳನ್ನು ಸಹ ಲ್ಯಾಂಡ್ ಗ್ರಾಂಟ್ ಕಮಿಟಿಯೊಳಗೆ ಸೇರಿಸಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

ಇನ್ನೊಂದು ವಿಷಯ. ಅದು ಬಂಜರು ಭೂಮಿ ಹಂಚಿಕೆಯ ವಿಷಯ. ಇದರ ಬಗ್ಗೆ ಹಿಂದೆ ಒಂದು ಆರ್ಡರ್ ಮಾಡಿದ್ದರು. ಆ ಜಮೀನು ಐದಾರು ವರ್ಷಗಳವರೆಗೆ ಯಾವನಾದರೂ ಒಬ್ಬನ ಸ್ವಾಧೀನದಲ್ಲಿದ್ದರೆ ಅವನಿಗೆ ಜಮೀನನ್ನು ಕೊಡುವುದು ಎಂಬುದಾಗಿ ನೀವು ಹೇಳಿಕೊಂಡು ಬರುತ್ತಲೇ ಇದ್ದೀರಿ ಆದರೆ ಜಮೀನು ದುರಾಕ್ರಮಣಮಾಡಿಕೊಂಡು ಸ್ವಾಧೀನದಲ್ಲಿರತಕ್ಕಂತವರು ಈಗ ದೊಡ್ಡ ಶ್ರೀಮಂತ ರೈತರು ಆಗಿರುತ್ತಾರೆ. ದೊಡ್ಡ ಜಮೀನ್ದಾರರಾಗಿರುತ್ತಾರೆ. ಅವರಿಗೆ ೩೦–೪೦ ಎಕರೆಗಳು ಇರುತ್ತದೆ. ಅಂತಹವರು ಕೆಲವು ಕಡೆಗಳಲ್ಲಿ ಕೆರೆ ಅಂಗಳದಲ್ಲಿ ೨೦ ಎಕರೆ ಸಾಗು ಮಾಡಿರುವ ನಿದರ್ಶನಗಳು ಇವೆ. ಅಂತಹವರ ಮೇಲೆ ಏನು ಕ್ರಮವನ್ನೂ ತೆಗೆದುಕೊಂಡಿಲ್ಲ. ಐದಾರು ವರ್ಷಗಳಿಂದಲೂ ಅವರ ಸ್ವಾಧೀನವಲ್ಲಿದ್ದರೆ ಅಂತಹವರಿಗೆ ಕೊಡಬಹುದು. ಆದರೆ ಯಾರು ದುರಾಕ್ರಮಣ ಮಾಡಿದ್ದಾರೋ ಅಂತಹವರಿಗೆ ಕೊಡಬಾರದು. ನಿಜವಾಗಿ ಈ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಸುಮ್ಮನೆ ಬಾಯಲ್ಲಿ ಹೇಳಿದರೆ ಆದರಿಂದೇನೂ ಸಾರ್ಥಕವಾಗುವುದಿಲ್ಲ. ಜಮೀನು ಇರತಕ್ಕವರು ಕಾಫಿ ಪ್ಲಾಂಟರುಗಳು ೫೦ ಎಕರೆ ಬಗರಹುಕುಂ ಸಾಗುವಳಿ ಮಾಡುತ್ತಾ ಅವನ್ನು ತಮಗೆ ಕೊಡಬೇಕೆಂದು ಅರ್ಜಿಗಳನ್ನು ಹಾಕಿದ್ದಾರೆ. ಅವರಿಗೆ ಕೊಡುವುದು ನ್ಯಾಯವಲ್ಲ ಅಂಥಾ ಜಮೀನನ್ನು ಭೂಮಿ ಇಲ್ಲದ ಭೂಹೀನರಿಗೆ ಹಾಗೂ ವ್ಯವಸಾಯ ಕೂಲಿಗಾರರಿಗೆ ಕೊಡಬೇಕು.

ಇನ್ನೊಂದು ವಿಷಯ. ಅದು ವಿಲೇಜ್ ಅಕೌಂಟೆಂಟ್ಸನ್ನು ನೇಮಕ ಮಾಡುವುದು. ವಂಶ ಪಾರಂಪರ್ಯವಾಗಿ ಆ ಹಕ್ಕು ಗ್ರಾಮಾಧಿಕಾರಿಗಳಿಗೆ ಇದೆ. ಅದು ಪ್ರಜಾಪ್ರಭುತ್ವ ತತ್ವಕ್ಕೆ ಸರಿಯಲ್ಲ. ಅವು ರದ್ದಾಗಬೇಕು. ಅಧಿಕಾರಗಳನ್ನು ನೇಮಿಸಬೇಕೆಂಬುದು ಬಹಳ ಒಳ್ಳೆಯ ಸಲಹೆ. ಹಿಂದೆ ಶಾನು–ಭೋಗರುಗಳ ಪೈಕಿ ವಿದ್ಯಾವಂತರನ್ನು ಈಗ ವಿಲೇಜ್ ಅಕೌಂಟೆಂಟ್ಸ್ ಆಗಿ ನೇಮಕ ಮಾಡಿದ್ದೀರಿ. ಅವರು ಯಾವ ಊರಿನಲ್ಲಿ ವಾಸವಾಗಿದ್ದಾರೆ ? ಪ್ರತಿಯೊಂದು ಊರಿಗೆ ವಿಲೇಜ್ ಅಕೌಂಟೆಂಟ್ಸ್ ಎಂಬುದಾಗಿ ನೇಮಕ ಮಾಡಿದ ಉದ್ದೇಶವೇನು ? ಒಬ್ಬರ ಹಿಡಿತದಲ್ಲಿ ಈ ಗ್ರಾಮಾಧಿಕಾರಿಗಳು ಇರಬೇಕು. ಎಂಬುದೇ ಆ ಉದ್ದೇಶ ಏಕೆಂದರೆ ಈಗ ಅವರಿಂದ ತಿಳಿವಳಿಕೆ ಇಲ್ಲದ ರೈತರಿಗೆ ಬಹಳವಾಗಿ ಅನ್ಯಾಯ ವಾಗುತ್ತಿದೆ. ಅವರಿಗೆ ಕೆಲಸಗಳನ್ನು ಕೊಟ್ಟು ಬೇರೆ ಹೋಬಳಿಗಳಿಗೆ ಕಳುಹಿಸಿ. ಯಾರ್ಯಾರು ಗ್ರಾಮಾಧಿಕಾರಿಗಳು ಮತ್ತು ಶಾನುಭೋಗರುಗಳು ಇದ್ದಾರೆಯೋ. ಯಾರ್ಯಾರು ವಿಲೇಜ್ ಅಕೌಂಟೆಂಟ್ಸ್ ಕೆಲಸ ಮಾಡಿದ್ದಾರೋ ಅಂತಹವರಿಗೆ ಆ ಗ್ರಾಮಗಳಲ್ಲಿಯೆ ಕೆಲಸ ಮಾಡುವುದಕ್ಕೆ ಖಂಡಿತವಾಗಿ ಅವಕಾಶ ಕೊಡಬಾರದು. ಇಲ್ಲದಿದ್ದರೆ ಈ ಗ್ರಾಮಾಧಿಕಾರಿಗಳ ವಂಶಪಾರಂಪರ್ಯವಾದ ಹಕ್ಕು ಏನಿಗೆ ಅದನ್ನು ರದ್ದು ಮಾಡಿದರೂ ಅದರಿಂದ ಏನೂ ಅನುಕೂಲವಾಗುವುದಿಲ್ಲ.

ಇನ್ನು ಆಕ್ವಿಸಿಷನ್ ಪ್ರೊಸೀಡಿಂಗ್ಸ್ ವಿಷಯ. ಹರಿಜನರಿಗೆ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕೊಡುವ ಸಾಲದ ಬಗ್ಗೆ ಬೇಕಾದಷ್ಟು ಕಾಗದಗಳು ಸರ್ಕಾರದಲ್ಲಿ ಪೆಂಡಿಂಗ್‌ನಲ್ಲಿವೆ. ಸುಮಾರು ೧೧–೧೫ ವರ್ಷಗಳಿಂದ ಎಷ್ಟು ಪೆಂಡಿಂಗ್‌ನಲ್ಲಿವೆ ಇದರ ಬಗ್ಗೆ ಸರ್ಕಾರದವರಲ್ಲಿ ಬೇಕಾದಷ್ಟು ಪ್ರೊಪೋಸಲ್ಸ್ ಇದೆ. ಆದರೆ ಅದು ಆಫೀಸ್‌ನ ದಿವಸಗಳಲ್ಲಿ ತೀರ್ಮಾನವಾಗಬೇಕೆಂದಿಲ್ಲ ಯಾರಾದರೂ ಒಬ್ಬ ಎಂ. ಎಲ್. ಎ ಅಥವಾ ಒಬ್ಬ ಪುಢಾರಿಯನ್ನು ನೋಡಿ ಅರ್ಜಿಯನ್ನು ಬರೆದುಕೊಟ್ಟರೆ, ಅದು ಷೇರ್ ದಾರನಿಗೆ ಹೋಗುತ್ತದೆ. ಅಲ್ಲಿ ತೀರ್ಮಾನವಾಗಿ ಬರುವುದಕ್ಕೆ ೨ ವರ್ಷಗಳಾಗುತ್ತವೆ. ಆದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರ ಮತ್ತು ಗಿರಿಜನರಿಗೆ ಸಂಬಂಧಪಟ್ಟ ರಿಕಾರ್ಡ್ಸ್ ಇನ್ನೂ ಬಹಳ ನಿಧಾನವಾಗುತ್ತದೆ. ಇಂಥಾ ವಿಷಯಗಳನ್ನು ಜಾಗ್ರತೆಯಾಗಿ ತೀರ್ಮಾನಮಾಡುವುದಕ್ಕಾಗಿ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಬೇಕು. ಎಷ್ಟೋ ವರ್ಷಗಳಿಂದ ಈ ಆಕ್ವಿಸಿಷನ್ ರಿಕಾರ್ಡ್ಸ್ ಮತ್ತು ಪ್ರೊಸೀಡಿಂಗ್ಸ್ ಕೇಸುಗಳು

ಪೆಂಡಿಂಗ್‌ನಲ್ಲಿವೆ. ಅವುಗಳ ಬಗ್ಗೆ ವಿಶೇಷ ಗಮನವನ್ನು ಕೊಡಬೇಕು. ಈ ವಿಚಾರದಲ್ಲಿ ರೆವಿನ್ಯೂ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಕೊನೆಯಲ್ಲಿ ಇನ್ನೊಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಆದು ಅಭಾವ ಪೀಡಿತ ಪ್ರದೇಶದ ವಿಚಾರ. ಕೋಲಾರ ಜಿಲ್ಲೆ ಕಳೆದ ಮೂರು ವರ್ಷಗಳಿಂದಲೂ ಅಂದರೆ ೧೯೬೭, ೧೯೬೮-೧೯೬೯ನೇ ಇಸವಿಗಳಲ್ಲಿ ಮಳೆಯಾಗದೆ ಬಹಳ ಕಠಿಣ ಪರಿಸ್ಥಿತಿಯಲ್ಲಿತ್ತು. ಇದುವರೆವಿಗೂ ಹೆಚ್ಚು ಮಳೆಯಾಗದೇ ಇದ್ದುದರಿಂದ ಕಂದಾಯವನ್ನು ಮಾಫಿ ಮಾಡಬೇಕೆಂದು ಹೇಳಿ ಕೋಲಾರ ಜಿಲ್ಲೆಯ ರೈತರ ಸಂಘಗಳು ಮತ್ತು ಅಲ್ಲಿನ ಜನಗಳು ಪ್ರಬಲವಾದ ಹೋರಾಟವನ್ನು ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಆ ಬಗ್ಗೆ ಸರಕಾರಕ್ಕೆ ಒಂದು ಶಿಫಾರಸು ಮಾಡಿ ಮೂರು ವರ್ಷಗಳಿಂದಲೂ ಅಲ್ಲಿ ಬೆಳೆ ಇಲ್ಲ ಕಂದಾಯ ಮಾಫಿಮಾಡಬೇಕೆಂದು ಸರ್ಕಾರಕ್ಕೆ ವರದಿ ಮಾಡಿದ್ದರೂ ಮಾನ್ಯ ರೆವಿನ್ಯೂ ಮಂತ್ರಿಗಳು ಇದರ ಬಗ್ಗೆ ಏನೂ ಕೂಡ ತೀರ್ಮಾನ ಕೈಗೊಳ್ಳದೇ ಇದ್ದಾರೆ. ಇದು ಸರಿಯಲ್ಲ ಅವರ ಅಧಿಕಾರಿಗಳೇ ಆ ರೀತಿಯಾಗಿ ಶಿಫಾರಸು ಮಾಡಿರುವುದರಿಂದ ಕಳೆದ ೩ ವರ್ಷಗಳಿಂದ ಕೊಡಬೇಕಾದ ಕಂದಾಯವನ್ನು ಮಾಫಿ ಅಥವಾ ರದ್ದು ಮಾಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಂಗನಗೌಡ (ಲಿಂಗಸುಗೂರ್) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳೇ ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸಿ ಕೆಲವು ಮುಖ್ಯ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಪೊಟ್ಟ ಪೊದಲನೆಯದಾಗಿ ನಮ್ಮ ರೆವಿನ್ಯೂ ಸಚಿವರು ಈ ರಾಜ್ಯದಲ್ಲಿ ಹೊಸದಾಗಿ ಪಟ್ಟಾ ಬುಕ್‌ಗಳನ್ನು ಹಂಚುವ ಕೆಲಸ ಮಾಡಿದ್ದಾರೆ ಅದಕ್ಕಾಗಿ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಜೊತೆಗೆ ಒಂದು ಮಹತ್ವದ ಹೆಜ್ಜೆಯನ್ನು ಮುಂದಿಟ್ಟಿದ್ದಾರೆ ರಿಕಾರ್ಡ್ ಆಫ್ ರೈಟ್ಸ್ ಏನಿದೆಯೋ ಅದರ ಪ್ರತಿಯನ್ನು ಪ್ರತಿಯೊಬ್ಬ ರೈತನಿಗೂ ಸರ್ಕಾರ ಉಚಿತವಾಗಿ ಕೊಡಬೇಕೆಂದು ನಿರ್ಣಯ ತೆಗೆದು—ಕೊಂಡಿದ್ದಾರೆ. ಇದು ಬಹಳವಾಗಿ ಮೆಚ್ಚತಕ್ಕ ವಿಷಯವಾಗಿದೆ. ಅಷ್ಟೇ ಅಲ್ಲ. ಸರ್ಕಾರದವರು ಇದರಿಂದ ಒಂದು ಮಹತ್ವವಾದಂಥ ಹೆಜ್ಜೆಯನ್ನು ಇಟ್ಟಿದ್ದಾರೆಂದು ನಾನು ಈ ಪ್ರಸಂಗದಲ್ಲಿ ಹೇಳಬಹುದು. ಏಕೆಂದರೆ ಇವತ್ತು ಒಬ್ಬ ರೈತ ತನ್ನ ದಿನ ಬೆಳಗಿನ ಕೆಲಸಕ್ಕಾಗಿ ಕೈಗೆ ಸಾಲವನ್ನು ಸ್ವತ್ತುಗಳ ಮೇಲೆ ತೆಗೆದು ಕೊಳ್ಳುವ ಪ್ರಸಂಗ ಬಂದಾಗ ಸಾಧಾರಣವಾಗಿ ೫ ರೂಪಾಯಿಗಳಿಂದ ೨೫ ರೂಪಾಯಿಗಳವರೆಗೆ ಖರ್ಚು ಮಾಡುವ ಪ್ರಸಂಗ ಇವತ್ತಿನವರೆಗೂ ಚಾಲ್ತಿಯಲ್ಲಿದೆ. ಆದ್ದರಿಂದ ಸರ್ಕಾರದವರ ಪ್ರತಿಯೊಬ್ಬ ರೈತನಿಗೂ ಉಚಿತವಾಗಿ ಕೊಡುವ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಪ್ರಗತಿ ಪಥದಲ್ಲಿ ಇರುವ ಒಂದು ಹೆಜ್ಜೆಯನ್ನು ಮುಂದಿಟ್ಟಿದ್ದಾರೆಂದು ನಾನು ಹೇಳುತ್ತೇನೆ ಜೊತೆಗೆ ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ತಾವು ಇದರ ಬಗ್ಗೆ ಏನು ನಿಯಮ ಮಾಡಿದ್ದೀರೋ ಅದನ್ನು ಕಟ್ಟುನಿಟ್ಟಾಗಿ ಜಾರಿಯಲ್ಲಿ ತರಬೇಕು, ಇಲ್ಲದೆ ಹೋದರೆ ಇಷ್ಟೊಂದು ನಿರ್ಣಯ ತೆಗೆದುಕೊಂಡಿದ್ದು ವ್ಯರ್ಥವಾಗುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಈ ರಿಕಾರ್ಡ್ ಆಫ್ ರೈಟ್ಸ್ ಹೈದರಬಾದ್‌ನಲ್ಲಿ ಬಹಳ ವರ್ಷಗಳಿಂದ ಜಾರಿಯಲ್ಲಿದೆ.

5—0 P.M.

ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಸೆಕ್ಷನ್ ೧೩ ಆನವಡ್ಸ್ ನೋಡಿದರೆ ಒಬ್ಬ ರೈತ ಯಾವುದಾದರೂ ಜಮೀನನ್ನು ಖರೀದಿ ಮಾಡಿದರೆ ಆ ಖರೀದಿ ಪತ್ರ ರಿಜಿಸ್ಟರ ಆದ ಮೇಲೆ, ಶಾನುಭೋಗನಾಗಲಿ, ಪಟವಾರಿ ಆಗಲಿ, ಗ್ರಾಮಸ್ಥರಾಗಲಿ ಆದನ್ನು ವರದಿ ಮಾಡತಕ್ಕ ಜವಾಬ್ದಾರಿ ಅವರ ಮೇಲೆ ಇಲ್ಲ. ಸೇಲ್ ಡೀಡ್ ಆದ ಮೇಲೆ ಗ್ರಾಮಸ್ಥರು ಇರಲಿ; ಪಟವಾರಿ ಇರಲಿ, ಪರ್ಗಾಮಗಿ ರಿಜಿಸ್ಟರಿನಲ್ಲಿ ಎಂದರೆ ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ಎನ್ಟ್ರಿ ಮಾಡುವುದು ಅವರ ಕರ್ತವ್ಯ. ನಮಗೆ ಗೊತ್ತಿರುವ ಹಾಗೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಹೇಳಬೇಕಾದರೆ ೧೯೫೬ನೇ ಇಸವಿಯಿಂದ ಇದುವರೆಗೂ ಹೈದರಾಬಾದ ಕರ್ನಾಟಕದಲ್ಲಿ ಆ ರೀತಿ ಮಾಡದೇ ಇರತಕ್ಕಂತಹ ಸಾವಿರಾರು ಉದಾಹರಣೆಗಳು ಸಿಕ್ಕುತ್ತವೆ ಖರೀದಿ ಪತ್ರ ಮಾಡಿ—ಕೊಂಡಿರುತ್ತಾರೆ. ಸಬ್ ರಿಜಿಸ್ಟ್ರಾರ ಕಚೇರಿಯಿಂದ ಮತ್ತು ತಾಲ್ಲೂಕು ಕಛೇರಿಯಿಂದ ಪ್ರತಿ ತಿಂಗಳು ವರದಿ ಹೋಗುತ್ತದೆ. ಆದರೆ ಗ್ರಾಮಸ್ಥರು ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ಎನ್ಟ್ರಿ ಮಾಡಿರುವುದಿಲ್ಲ. ಒಂದು ಉದಾಹರಣೆ ಕೊಡುವುದಾದರೆ ೧೯೫೬ನೇ ಇಸವಿಯಲ್ಲಿ ಲಿಂಗಸುಗೂರು ಕಮಲದಿನ್ನಿಯಲ್ಲಿ ಒಬ್ಬ ರೈತ ಎರಡು ಸಾವಿರ ರೂಪಾಯಿ ಬೆಲೆಬಾಳತಕ್ಕ ಜಮೀನನ್ನು ಹಣ ಮಗಳ ಹೆಸರಿಗೆ ರಿಜಿಸ್ಟರ

(ಶ್ರೀ ಕೆ. ಸಂಗನಗೌಡ)

ಮಾಡಿದ್ದ. ೧೯೫೬ನೇ ಇಸವಿಯಿಂದ ೧೯೭೦ನೇ ಇಸವಿಯವರೆಗೂ ಗ್ರಾಮಸ್ಥರು ರಿಜಸ್ಟರನಲ್ಲಿ ಅದರ ಎನ್ಟ್ರಿ ಮಾಡಿರಲಿಲ್ಲ. ಮೂರು ನಾಲ್ಕು ವರ್ಷಗಳ ಹಿಂದೆ ಸಂಬಂಧಪಟ್ಟ ರೈತ ಖರೀದಿ ಪತ್ರ ಕೊಟ್ಟು ರಿಜಸ್ಟರ ಮಾಡಿ ಎಂದರೆ ರಿಜಿಸ್ಟರ್ ಮಾಡದೆ ನೂರು ರೂಪಾಯಿ ತೆಗೆದುಕೊಂಡು ಅವನಿಗೆ ಮೋಸ ಮಾಡಿರುತ್ತಾರೆ. ಇದುವರೆಗೂ ರಿಜಸ್ಟರನಲ್ಲಿ ಎನ್ಟ್ರಿ ಮಾಡಲಿಲ್ಲ. ಆರು ತಿಂಗಳ ಹಿಂದೆ ಅವನ ಮೇಲೆ ಕೇಸ್ ಮಾಡಿ ಇಂಜಂಕ್ಷನ್ ಆರ್ಡರ ಕೊಟ್ಟಿರುತ್ತಾರೆ. ಈ ರೀತಿ ಬೇಕಾದಷ್ಟು ಅನ್ಯಾಯ ಮಾಡಿ— ರುತ್ತಾರೆ. ಇದನ್ನು ಸರಕಾರದವರು ನೋಡಬೇಕು. ತಾವು ನಿಜವಾಗಿ ರೆಕಾರ್ಡ ಆಫ್ ರೈಟ್ಸ ಕೊಡಬೇಕೆಂದು ನಿರ್ಣಯ ಮಾಡಿದರೆ ಅದು ಅವನಿಗೆ ಸಿಕ್ಕಿದರೆ ಸಂತೋಷ. ಅದು ಪುಸ್ತಕದಲ್ಲಿ ಉಳಿದು ಕಾರ್ಯ ರೂಪದಲ್ಲಿ ಬಾರದೆ ಇದ್ದರೆ ಏನು ಪ್ರಯೋಜನ ? ಆದುದರಿಂದ ಗ್ರಾಮಸ್ಥರೇ ಇರಲಿ ಶಾನುಬೋಗರೇ ಇರಲಿ, ಪಟವಾರಿ ಇರಲಿ, ವಿಲೇಜ ಅಕೌಂಟೆಂಟ ಇರಲಿ ಅವನು ರಿಜಸ್ಟರನಲ್ಲಿ ಎನ್ಟ್ರಿ ಮಾಡಲೇಬೇಕು ಎಂದು ನಿಯಮಗಳಲ್ಲಿ ಸೇರಿಸುವುದು ಸೂಕ್ತ. ಗ್ರಾಮಸ್ಥರು ತಹಸೀಲದಾರರಿಂದ ಖರೀದಿ ಪತ್ರದ ಬಗ್ಗೆ ವರದಿ ಬಂದ ೩೦ ದಿವಸದೊಳಗೆ ಅಥವಾ ಎರಡು ಮೂರು ತಿಂಗಳೊಳಗೆ ಎನ್ಟ್ರಿ ಮಾಡದೆ ಇದ್ದರೆ ಅವನ್ನು ಸಸ್ಪೆಂಡ್ ಮಾಡುವುದಕ್ಕೆ ಯೋಗ್ಯ ಇದ್ದಾನೆ. ಹಾಗೆ ಸಸ್ಪೆಂಡ್ ಮಾಡತಕ್ಕದ್ದು ಎಂದು ನಿಯಮ ಮಾಡಬೇಕು. ಇದು ವಿಲೇಜ ಅಕೌಂಟೆಂಟರು ಮಾಡುವ ಕೆಲಸ ಏಂದು ನಿಯಮ ಮಾಡಬೇಕು. ಆ ರೀತಿ ಮಾಡದೇ ಇದ್ದರೆ, ಮುಂದೆ ಇಡತಕ್ಕ ಹೆಜ್ಜೆಯಿಂದ ಯಾವ ಪರಿಣಾಮ— ವಾಗಬೇಕೋ ಅದು ಆಗಲಿಕ್ಕೆ ಇಲ್ಲ ಎಂದು ತಿಳಿಸ ಬಯಸುತ್ತೇನೆ.

ಎರಡನೆಯದಾಗಿ ಹೈದರಾಬಾದ್ ಕರ್ನಾಟಕದಲ್ಲಿ ಇರುವ ಒಂದೆರಡು ವೈಶಿಷ್ಟ್ಯ ಸಮಸ್ಯೆ ಗಳನ್ನು ಸರಕಾರದ ಗಮನಕ್ಕೆ ತರಬಯಸುತ್ತೇನೆ. ಹೈದರಾಬಾದಿನ ಅನೇಕ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಹಿಂದೆ ಜಹಗೀರುದಾರರು ಇದ್ದರು. ಅನೇಕ ಜನರು ಜಹಗೀರುದಾರರಿಗೆ ಸಂಬಂಧಪಟ್ಟ ಜಮಿನುಗಳನ್ನು ಸಾಗು ಮಾಡುತ್ತಾ ಇದ್ದರು ಮತ್ತು ಅವರು ನೇರವಾಗಿ ಜಹಗೀರುದಾರರಿಗೆ ಕಂದಾಯವನ್ನು ಕೊಡುತ್ತಾ ಇದ್ದರು. ಆಗಿನ ಹೈದರಾಬಾದ ಜಗೀರದಾರರ ಕಾನೂನು ಪ್ರಕಾರ ರೈತರಿಗೆ ಪಟ್ಟ ಇತ್ತು. ಆದರೆ ಅನೇಕ ಹಳ್ಳಿಗಳಲ್ಲಿ ಪಟ್ಟ ಇರದ ರೈತರಿಂದ ಕಂದಾಯಕ್ಕೆ ಹತ್ತು ಪಟ್ಟು ಹಾಕಿ ಶಿವಾಜಮಾ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದರು. ಇದು ಅನ್ಯಾಯ. ಈಗ ಲ್ಯಾಂಡ್ ಗ್ರಾಂಟ್ಸ ರೂಲ್ಸ ಪ್ರಕಾಶ ಪ್ರಾಪಜನ್ ಮಾಡಿದ್ದೀರಿ. ಆದರಂತೆ ಅನಆಥರೈಜ್ಡ್ ಆಗಿ ಸಾಗು ಮಾಡಿದ್ದರೆ ಡಬಲ ದಿ ಮಾರ್ಕೆಟ ಪ್ರೈಜ ಕೊಡ ಬೇಕೆಂದು ಹೇಳುವುದು ಅಷ್ಟು ಉಚಿತವಲ್ಲ. ನನ್ನ ವೈಯಕ್ತಿ ಅಭಿಪ್ರಾಯ ಅಂದರೆ ಕನಿಷ್ಟ ಪಕ್ಷ ಇತರ ಜನರಿಗೆ ಯಾವ ರೀತಿ ಆಪ್ಸೆಟ್ ಪ್ರೈಜ್‌ಗೆ ಕೊಡುತ್ತಿದ್ದಿರೋ ಅದೇ ರೀತಿ ಅನಆಥರೈಜ್ಡ ಸಾಗು ಮಾಡತಕ್ಕ ರೈತರಿಗೂ ಕೊಡಬೇಕು ಅದೇ ಅನುಕೂಲ ಮತ್ತು ಸೌಕರ್ಯವನ್ನು ಅವರಿಗೂ ಮಾಡಿ— ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಸ್ಯಾಂಪ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಸರಕಾರದವರು ಹಸಿರು ಕ್ರಾಂತಿ ಪ್ರಾರಂಬ ಮಾಡಿದ್ದಾರೆ. ರೈತರಿಗೆ ಕೃಷಿ ಕ್ಷೇತ್ರದಲ್ಲಿ ಸುಧಾರಣ ಮಾಡುವುದಕ್ಕೆ ಬಹಳಷ್ಟು ಅನುಕೂಲ ಮಾಡಿಕೊಟ್ಟಿರುವುದು ಮೆಚ್ಚತಕ್ಕ ವಿಷಯ. ಆದರ ಒಂದು ವಿಧದಲ್ಲಿ ಅವನಿಗೆ ಭಾರ ಆಗುವ ರೀತಿಯಲ್ಲಿ ಸರಕಾರ ನಡೆದುಕೊಳ್ಳುತ್ತಿದೆ. ಅದು ಯಾವ ರೀತಿ ಎಂದು ಕೇಳಬಹುದು. ಈಪ್ಪೊತ್ತು ಸಾಮಾನ್ಯ ಮನುಷ್ಯನಿಗೆ ಟ್ರಾಕ್ಟರ ಕೊಳ್ಳುವುದಕ್ಕಾಗುವುದಿಲ್ಲ. ಸಾಧಾರಣವಾಗಿ ಒಂದು ಟ್ರಾಕ್ಟರ ಖರೀದಿ ಮಾಡಲಿಕ್ಕೆ ೨೫—೩೦ ಸಾವಿರ ರೂಪಾಯಿ ಬೇಕು. ಒಕ್ಕಲುತನ ಕ್ರಾಂತಿ ಮಾಡಲಕ್ಕೆ ಮುಖ್ಯವಾದ ಸಾಧನ ಎಂದರೆ ಟ್ರಾಕ್ಟರ. ಟ್ರಾಕ್ಟರನ್ನು ತೆಗೆದುಕೊಳ್ಳುವ ಮನುಷ್ಯನು ಹೈಯರ್ ಪರಚೇಜನಲ್ಲಿ ಖರೀದಿ ಮಾಡಬೇಕೆಂದರೆ ೧೫೦೦ ರಿಂದ ೨೦೦೦ ರೂಪಾಯಿಗಳ ವರೆಗೆ ಸ್ಯಾಂಪ ಡ್ಯೂಟಿ ಕೊಡಬೇಕಾಗುತ್ತದೆ. ಈ ಮನೆಯಲ್ಲಿ ಈ ವಿಷಯವನ್ನು ಅನೇಕ ಸದಸ್ಯರು ಸರಕಾರದ ಗಮನಕ್ಕೆ ತಂದಿದ್ದಾರೆ. ತಾವು ಅನೇಕ ಸಂಘ ಸಂಸ್ಥೆಗಳಿಗೆ ಯಾವ ಪ್ರಕಾರ ಸ್ಯಾಂಪ ಡ್ಯೂಟಿ ವಿನಾಯತಿಯನ್ನು ಕೊಟ್ಟಿದ್ದೀರೋ ಅದೇ ರೀತಿ ಹಸಿರು ಕ್ರಾಂತಿಯನ್ನು ಯಶಸ್ವಿಯಾಗಿ ಮಾಡಲು ಕನಿಷ್ಟ ಪಕ್ಷ ಈ ಸ್ಯಾಂಪ ಡ್ಯೂಟಿಯಿಂದ ಅವನಿಗೆ ವಿನಾಯಿತಿ ಕೊಡಬೇಕೆದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಹೌಸಿಂಗ್ ಬೋರ್ಡ್‌ನಲ್ಲಿ ನಡೆಯತಕ್ಕ ವಿಚಾರ ತಿಳಿಸುತ್ತೇನೆ. ಲೋ ಇನಕಂ ಗ್ರೂಪ್ ಮತ್ತು ಮಿಡಲ ಇನಕಂ ಗ್ರೂಪ್‌ನಲ್ಲಿ ಜನ ಸಾಲ ತೆಗೆದುಕೊಳ್ಳಲು ಹೋದಾಗ ಸೈಟನ್ನು ಮಾರ್ಟಗೇಜ ಮಾಡುವ ಕಾಲಕ್ಕೆ ಐನೂರು ರೂಪಾಯಿ ನಿಂದ ಸಾವಿರ ರೂಪಾಯಿಗಳ ವರೆಗೆ ಸ್ಟಾಂಪ್ ಡ್ಯೂಟಿ ಕೊಡುವ ಪ್ರಸಂಗ ಬರುತ್ತದೆ. ಮಿಡಲ ಇನಕಂ ಗ್ರೂಪ್ ವಿನಾಯಿತಿ ಕೊಡುದಿದ್ದರೂ ಕನಿಷ್ಟ ಪಕ್ಷ ಲೋ ಇನಕಂ ಗ್ರೂಪ್‌ಗೆ ವಿನಾಯಿತಿ ಕೊಡುವುದು ಯೋಗ್ಯ ಎಂದು ಹೇಳುತ್ತೇನೆ.

ಇನ್ನು ಕೋರ್ಟ್ ಫೀ ಬಗ್ಗೆ ಸರಕಾರದ ಲಕ್ಷ್ಯವನ್ನು ಸೆಳೆಯ ಬಯಸುತ್ತೇನೆ. ಕೋರ್ಟ್ ಫಿ ಆಕ್ಟ್ ಸೆಕ್ಷನ್ ೭ ಸಬ್ ಸೆಕ್ಷನ್ ೨ (ಡಿ) ನಲ್ಲಿ ಒಂದು ಗಮನ ಹರಿಸತಕ್ಕ ಮುಖ್ಯ ವಿಷಯ ಇದೆ. ಲೋಯರ್ ಕೋರ್ಟ್‌ನಲ್ಲಿ ಸಿವಿಲ್ ಸೂಟ ಫೈಲ ಮಾಡುವ ಕಾಲಕ್ಕೆ ನಮಗೆ ಒಂದು ತೊಂದರೆ ಬರುತ್ತದೆ. ಯಾವು— ದಾದರೂ ಒಂದು ಜಮೀನು ಹತ್ತು ಎಕರೆ ಇದ್ದರೆ ಅದರಲ್ಲಿ ನಾಲ್ಕು ಎಕರೆ ಮೂಲಕನಾಗಿ ಸೂಟ ಫೈಲ ಮಾಡುವ ಕಾಲಕ್ಕೆ ಹತ್ತು ಎಕರೆ ಕಂದಾಯದ ಮೇಲೆ ಕೋರ್ಟ ಫೀಸ್ ಕೊಡಬೇಕಾಗುತ್ತದೆ. ಹೈಕೋರ್ಟ ಫೀಸ್ ಎಕ್ಸಾಮಿನರ ಸ್ಕ್ರುಟಿನಿ ಮಾಡುವ ಕಾಲಕ್ಕೆ ಮಾರ್ಕೆಟ್ ಪ್ರೈಜ ಮೇಲೆ ಕೋರ್ಟ್ ಫೀ ಕೊಡ— ಬೇಕಾಗುತ್ತದೆ. ಅದು ಇಡೀ ಸರ್ವೇ ನಂಬರಿಗೆ ಸಂಬಂಧಪಟ್ಟ ಕಂದಾಯದ ಮೇಲೆ ಕೋರ್ಟ ಫಿ ಕೊಡಬೇಕೆಂದು ಹೇಳುತ್ತಾರೆ. ಇದು ನಿಜವಾಗಿಯೂ ಪ್ರತಿನಿತ್ಯ ಕೆಳಗಿನ ಕೋರ್ಟನಲ್ಲಿ ಕೆಲಸ ಮಾಡತಕ್ಕ ಲಾಯರುಗಳಿಗೆ ಬರತಕ್ಕ ತೊಂದರೆ. ನನಗೆ ತಿಳಿದ ಮಟ್ಟಿಗೆ ಹೈದರಾಬಾದು ಮತ್ತು ರಾಜಾಸ್ತಾನ ಹೈಕೋರ್ಟನಲ್ಲಿ ಈ ರೀತಿ ಮಾರ್ಕೆಟ ರೇಟ ಮೇಲೆ ಕೋರ್ಟು ಫೀ ತೆಗೆದುಕೊಳ್ಳುವುದು ಅನ್ಯಾಯ ಎಂದು ತೀರ್ಮಾನ ಮಾಡಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಸಿ ಸಂಬಂಧಪಟ್ಟ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರಕಾರದವರು ರಿಟ್ ಪಿಟಿಷನ್ ಬಗ್ಗೆ ೨೫ ರೂಪಾಯಿನಿಂದ ೧೦೦ ರೂಪಾಯಿಗಳವರೆಗೆ ಕೋರ್ಟ ಫೀ ಕೊಡಬೇಕೆಂದು ಮಾಡಿದ್ದಾರೆ. ಅದು ಸೂಕ್ತವಲ್ಲ. ಅದನ್ನು ಕೈ ಬಿಡಬೇಕು. ಪ್ರಜಾಪ್ರಭುತ್ವದಲ್ಲಿ ಸರಕಾರ ಅನೇಕ ತಪ್ಪುಗಳನ್ನು ಮಾಡುವುದು ಉಂಟು ಪ್ರಜೆಗಳು ಸಾರ್ವ ಭೌಮರು ಎಂದು ಹೇಳುವಾಗ ಕೋರ್ಟಫೀ ಹೆಚ್ಚು ಮಾಡುವುದು ಸರಿಯಲ್ಲ. ಈಗ ಸಾವಿರಾರು ರಿಟ ಪಿಟಿಷನ ಹೈಕೋರ್ಟನಲ್ಲಿ ಇದೆ. ಸರಕಾರ ತಪ್ಪು ಮಾಡಿದೆ ಎಂದು ಹೈಕೋರ್ಟಗೆ ರಿಟ್ ಪಿಟಿಷನ್ ಹೋಗುತ್ತಾರೆ. ಹೀಗಿರುವಾಗ ಕೋರ್ಟು ಫೀಜನ್ನು ೨೫ ರೂಪಾಯಿನಿಂದ ೧೦೦ ರೂಪಾಯಿಗಳಿಗೆ ಏರಿಸಿರುವುದು ಸೂಕ್ತವಲ್ಲ. ಈ ಕೋರ್ಟ ಫೀ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನ ರೀಚ್‌ನಲ್ಲಿ ಇರುವುದು ಯೋಗ್ಯ ಎಂದು ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ ಪಿ. ಗಂಗಾಧರ್ (ತುಮಕೂರು) :-ಅಧ್ಯಕ್ಷರೇ, ಸರ್ಕಾರದ ಮೇಲೆ ನನ್ನ ಜಾರ್ಜ್ ಬಹಳ ಗಹನವಾಗಿದೆ ಮತ್ತು ತೀವ್ರವಾಗಿದೆ. ಈ ಮೂರು ವರ್ಷದಿಂದಲೂ ಹೇಳುತ್ತಾ ಇದ್ದೇನೆ. ಜಮೀನು ಗಳನ್ನು ವಿಲೇವಾರಿ ಮಾಡತಕ್ಕ ಸರ್ಕಾರದ ಒಂದು ನೀತಿ ಬಹಳ ದುರ್ಬಲವಾಗಿದೆ. ಅವರ ನೀತಿ ನಿಜವಾಗಿಯೂ ಅಸಹ್ಯವಾಗಿದೆ, ತಮಗೆ ಬೇಕಾದಂತಹ ಜನಗಳಿಗೆ ಮಾತ್ರ ಸಹಾಯ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಮತ್ತೆ ಇಲ್ಲಿ ಹೇಳಬೇಕಾಗಿದೆ. ಹಿಂದಿನ ಸಾರಿ ಚುನಾವಣೆ ಆದನಂತರ ಹಿಂದೆ ಇದ್ದಂಥ ಮಂತ್ರಿಗಳು ತಮ್ಮ ಆಫೀಸನ್ನು ಲೇಡೌನ್ ಮಾಡುವುದರೊಳಗೆ ಬೆಂಗಳೂರಿನ ಕಾರ್ಪೊರೇಷನ್ ಏರಿಯಾದಲ್ಲಿ ಎಕರೆಗಟ್ಟಲೆ ಜಮೀನನ್ನು ತಮಗೆ ಬೇಕು ಬೇಕಾದವರಿಗೆ ಗಿಫ್ಟ್ ಆಗಿ ಕೊಟ್ಟುಬಿಟ್ಟಿದ್ದಾರೆ. ಒಂದೊಂದು ಎಕರೆ ಲಕ್ಷಾಂತರ ರೂಪಾಯಿ ಬೆಲೆಬಾಳುತ್ತದೆ. ಆಗ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ ನವರಿಗೆ ಈ ಬಗ್ಗೆ ಮನವಿಯನ್ನು ಸಲ್ಲಿಸಿದ್ದೆ, ಯಾರ್ಯಾರಿಗೆ ಕೊಟ್ಟಿದ್ದಾರೋ ಅದನ್ನು ನಿಲುಗಡೆ ಮಾಡಬೇಕೆಂದು ಹೇಳಿದೆ. ಇಂಟರಿಂ ಸ್ಟೇ ಕೊಟ್ಟರು. ಆಗಿದ್ದ ರೆವಿನ್ಯೂ ಮಂತ್ರಿಗಳು ಲಿಸ್ಟ್ ತರಿಸಿ— ಕೊಂಡು ಸ್ಟೇಕೊಟ್ಟಿದ್ದೇನೆ ಅಂಥ ಹೇಳಿ ನನಗೆ ಒಂದು ಎಂಡಾರ್ಸ್‌ಮೆಂಟು ಕೊಟ್ಟರು, ಅಲ್ಲಿಂದೀಚೆಗೆ ಅದು ಏನಾಯಿತೋ ಗೊತ್ತಿಲ್ಲ. ಆ ಕೇಸುಗಳು ತೀರ್ಮಾನವಾಯಿತೇ ? ಸ್ಟೇ ಕೊಟ್ಟದ್ದನ್ನು ವಜಾ ಮಾಡಿದರೇ, ಅಥವಾ ಅವರಿಗೇ ಮಂಜೂರು ಮಾಡಿದರೇ ಎಂಬುದು ಇವತ್ತಿಗೂ ಸಂಶಯವಾಗಿದೆ. ಅದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಸಿನಿಮಾ ಓನರ್ಸ್, ದೊಡ ದೊಡ್ಡ ಆನುಕೂಲಸ್ಥರು, ಗಿರಣಿ ಮಾಲೀಕರು, ಮತ್ತು ಲಾಭಬಡಕರಿಗೆ ಎಕರೆ ಗಟ್ಟಲೆ ಜಮೀನನು ಕೊಟ್ಟಿದ್ದಾರೆ ಅದು ಏನಾಯಿತು ಅಂತ ಅನ್ನುವುದು ಇದುವರೆಗೂ ಗೊತ್ತಿಲ್ಲ, ಅದರ ಬಗ್ಗೆ ಏನು ಹೇಳುತ್ತೀರಿ ಎಂದು ಕೇಳುತ್ತೇನೆ. ಹಿಂದಿನ ಸಾರಿ ಮಾತನಾಡುವಾಗ ಕೂಡ ಹೇಳಿದೆ ಸುಮಾರು ೯ ಕೋಟಿ ರೂಪಾಯಿ ಬೆಲೆ ಬಾಳತಕ್ಕ ಜಾಗವನ್ನು ಈ ನಗರವಲ್ಲಿ ತಮಗೆ ಬೇಕು ಬೇಕಾದವರಿಗೆ ಸರ್ಕಾರದ ಬೊಕ್ಕಸದ ಹಣ ಎಷ್ಟು ಪವಿತ್ರವೋ ಬೆಲೆ ಬಾಳುವುದೋ ಅಷ್ಟೇ ಪವಿತ್ರವೂ ಬೆಲೆಬಾಳತಕ್ಕದ್ದು ಆಗಿರತಕ್ಕ ಜಾಗವನ್ನು ಧಾರೆ ಎರೆದು ಬಿಟ್ಟಿದ್ದಾರೆ, ಇದರ ಬಗ್ಗೆ ವಿವರಣೆ ಕೇಳುತ್ತಾ ಇದ್ದೇನೆ. ಇದೇ ರೀತಿ ತುಮಕೂರಿನಲ್ಲೂ ಕೂಡ ಒಳ್ಳೆಯ ಜಮೀನುಗಳನ್ನು ಕೊಟ್ಟಿದ್ದಾರೆ. ಹೀಗೆ ಜಮೀನುಗಳನ್ನು ಕೊಡತಕ್ಕ ರೀತಿನೀತಿ ನೋಡಿದರೆ ಬಹುಶಃ ಈಗ ಟಿಮಾಕ್ಕೆಸಿ ಉಳಿದಿಲ್ಲ, ಎಂಬುದು ಕಂಡುಬರುತ್ತದೆ. ಶ್ರೀಮಾನ್ ನಂಜೇ ಗೌಡರು ಮಾತನಾಡುವಾಗ ನನಗೆ ಅಲ್ಲಿ ಭೂಮಿ ಕೊಟ್ಟಿದ್ದಾರೆ ಅಂತ ಅನ್ನುವ ರೀತಿಯಲ್ಲಿ ಹೇಳಿದರು, ನಾನು ಎಂದೂ ಯಾವ ಜಮೀನಿಗೂ ಅರ್ಜಿಹಾಕಿದವನಲ್ಲ, ಜಮೀನನು ಕೇಳುವವನೂ ಅಲ್ಲ. ನನಗೆ ಬೇಕಾದರೆ ದುಡ್ಡು ಕೊಟ್ಟು ತೆಗೆದುಕೊಳ್ಳುತ್ತೇನೆ, ಆ ಜೈತನ್ಯ ನನಗೆ ಇದೆ. ಅಂತಹ ಒಂದು ಅನುಮಾನ ಯಾರೂ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ :—ನಾನು ಹೇಳಿದ್ದು ಗಂಗಾಧರ್‌ರವರಿಗೆ ಅಂತ ಅಲ್ಲ, ಅದು ಯಾರು ಅಂತ ನನಗೆ ಗೊತ್ತಿದೆ.

ಶ್ರೀ ಬಿ. ಪಿ. ಗಂಗಾಧರ :—ಲ್ಯಾಂಡ್ ಗ್ರಾಂಟ್ ರೂಲ್ಸ್ ಏನಿದೆ ಇದು ಡೆಮಾಕ್ರೆಟಿಕ್ ಆಗಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದು ಬಹಳ ಪಕ್ಷಪಾತದಿಂದ ಕೂಡಿದೆ. ನಮ್ಮ ದೇಶದಲ್ಲಿ ಬಡ ಜನರು ಯಾರಿದ್ದಾರೋ ಅವರು ಯಾವ ಜಾತಿಯವರಾಗಿರಲಿ ಯಾರು ನಿರ್ಗತಿಕರಾಗಿ, ಒಟ್ಟಿ ಇಲ್ಲದೆ, ಒಂದು ಹೊತ್ತಿಗೆ ಊಟಕ್ಕೂ ಇಲ್ಲದೆ ಇದ್ದಾರೋ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಕಳುಹಿಸುವುದಕ್ಕೂ ಚೈತನ್ಯ ಇಲ್ಲದೆ ಇರತಕ್ಕೆ ಜನ ಇದ್ದಾರೋ ಅಂತಹವರಿಗೆ ವರ್ಷಕ್ಕೆ ಅಥವಾ ತಿಂಗಳಿಗೆ ಇಷ್ಟು ಹಣ ಸಂಪಾದನೆ ಮಾಡುವವರು ಬಡವರು ಅಂತ ನಿಗದಿ ಮಾಡಿ ಅಂಥವರಿಗೆ ಇಂತಿಂಥ ಸೌಲಭ್ಯ ದೊರಕ ಬೇಕೇ-ಎಂಬುದನ್ನು ನಿರ್ದಿಷ್ಟವಾಗಿ ತೀರ್ಮಾನ ಮಾಡಿ ಅವರು ಯಾವಜಾತಿಯವರೇ ಆಗಿರಲಿ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್ ಅವರಿಗೆ ವಿದ್ಯಾಭ್ಯಾಸಕ್ಕೆ ಯಾವ ರೀತಿ ಅನುಕೂಲ ಮಾಡಿಕೊಟ್ಟಿದ್ದೀರೋ ಅದೇ ರೀತಿ ಎಲ್ಲ ಜನಗಳಿಗೂ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಬೇಕಾದಷ್ಟು ಹಣ ನಿಮ್ಮಲ್ಲಿ ಇದೆ, ಪಾನನಿರೋಧವನ್ನು ತೆಗೆದು ಹಾಕಿದ ಮೇಲೆ ೨೨ ಕೋಟಿ ರೂಪಾಯಿ ಬರುತ್ತದೆ, ಮುಂದಿನ ವರ್ಷ ೩೦ ಕೋಟಿ ರೂಪಾಯಿ ಬರಬಹುದು. ಆದ್ದರಿಂದ ಬಡಬಗ್ಗರ ಮಕ್ಕಳಿಗೆ ಮುಫತ್ತಾಗಿ ವಿದ್ಯಾಭ್ಯಾಸ ಕೊಡುವುದರ ಜೊತೆಗೆ ಇತರ ಸೌಲಭ್ಯಗಳನ್ನೂ ಕೊಡಬೇಕು ಮತ್ತು ಜಮೀನುಗಳನ್ನು ಹಂಚುವಾಗ ಅವನು ಯಾವ ಜಾತಿಯವನೇ ಆಗಿರಲಿ ತಾರತಮ್ಯ ಮಾಡದೆ ನಿಜವಾಗಿಯೂ ಯಾರು ಬಡವನೋ ಅವನಿಗೆ ಜಮೀನನ್ನು ಕೊಡಬೇಕು. ಹರಿಜನಗಿರಿಜನರಿಗೆ ಯಾವ ಒಂದು ಧೋರಣೆಯನ್ನು ಅನುಸರಿಸುತ್ತಾ ಇದ್ದೀರೊ ಅದೇ ರೀತಿಯ ಒಂದು ಧೋರಣೆಯನ್ನು ಅನುಸರಿಸಿ ಬಡಜನರಿಗೆ ಜಮೀನು ಹಂಚಿಕೆ ಮಾಡುವಂತೆ ಈ ಲ್ಯಾಂಡ್ ಗ್ರಾಂಟ್ ರೂಲ್‌ನ್ನು ಸಂಪೂರ್ಣವಾಗಿ ಮಾರ್ಪಾಡು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀರಿನ ತೊಂದರೆ ಇದೆ, ಕೆಲವು ಕಡೆ ಕೆರೆಗಳನ್ನು ಕಟ್ಟಿದ್ದಾರೆ. ನಮ್ಮ ಕಡೆ ದೊಡ್ಡ ದೊಡ್ಡ ಪ್ರಾಜೆಕ್ಟು ಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ, ಇಂತಹ ಸನ್ನಿವೇಶ ಇರುವಾಗ ಒಂದು ನಿಯಮ ಹಾಕಿಕೊಳ್ಳಬೇಕು. ಎಲ್ಲಿ ಅಂಡರ್‌ಗ್ರೌಂಡ್ ವಾಟರ್ ಸಿಕ್ಕತಕ್ಕ ಸಂದರ್ಭ ಇದೆ, ಅಂತಹ ಕಡೆ ದೊಡ್ಡ ದೊಡ್ಡ ಇರಿಗೇಷನ್ ಕಮ್ಯೂನಿಟಿ ವೆಲ್ಸ್‌ನ್ನು ಒಂದು ಎರಡು ಲಕ್ಷ ರೂಪಾಯಿನ ಖರ್ಚಿನಲ್ಲಿ ಮಾಡಿಸಿಕೊಟ್ಟರೆ ೨೦೦-೩೦೦ ಎಕರೆ ಜಮೀನು ಸಾಗುವಳಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಕಡೆ ಈ ಒಂದು ಯೋಜನೆ-ಯನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ ಎಂದು ಹೇಳುತ್ತೇನೆ. ತಾವು ಈಗ ಮಾಡುತ್ತಾ ಇರತಕ್ಕ ರೀತಿಯಲ್ಲಿ ಒಂದು ಬಾವಿಗೆ ೩ ಸಾವಿರ ರೂಪಾಯಿ ಕೊಡುತ್ತೀರಿ, ಅವನು ಒಂದು ಒಂದೂವರೆ ಸಾವಿರ ರೂಪಾಯಿ ಖರ್ಚು ಮಾಡಿ ಬಾವಿ ತೆಗಯಬೇಕು. ಮಧ್ಯೆ ಕಲ್ಲು ಬಂಡೆ ಸಿಕ್ಕಿತು ಅಥವಾ ಇನ್ನೇನಾದರೂ ತೊಂದರೆ ಆಯಿತು ಅಂತ ಹೇಳಿ ಎಷ್ಟೋ ವೇಳೆ ಬಾವಿ ತೆಗೆಯುವುದಕ್ಕೆ ಆಗದೆ, ಅವರ ಮೇಲೆ ಸಾಲ ಬೇರೆ ಹೊರಿಸಿದಂತಾಗುತ್ತಾ ಇದೆ. ಆದ್ದರಿಂದ ಮೂರು ಕಾಸಿನ ಉಪಯೋಗ ಅವನಿಗೂ ಇಲ್ಲ, ಸರ್ಕಾರ ಕ್ಕೂ ಇಲ್ಲ. ಆದ್ದರಿಂದ ಈ ಬಗ್ಗೆ ಒಂದು ತನಿಖೆ ಮಾಡುವುದಕ್ಕೆ ಒಂದು ಸಬ್‌ಕಮಿಟಿ ಮಾಡಿ ಎಲ್ಲೆಲ್ಲಿ ಅಂಡರ್ ಗ್ರೌಂಡ್ ವಾಟರ್ ದೊರೆಯುತ್ತದೆ ಅಂತಹ ಕಮ್ಯೂನಿಟಿ ವೆಲ್ಸ್ ತೋಡಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಾ ಇದ್ದೇನೆ. ಕೊನೆಯ ದಾಗಿ ನಮ್ಮ ಏರಿಯಾ ೪-೫ ವರ್ಷದಿಂದ ಕ್ಷಾಮ ಪೀಡಿತ ಪ್ರದೇಶವಾದುದರಿಂದ ಅಲ್ಲಿ ಲ್ಯಾಂಡ್ ರೆವಿನ್ಯೂ ಮತ್ತು ವಾಟರ್ ರೇಟ್‌ನ್ನು ಕೈಬಿಡುವುದಕ್ಕೆ ಆಜ್ಞೆಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿ-ಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ಎಚ್. ವಿ. ಕೌಜಲಗಿ ;—ಮಾನ್ಯ ಸಭಾಪತಿಗಳೇ, ಕಂದಾಯಕ್ಕೆ ಸಂಬಂಧಿಸಿದ ಬೇಡಿಕೆ ಬಗ್ಗೆ ಅನೇಕ ಸದಸ್ಯರು ತಮ್ಮ ಸೂಚನೆಗಳನ್ನು ಕೊಟ್ಟಿದ್ದಾರೆ, ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸು-ತ್ತೇನೆ. ಅವರು ಎತ್ತಿರುವಂಥ ಅನೇಕ ವಿಚಾರಗಳ ಬಗ್ಗೆ ಉತ್ತರ ಕೊಡುವುದಕ್ಕೆ ಪೂರ್ವದಲ್ಲಿ ನಂಜೇಗೌಡರು ವೈಯಕ್ತಿಕವಾದ ಅಪಾದನೆ ಮಾಡಿದ್ದಾರೆ, ಅದರ ಬಗ್ಗೆ ಮೊದಲು ಹೇಳಬೇಕೆಂಬ ಇಚ್ಛೆ ಇದೆ. ಗುಡ್ಡೇನ ಹಳ್ಳಿ ಜಮೀನನ್ನು ಗುರಪ್ಪ ಎನ್ನುವವರಿಗೆ ಸ್ವಜನ ಪಕ್ಷಪಾತದಿಂದ ಉಪಕಾರ ಮಾಡಬೇಕೆಂದು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಒಂದು ಲಕ್ಷಕ್ಕಿಂತ ಹೆಚ್ಚು ಕಿಮ್ಮತ್ತು ಇರುವ ಭೂಮಿಯನ್ನು ಕೊಡಬಾರದಾಗಿತ್ತು, ಗೌರವಕ್ಕಾಗಿ ಕೊಟ್ಟರು ಎಂದು ತಮ್ಮದೇ ಧಾಟಿಯಲ್ಲಿ ಹೇಳಿದರು. ಈ ಜಮೀನನ್ನು ಯಾರೋ ಒಬ್ಬ ವ್ಯಕ್ತಿಗೆ ಕೊಟ್ಟಿಲ್ಲ, ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಲಿಮಿಟೆಡ್ ಎಂಬ ಈ ಕಂಪೆನಿಗೆ ಕೊಡಲಾಗಿದೆ. ಆದರಲ್ಲಿ ಯಾರಿದ್ದಾರೋ, ಯಾವ ಜಾತಿಯವರಿದ್ದಾರೋ ನನಗೆ ಗೊತ್ತಿಲ್ಲ. ಕಾಫಿ ಕ್ಯೂರಿಂಗ್ ವರ್ಕ್ಸ್, ಫರ್ಟಿಲೈಜರ್ಸ್ ಮತ್ತು ಮೆನ್ಯೂರ್ ಮಿಕ್ಸಿಂಗ್ ಫ್ಯಾಕ್ಟರಿ ಮತ್ತು ಪೊಟ್ಯಾಟೊ

ಚಿಪ್ಸ್ ಪ್ರೋಸೆಸಿಂಗ್ ಯೂನಿಟ್ ಇವುಗಳ ಸಂಬಂಧದಲ್ಲಿ ಕಂಪೆನಿ ಮಾಡಿದಾರೆ. ಅವರಿಗೆ ೭೦ ಎಕರೆ ಬೇಕಾಗಿತ್ತು, ೬೦ ಎಕರೆ ಇದ್ದುದರಲ್ಲಿ ೪೭ ಎಕರೆ ಕೊಡಲಾಗಿದೆ. ತಹೀಲ್ದಾರರು, ಅಸಿಸ್ಟೆಂಟ್ ಕಮಿಷನರ್, ಡಿ ಸಿ ಮತ್ತು ಡಿವಿಜನಲ್ ಕಮಿಷನರು ರೆಕಮೆಂಡ್ ಮಾಡಿದ್ದಾರೆ ಮತ್ತು ಸ್ಥಾನೀಕ ಚೌಕಸಿ ಮಾಡಿದ್ದಾರೆ. ನಾನು ಕಣ್ಣುಮುಚ್ಚಿ ಕೊಟ್ಟಿಲ್ಲ. ಹಾಗಿರುವಾಗ ಜಾತಿ ಪ್ರಶ್ನೆ ಇಲ್ಲಿ ತರಬಾರದು. ಅಲ್ಲಿ ಎಕರೆಗೆ ೨೦೯-೩೦ ರೂಪಾಯಿ ಬೆಲೆ ಇದೆ, ನಾವು ಒಂದು ಸಾವಿರ ರೂಪಾಯಿನಂತೆ ಪಡೆದು ಕನ್‌ವರ್ಷನ್ ಫೈನ್ ವಗೈರೆ ಕೊಡಬೇಕೆಂದು ತಿಳಿಸಿ ಕೊಡಲಾಗಿದೆ, ಮತ್ತು ಅದು ಹಾಸನಕ್ಕೆ ಎರಡು ಮೈಲಿ ದೂರದಲ್ಲಿದೆ. ಹೆಚ್ಚು ಕಲ್ಲು ಭೂಮಿ, ವ್ಯವಸಾಯಕ್ಕೆ ಕೊಡಬಾರದು ಎಂದು ರೂಲ್ ಇದೆ. ೬೭ರಲ್ಲಿ ಹೇಳಿದ್ದಾರೆ, ಇದು ಸ್ಪಷ್ಟವಾಗಿದೆ. ಅಲ್ಲದೆ ನಾನು ಬಂದನಂತರ ಈ ಕಂಪೆನಿಯವರಿಗೆ ಕೊಡಬಾರದು ಎಂದು ಯಾರೂ ಹೇಳಿಲ್ಲ, ಕೊಟ್ಟರೆ ಆ ಊರಿನವರಿಗೆ ಉದ್ಯೋಗ ದೊರೆಯುವುದು ಅಲ್ಲಿ ಫ್ಯಾಕ್ಟರಿ ಮಾಡಬಹುದು ಎಂದು ಜನರು ಒತ್ತಾಯ ಮಾಡಿದ್ದರಿಂದ ಅವಕಾಶ ಕೊಡಲಾಗಿದೆ. ಇದರಲ್ಲಿ ಜಾತಿ ವಿಚಾರವಾಗಲಿ, ಪಕ್ಷಪಾತವಾಗಲಿ ಏನೂ ಇಲ್ಲ. ನಂಜೇಗೌಡರು ಅಪಾದಿಸಿರುವುದು ವಿಷಾದವನ್ನುಂಟುಮಾಡಿದೆ. ವೈಯಕ್ತಿಕವಾಗಿ ನನಗೆ ಅದರಲ್ಲಿ ಏನೂ ಆಸಕ್ತಿಯಿಲ್ಲ, ಬೇಕಾದರೆ ಸಂಬಂಧಪಟ್ಟ ಫೈಲನ್ನು ಮುಂದಿಡುತ್ತೇನೆ, ನೋಡಬಹುದು.

ಶ್ರೀ ಎಚ್. ಎನ್. ನಂಜೇಗೌಡ ;—ಅಲ್ಲಿಗೆ ಮಂತ್ರಿಗಳಿಗೆ ವಿವೇಚನೆ ಇರಲಿಲ್ಲವೆಂದು ಭಾವಿಸಬಹುದೇ ?

ಶ್ರೀ ಎಚ್. ವಿ. ಕೌಜಲಗಿ :—ಶ್ರೀ ರಾಚಯ್ಯನವರ ಸ್ಟೇಟ್‌ಮೆಂಟ್ ದಪ್ಪಕ್ಷರದಲ್ಲಿ, ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಚ್ ಸಿದ್ದವೀರಪ್ಪ :—ಪಾಯಿಂಟ್ ಆಫ್ ಆರ್ಡರ್. ಅನುಮಾನ ಬಂದಾಗ ಫೈಲನ್ನು ಕೇಳಿದರೆ ನೋಡಲು ಕೊಡುತ್ತೀರಾ ? Sir, supposing we want a file for some clarifications etc., will the Honourable Minister be pleased to give that file ?

SRI H. V. KOUJALGI ;—Only in this particular case in order to show my *bonafide*, I stated, I am prepared to give this file and the Hon'ble Member can look into it. ದೇವರಾಜಅರಸಿನವರು ಎರಡು ವಿಚಾರ ಹೇಳಿದ್ದಾರೆ. ಅದು ನಾನು ಬರುವುದಕ್ಕೆ ಮುಂಚೆ ಗ್ರಾಂಟ್ ಆಗಿರುವುದಕ್ಕೆ ಸಂಬಂಧಪಟ್ಟಿದೆ. ರಾಜಯ್ಯಶೆಟ್ಟರು ಹೇಳಿದ ವಿಚಾರವನ್ನು ಎನ್‌ಕ್ವೈರಿ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ. ಪಿ. ಗಂಗಾಧರ್;—ಹಿಂದಿನ ಚುನಾವಣೆಯಾದಮೇಲೆ ಬೇರೆ ಸರ್ಕಾರ ಬರುವುದಕ್ಕೆ ಮುಂಚೆ ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಕೊಟ್ಟಿರುವ ಲ್ಯಾಂಡ್ ಗ್ರಾಂಟ್ಸ್ ವಿಚಾರದಲ್ಲಿ ಸ್ಟೇ ಆರ್ಡರನ್ನು ಕೊಡಲಾಗಿದೆಯೆಂದು ನಿಜಲಿಂಗಪ್ಪನವರು ಹೇಳಿದ್ದ ವಿಚಾರವೇನಾಯ್ತು ?

ಶ್ರೀ ಎಚ್. ವಿ. ಕೌಜಲಗಿ ;—ನಿಜಲಿಂಗಪ್ಪನವರು ಕೆಲವು ಕೇಸುಗಳಲ್ಲಿ ಸ್ಟೇ ಆರ್ಡರ್ ಕೊಟ್ಟು ಎಗ್ಜಾಮಿನ್ ಆರ್ಡ್ ಟೆಡ್ಡೈಜ್ ಎಂದು ಬರೆದಿದ್ದರು. ಆಷ್ಟರಲ್ಲೇ ವೀರೇಂದ್ರ ಪಾಟೀಲರು ಬಂದರು. ನಾನು ಲಾ ಪೋರ್ಟ್ ಫೋಲಿಯೋ ತೆಗೆದುಕೊಂಡಿದ್ದೆ. ಬಹಳ ಗ್ರಾಂಟುಗಳು ಇಲ್ಲೀಗಲ್ ಆಗಿದ್ದುವು, ಸೆಟ್ ಅಸೈಡ್ ಮಾಡಿ ಸರ್ಕಾರದ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅವುಗಳನ್ನು ಡಿಸ್ಪೋಸ್ ಮಾಡಬೇಕೆಂದು ಡಿ ಸಿ ಗೆ ಕಳಿಹಿಸಲಾಯ್ತು. ಅದರಲ್ಲಿ ಶೇಕಡ ೯೦; ಇಲ್ಲೀಗಲ್ ಗ್ರಾಂಟ್ಸ್ ಆಗಿದ್ದುವು.

ಶ್ರೀ ಎಂ. ಎಸ್. ಕೃಷ್ಣನ್ :—ಬೇರೆ ವಿಷಯಗಳಲ್ಲಿ ನಿಜಲಿಂಗಪ್ಪನವರು ಒಪ್ಪಿಕೊಂಡು ಕೊಡಬಹುದೆಂದು ಬರೆದಿದ್ದರು. ನೀವು ತಿದ್ದುಪಾಟು ಮಾಡಿ ಬೇರೆಯವರಿಗೆ ಕೊಡಬೇಕೆಂದು ಯೋಜನೆ ಮಾಡುತ್ತಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ :—ಇಲ್ಲ, ಇಲ್ಲೀಗಲ್ ಎಂದಮೇಲೆ ಆಯಿತು.

ಶ್ರೀ ಎಚ್. ಸಿದ್ದವೀರಪ್ಪ :—ತುಮಕೂರಿನಲ್ಲಿ ಮೂರು ದಿವಸಗಳಲ್ಲಿ ರಿಕಾರ್ಡು ಹುಟ್ಟಿರುವುದು ಬೆಳೆದಿರುವುದು, ಗ್ರಾಂಟು ಕೊಟ್ಟಿರುವುದನ್ನುಂತಾದನ್ನು ನಂಜೇಗೌಡರು ಹೇಳಿದರು, ಪೆಸರು ಹೇಳುವುದು ಬೇಡ. ನಿಮ್ಮ ಪಕ್ಷಕ್ಕೆ ಸೇರಲು ಪ್ಲೆಡ್ಜ್ ಮಾಡಿದಮೇಲೆ ಅವರಿಗೆ ಕೊಟ್ಟಿರುವುದು ನಿಜವೇ ?

SRI H. V. KOUJALGI :—In fact I do not know anything about it. I am prepared to get it examined.

ಇವತ್ತಿನ ಚರ್ಚೆಯಲ್ಲಿ ಮೂರುನಾಲ್ಕು ಮುಖ್ಯವಾದ ವಿಚಾರಗಳ ಬಗ್ಗೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ಎರಡು ವರ್ಷಗಳ ಕೆಳಗೆ ಲ್ಯಾಂಡ್ ರೆವೆನ್ಯೂ ಯಾವ ರೂಪದಲ್ಲಿದೆಯೋ ಅದನ್ನು (ಲ್ಯಾಂಡ್ ರೆವೆನ್ಯೂ ಇನ್ ಇಟ್ಸ್ ಪ್ರೆಸೆಂಟ್ ಫಾರಂ) ರದ್ದುಮಾಡುತ್ತೇವೆ ಎಂದು ಹೇಳಿತ್ತು, ಮಾಡಲಿಲ್ಲ ಎಂದು ಗೋಪಾಲ ಗೌಡರು ಪುತ್ತಿತರರು ಹೇಳಿದ್ದಾರೆ. ಅದರ ಬಗ್ಗೆ ಹೇಳುವುದು ಏನೆಂದರೆ ಆ ಮಾತು ಹೇಳಿದ್ದು ನಿಜ, ಸರ್ಕಾರ ತೆಗೆದುಹಾಕುವುದು ಸರಿಯಲ್ಲವೆಂದು ಭಾವಿಸಿತು, ಜನರು ತೆಗೆಯುವುದನ್ನು ವಿರೋಧಿಸಿದರು, ಆದುದರಿಂದ ಇರುವಂತೆಯೇ ಮುಂದುವರಿಸಿದೆ ಎಂದು ಎರಡುಮೂರು ಸಲ ಹೇಳಿದ್ದೇನೆ, ಈಗಲೂ ತೆಗೆಯುವ ವಿಚಾರವಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ ;—ರೈತರು ತೆಗೆಯಲು ವಿರೋಧಮಾಡಿದರೇ ?

SRI H. V. KOUJALGI ;—Yes Sir. I have received a number of representations.

ಶ್ರೀ ಎಸ್. ಶಿವಪ್ಪ ;—ರೈತರು ವಿರೋಧಮಾಡಿದ್ದಾರೆಂದು ಹೇಳುವಾಗ ಯಾರು ಎಲ್ಲಿರುವವರು ವಿರೋಧ ಮಾಡಿದ್ದಾರೆ ಎಂಬುದನ್ನು ಹೇಳುವಿರಾ ?

5-30 P.M.

ಶ್ರೀ ಎಚ್. ವಿ. ಕೌಜಲಗಿ:— ಈಗ ಇದ್ದ ಪದ್ಧತಿಯನ್ನು ತೆಗೆದು ಹಾಕುತ್ತೇವೆ ಎಂದರೆ ಜನ ಅದರ ಅರ್ಥವನ್ನು ಹೀಗೆ ಮಾಡುತ್ತಾರೆ:— ಇದರ ಬದಲು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುತ್ತಾರೆ, ಇನ್‌ಕಂಟ್ಯಾಕ್ಸ್ ಹಾಕುವುದರಿಂದ ತೊಂದರೆಯಾಗುತ್ತದೆಂದು ಅದನ್ನು ಹಾಕುವುದು ಬೇಡ ಎಂದು ಹೇಳಿ ಈಗ ಇದ್ದ ಪದ್ಧತಿಯನ್ನೇ ಮುಂದುವರಿಸಿ ಎಂದು ಎಷ್ಟೋ ತಾಲ್ಲೂಕು ಬೋರ್ಡುಗಳು ರೆಸಲ್ಯೂಷನ್ ಮಾಡಿವೆ.

ಶ್ರೀ ಎಸ್. ಶಿವಪ್ಪ:—ಕಂದಾಯ ರದ್ದು ಮಾಡುವುದಕ್ಕೂ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದಕ್ಕೂ ಏನು ಸಂಬಂಧ ? ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇದೆ, ಅದನು ಹೊಸದಾಗಿ ಹಾಕಬೇಕಾಗಿಲ್ಲ.

ಎಚ್.ವಿ. ಕೌಜಲಗಿ: ಈಗ ಇದ್ದ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬೇರೆ. ಕೆಲವು ಕಮಾಡಿಟಿಗಳಿಗೆ, ಕಮರ್ಷಿಯಲ್ ಕ್ರಾಪ್ಸ್‌ಗೆ ಇದೆ. ರೆವೆನ್ಯೂ ಭರ್ತಿ ಮಾಡಿಕೊಳ್ಳುವುದಕ್ಕೆ ಹೆಚ್ಚಿನ ತೆರಿಗೆ ಹಾಕಬೇಕಾಗುತ್ತದೆ. ಎಲ್ಲ ಧಾನ್ಯಗಳಿಗೂ ಹಾಕಬೇಕಾದ ಸಂದರ್ಭ ಬರುತ್ತದೆ. ಅನೇಕ ತಾಲ್ಲೂಕು ಬೋರ್ಡುಗಳು ರೆಸಲ್ಯೂಷನ್ ಪಾಸು ಮಾಡಿವೆ. ವಿಷಯ ಇದೇ ಸಭೆಯಲ್ಲಿ ಚರ್ಚೆಗೆ ಬಂದಾಗ ಅನೇಕ ಮಾನ್ಯ ಸದಸ್ಯರು ಈಗ ಇದ್ದ ಪದ್ಧತಿಯನ್ನೇ ಮುಂದುವರಿಸಬೇಕು ಎಂದು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ;—ಅವರು ಶ್ರೀಮಂತ ರೈತರು. ಅನ್ ಎಕನಾಮಿಕ್ ಹೋಲ್ಡಿಂಗ್ಸ್ ಇರುವಂಥ ರೈತರ ವಿಚಾರ ಹೇಳಿ.

ಶ್ರೀ ಎಚ್.ವಿ.ಕೌಜಲಗಿ:—ಅವರು ಶ್ರೀಮಂತ ರೈತರಿರಬಹುದು, ಅಥವಾ ಬಡವರಿರಬಹುದು. ಇನ್ನೂ ಒಂದುಮಾತು ಹೇಳುತ್ತಾರೆ, ಸಣ್ಣ ಹಿಡುವಳಿದಾರರಿಗೆ ಕಡಿಮೆ ಮಾಡಬಹುದು ಎಂದು. ಆದರೆ

ಆದರಿಂದ ಏನಾಗುತ್ತದೆ ಎಂದರೆ ದೊಡ್ಡ ದೊಡ್ಡ ಜಮೀನುಗಳಿದ್ದುದು ಅನ್ ಎಕನಾಮಿಕ್ ಹೋಲ್ಡಿಂಗ್ ಆದೀತು, ಪಾರ್ಟಿಷನ್ ಮಾಡಿಕೊಂಡು ಭೂಸುಧಾರಣೆ ಕಾಯಿದೆಯಿಂದ ಫಾಯಿದೆ ತೆಗೆದುಕೊಳ್ಳತಕ್ಕ ಸಂದರ್ಭವಿರುತ್ತದೆ.

ಶ್ರೀ ಡಿ. ದೇವರಾಜ ಅರಸ್: ಐದು ಎಕರೆಗಿಂತ ಕಡಮೆ ಇರುವವರಿಗೆ ಭೂಕಂದಾಯ ರದ್ದು ಮಾಡಿ ಎಂದು ಹೇಳುತ್ತಿದ್ದೇವೆ. ೫೦ ಎಕರೆ, ೧೦೦ಎಕರೆ ಇರುವವರು ಐದು ಎಕರೆಗೆ ಭಾಗ ಮಾಡಿ ಇಳಿಸಿಕೊಳ್ಳ ಬಹುದು ಎನ್ನುವ ವಿತಂಡ ವಾದ ಬೇಡ.

ಶ್ರೀ ಎಚ್. ವಿ. ಕೌಜಲಗಿ: ಆಗಬಹುದಾದುದನ್ನು ಹೇಳುತ್ತಿದ್ದೇನೆ. ಯಾವ ರೀತಿಯ ವಾದವೂ ಇದರಲ್ಲಿ ಬರುವುದಿಲ್ಲ

ಈಗಿರತಕ್ಕ ಪರಿಸ್ಥಿತಿಯಲ್ಲಿ ಭೂಕಂದಾಯವನ್ನು ತೆಗೆದು ಹಾಕಬಾರದು ಎನ್ನುವ ವಿಚಾರಕ್ಕೆ ಬಂದಿದ್ದೇವೆ ಭೂಕಂದಾಯವನ್ನೆಲ್ಲ ತಾಲ್ಲೂಕು ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿಗಳಿಗೆ ಕೊಡುತ್ತೇವೆ. ಇದರಿಂದ ಹಳ್ಳಿಗಳಲ್ಲಿ ಅಭಿವೃದ್ಧಿ ಕೆಲಸ ಹೆಚ್ಚಾಗುವುದಕ್ಕೆ ಅನುಕೂಲವಾಗುತ್ತದೆ. ಜನರು ಹೆಚ್ಚಿನ ದೃಷ್ಟಿಯಿಂದ ಭೂಕಂದಾಯ ಈಗ ಇರುವಂಥ ರೀತಿಯಲ್ಲಿ ಇರಬೇಕೆಂದು ಸ್ವಾಗತ ಮಾಡಿದ್ದಾರೆ. ಕಂದಾಯ ಸೂಟು ಹಾಕಬೇಕು ಎಂದರೆ ಕಂದಾಯಕೊಡುವುದ ಎಂದರೆ, ಅದು ಅಭಿಮಾನದ ಕೆಲಸ ಅಥವಾ ತಾನು ಒಬ್ಬ ಪ್ರತಿಷ್ಠಿತ ಮನುಷ್ಯ ಎಂದು ತಿಳಿದುಕೊಳ್ಳುತ್ತಾನೆ. ಅನೇಕರು ಬಂದು ಒಂದು ಎಕರೆ ಭೂಮಿ ಕೊಡಿ, ನಾನು ಕಂದಾಯ ಕೊಡುತ್ತೇನೆ, ಎಂದುಹೇಳುವವರಿದ್ದಾರೆ.ಕಂದಾಯ ಕೊಡುವವನು ಒಬ್ಬ ಶ್ರೇಷ್ಠ ಮನುಷ್ಯ, ಒಬ್ಬ ಪ್ರತಿಷ್ಠಿತ ಮನುಷ್ಯ ಎನ್ನುವ ಭಾವನೆ ಇದೆ.

ಶ್ರೀ ಡಿ. ದೇವರಾಜ ಅರಸ್: ಮಂತ್ರಿಗಳ ಮನೆಯಲ್ಲಿ ಸೇವಕನಾಗಿ ಇರುವುದು ಹೆಮ್ಮೆಯ ವಿಷಯ ಎಂದು ಹೇಳಿದ ಹಾಗಾಯಿತು.

ಶ್ರೀ ಎಚ್. ವಿ. ಕೌಜಲಗಿ: ಕಂದಾಯ ಕೊಡುವವನು ಒಬ್ಬ ಪ್ರತಿಷ್ಠಿತ ಮನುಷ್ಯ ಎನ್ನುವ ಭಾವನೆ ನಮ್ಮಲ್ಲಿ ಬಂದಿದೆ. ಬಹಳ ಕಾಲದಿಂದ ಕಂದಾಯ ಕೊಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದರಿಂದ ಜನರಿಗೆ ತೊಂದರೆಯಾಗಿಲ್ಲ.

ಭೂಸುಧಾರಣೆಯ ದೆಸೆಯಿಂದ ಅನೇಕರು ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಈಗ ಕೆಲಸ ತ್ವರಿತಗತಿಯಿಂದ ನಡೆಯುತ್ತಿಲ್ಲ, ಭೂಮಿ ಇಲ್ಲದವರಿಗೆ ಭೂಮಿ ಸಿಕ್ಕುತ್ತದೆಯೇ ಎಂದು ಅನೇಕ ರೀತಿಯಿಂದ ಹೇಳಿದ್ದಾರೆ. ಮಾನ್ಯ ದೇವರಾಜ ಅರಸು ಅವರು ಹೇಳುತ್ತಾರೆ, ಈಗ ಇದ್ದ ಕಾಯಿದೆಯನ್ನು ಅಮೆಂಡ್ ಮಾಡೀದ್ದಿರಿ, ಟ್ರಿಬ್ಯುನಲ್‌ಗಳನ್ನು ತೆಗೆದು ಹಾಕಿ ಎಲ್ಲ ಮುನಸೀಫರಿಗೆ ಅಧಿಕಾರ ಕೊಟ್ಟಿದ್ದೀರಿ, ಇದರಿಂದ ಸಹಿತ ತೀವ್ರ ಕೆಲಸವಾಗುವುದಿಲ್ಲ ಎನ್ನುವಂಥ ಶಂಕೆಯನ್ನು ತೋರಿಸಿದ್ದಾರೆ. ಆದರೆ ಒಂದು ಮಾತನ್ನು ಹೇಳಬಹುದು. ಮೊದಲಿನ ಟ್ರಿಬ್ಯುನಲ್‌ಗಳು ಇದ್ದುದಕ್ಕಿಂತ ಈಗ ಎಲ್ಲ ಮುನಸೀಫರಿಗೆ ಅಧಿಕಾರ ಕೊಟ್ಟಿರುವುದರ ದೆಸೆಯಿಂದ ತೀವ್ರಗತಿಯಿಂದ ಕೆಲಸಗಳಾಗುತ್ತವೆ ಎನ್ನುವ ಆಸೆ ನನಗೆ ವೈಯಕ್ತಿಕವಾಗಿ ಇದೆ, ಹಾಗೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಜನರಿಗೂ ಇದರಿಂದ ಹೆಚ್ಚು ಅನುಕೂಲವಾಗುತ್ತದೆ ಮತ್ತು ಎಲ್ಲ ಕೋರ್ಟ್‌ಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳು ಹೆಚ್ಚಾಗಿಲ್ಲದೆ ಇರುವುದರಿಂದ ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಂಡುದರಿಂದ ಈಗಿನ ಡಿಸ್‌ಪೋಸಲ್ ಪ್ರಕಾರ ನೋಡಿದರೆ ಹೆಚ್ಚು ಹೆಚ್ಚು ತೀವ್ರವಾಗಿ ಕೇಸುಗಳ ಇತ್ಯರ್ಥವಾಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಕಾಯಿದೆಯಲ್ಲಿ ಅನೇಕ ಬದಲಾವಣೆಯಾಗಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ಸದಸ್ಯರು ಹೇಳಿದರು ಈಗ ಇದ್ದ ಸೀಲಿಂಗ್‌ಪರಿಮಿತಿ ಹೆಚ್ಚಾಗುತ್ತದೆ ಜನಸಂಖ್ಯೆ ಬೆಳೆಯುತ್ತ ನಡೆದಿದೆ ಮತ್ತು ಬಡಜನರಿಗೆ ಭೂಮಿ ಕೊಡಬೇಕಾದರೆ ಸೀಲಿಂಗ್ ಕಡಮೆ ಮಾಡಬೇಕು ಎನ್ನುವಂಥ ವಾದವೂ ಇದೆ. ಮೈಸೂರು ಸರ್ಕಾರ ೫೦ ಎಕರೆ ಸೀಲಿಂಗ್ ಇಟ್ಟುಕೊಂಡಿದೆ, ಇದು ಬಹಳ ಹೆಚ್ಚು ಎಂದು ಹೇಳುವುದಕ್ಕಾಗುವುದಿಲ್ಲ.ಕೇವಲ ಒಕ್ಕಲುತನದ ಉತ್ಪನ್ನದ ಮೇಲೆ ಉಪಜೀವನ ಮಾಡುತ್ತಾರೆ. ಸೀಲಿಂಗ್ ಕಡಮೆ ಮಾಡಿ ಉತ್ಪನ್ನ ಕಡಮೆ ಮಾಡಿದರೆ ಅವರು ಜೀವನ ಮಾಡುವುದಕ್ಕಾಗುವುದಿಲ್ಲ. ಅವರಿಗೆಲ್ಲ ಬೇರೆ ಉತ್ಪನ್ನವನ್ನು ಒದಗಿಸಿ ಕೊಡುವ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ, ಸೀಲಿಂಗ್ ಕಡಮೆ ಮಾಡಬಾರದು ಎಂದು ಕೆಲವರ ಹೇಳಿದರು. ಮಾನ್ಯ ಗೋಪಾಲ ಗೌಡರು ತಮ್ಮದೇ ಆದಂಥ ಪಕ್ಷದ ನೀತಿಯನ್ನು ಹೇಳಿದರು. ಸ್ಟಾಲಿನ್

(ಶ್ರೀ ಹೆಚ್. ವಿ. ಕೌಜಲಗಿ)

ನೀತಿಯನ್ನು ಹೇಳಿದರು. ಮನೆ ಮನೆಗೆ ಹೋಗಿ ಚೌಕಸಿ ಮಾಡಬೇಕು, ಇಷ್ಟು ಹೆಚ್ಚು ಭೂಮಿ ಇದೆ ಅದನ್ನು ಕೊಡಬೇಕು ಎಂದು ಕೇಳಬೇಕು ಎಂದು ಹೇಳಿದರು ಅವರ ನೀತಿ ಹಾಗೆ ಇರಬಹುದು. ಅದನ್ನು ನಾವು ಅನುಸರಿಸುವುದಕ್ಕೆ ಬರುವುದಿಲ್ಲ. ಈಗಿನ ಪದ್ಧತಿ ಪ್ರಕಾರ, ಇನ್ನೂ ಕೆಲವು ಕಡೆಗೆ ನಾವು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಕೆಲವು ರಾಜ್ಯಗಳಲ್ಲಿ ಕಡಮೆ ಸೀಲಿಂಗ್ ಇದೆ. ಕೆಲವು ಕಡೆ ಇನ್ನೂ ಹೆಚ್ಚು ಇದೆ. ಮಧ್ಯಪ್ರದೇಶದಲ್ಲಿ ಇನ್ನೂ ಹೆಚ್ಚು ಇದೆ. ಅಲ್ಲಿ ಭೂಮಿ ಬಹಳವಿದೆ. ರಾಜಾಸ್ಥಾನದಲ್ಲಿ ಮತ್ತು ಕೆಲವು ಕಡೆ ಹೆಚ್ಚು ಇದೆ. ಮದ್ರಾಸ್, ಕೇರಳ ರಾಜ್ಯಗಳಲ್ಲಿ ನಮಗಿಂತಲೂ ಕಡಮೆ ಇದೆ. ಇದು ಒಂದುಪಕ್ಷದ ನೀತಿ. ಈಗ ಗೊತ್ತು ಮಾಡಿರುವಂಥ ಸೀಲಿಂಗ್ ಪರಿಮಿತಿಯನ್ನು ಕಡಮೆ ಮಾಡಬೇಕು ಎನ್ನುವಂಥ ವಿಚಾರ ಸದ್ಯಕ್ಕೆ ಇಲ್ಲ ಎನ್ನುವ ಮತನ್ನು ಹೇಳುತ್ತೇನೆ. ಇದು ಒಂದು ಸೋಷಿಯಲ್ ರಿಫಾರಂ ಇದ್ದ ಹಾಗೆ. ಕಾಲಕಾಲಕ್ಕೆ ಅಭಿಪ್ರಾಯ ಬದಲಾವಣೆಯಾಗ ಬಹುದು, ನಮ್ಮದೂ ಆಗಬಹುದು, ನಿಮ್ಮದೂ ಆಗಬಹುದು.

ಇದೇ ಪ್ರಸಂಗದೊಳಗೆ ಸ್ಮಾಲ್ ಹೋಲ್ಡರ್ಸ್ ದೆಸೆಯಿಂದ ಅನೇಕ ಸದಸ್ಯರು ಮಾನ್ಯ ಸಭೆಯಲ್ಲಿ ಹೇಳುತ್ತಾರೆ ಮತ್ತು ಹೊರಗೂ ಹೇಳುತ್ತಾರೆ ಸ್ಮಾಲ್ ಹೋಲ್ಡರ್ಸ್ ಎಂದರೆ ಯಾರು, ಅದರ ಡೆಫಿನಿಷನ್ ಏನಿದೆ, ಅದು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಇದೆ. ಕೆಲವು ಕಡೆ ಐದು ಎಕರೆ ಡ್ರೈ ಲ್ಯಾಂಡ್ ಇದ್ದರೆ ಅವರಿಗೆ ಯಾವುದು ನಿರ್ಬಂಧಗಳಿಲ್ಲದೆ ಸಾಗುವಳಿ ಮಾಡುವುದಕ್ಕೆ ಕೊಡಬೇಕು, ಇಂತಿಷ್ಟು ಉತ್ಪನ್ನವಿದ್ದರೆ ಸಾಗುವಳಿ ಮಾಡುವುದಕ್ಕೆ ಕೊಡಬೇಕು ಎನ್ನುವ ಅಭಿಪ್ರಾಯ ಕೆಲವು ಕಡೆ ಇದೆ. ನಮ್ಮಲ್ಲಿ ಮಾತ್ರ ೧೬೦೦ ರೂಪಾಯಿ ಉತ್ಪನ್ನ ಇರಬೇಕು, ಬೇರೆ ಯಾವ ಉತ್ಪನ್ನವೂ ಇರಬಾರದು, ಅಂಥವರಿಗೆ ಕೊಡಬೇಕು ಎಂದು ಮಾಡಿದ್ದೇವೆ. ಇದರೊಳಗೆ ಸಹಿತ ಭಿನ್ನಾಭಿಪ್ರಾಯವಿದೆ. ನಾನು ಮಾನ್ಯ ಗೋಪಾಲ ಗೌಡರ ಅಭಿಪ್ರಾಯವನ್ನೂ ಕೇಳಿದ್ದೇನೆ, ಮಾನ್ಯ ದೇವರಾಜ ಅರಸು ಅವರ ಅಭಿಪ್ರಾಯವನ್ನೂ ಕೇಳಿದ್ದೇನೆ. ಒಂದಕ್ಕೊಂದು ವಿರೋಧವಾಗುತ್ತದೆ. ಇದು ಒಂದು ಪಕ್ಷದ ನೀತಿಯ ಮೇಲೆ ಅವಲಂಬಿಸಿದೆ. ನಾವು ಏನು ಸ್ಮಾಲ್ ಹೋಲ್ಡರ್ ಎನ್ನುವ ಡೆಫಿನಿಷನ್ ಮಾಡಿದ್ದೇವ ಅದರಂತೆ ೧೯೭೫ನೇ ಇಸವಿಯಿಂದ ಇಲ್ಲಿಯವರೆಗೂ ಆ ಕಾಯದೆ ಅಮಲನಲ್ಲಿ ಬಂದಿದೆ.ಎಷ್ಟೋ ಆರ್ಜಿಗಳು ಬಂದಿದ್ದು ಅನೇಕ ಡಿಸ್ಪೋಸಲ್ ಆಗಿವೆ, ಕೆಲವು ಡಿಸ್ಪೋಸಲ್ ಆಗದೆ ಉಳಿದಿವೆ. ಈ ಹೊತ್ತಿನ ದಿವಸ ಸ್ಮಾಲ್ ಹೋಲ್ಡರ್ ಡೆಫಿನಿಷನ್ ಬದಲಿ ಮಾಡಿದರೆ ಅನೇಕ ಕಾಯಿದೆ ತೊಂದರೆಗಳು ಆಗಬಹುದು ಎಂದು ನನಗನ್ನಿಸುತ್ತದೆ. ಈಗ ಇರುವಂಥ ಡೆಫಿನಿಷನ್ ಬದಲಾವಣೆ ಮಾಡುವುದರಿಂದ ಎಷ್ಟೋ ಜನರಿಗೆ ಲುಕ್ಸಾನಾಗುತ್ತದೆ. ಕಾಯದೆ ದುರಸ್ತು ಮಾಡುವುದಕ್ಕೆ ಹೋದರೆ ಕೆಲವು ಆರ್ಜಿಗಳು ಡಿಸ್ಪೋಸ್ ಆಗಿರುವುದು ರಿಂದ ಅವರಿಗೆ ಪುನ: ಹೊಸ ರೈಟ್ ಕೊಡಬೇಕಾಗುತ್ತದೆ. ಪೆಂಡಿಂಗ್ ಇರುವವರಿಗೆ, ತಡವಾದುದರಿಂದ ಹೊಸ ರೈಟ್ ಕೊಡಬೇಕು ಎನ್ನುವಂಥ ಕಾಯದೆ ಪ್ರಶ್ನೆ ಬರುತ್ತದೆ. ಈ ಎಲ್ಲ ದೃಷ್ಟಿಯಿಂದ ಭೂ ಸುಧಾರಣಾ ಕಾಯದೆಯನ್ನು ದುರಸ್ತು ಮಾಡುವುದು ಈ ಹೊತ್ತಿನ ಪರಿಸ್ಥಿತಿಯಲ್ಲಿ ಬಹಳ ಕಠಿಣವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಅಜೀಜ್ ಸೇಟ್:— ಸಣ್ಣ ಹಿಡುವಳಿದಾರರಿಗೆ ಸರ್ಕಾರದವರು ಪರಿಹಾರ ದ್ರವ್ಯವನ್ನು ಕೊಡುವುದಿಲ್ಲವೇ ? ಕೊಡುವುದಾದರೆ ಯಾವಾಗ ಕೊಡುತ್ತೀರ ? ಅವರು ಜೀವಂತರಾಗಿರುವಾಗಲೇ ಕೊಡುತ್ತೀರಾ ?

ಶ್ರೀ ಎಚ್. ವಿ ಕೌಜಲಗಿ:— ಕಾಂಪನ್ ಸೇಷನ್ ಕೊಡತಕ್ಕ ಕೆಲಸ ಇನ್ನುಮೇಲೆ ಪುರುವಾಗುತ್ತದೆ ಈಗ ನಾವು ರೆಸ್ಯೂಮಬಲ್ ಲ್ಯಾಂಡ್, ಯಾವುದು ರೆಸ್ಯೂಮಬಲ್ ಲ್ಯಾಂಡಲ್ಲ ಏಂಬುದನ್ನು ನಿರ್ಧರಿಸಲಿಕ್ಕೆ ಹತ್ತೇವೆ, ಆದಾದ ಕೂಡಲೇ ಪರಿಹಾರದ್ರವ್ಯವನ್ನು ಕೊಡಲಾಗುತ್ತದೆ.

ಇನ್ನು ರೆಕಾರ್ಡಾಫ್ ರೈಟ್ಸ್ ವಿಚಾರಕ್ಕೆ ಬಂದರೆ –ಮೊದಲು ಹಳೇ ಮೈಸೂರು ವಿಭಾಗದಲ್ಲಿ ಇದು ಇರಲಿಲ್ಲ ಮುಂಬೈನ ನಾಲ್ಕು ಜಿಲ್ಲೆಗಳಲ್ಲಿ ಮಾತ್ರವಿತ್ತು, ಇದನ್ನು ಪ್ರಪ್ರಥಮವಾಗಿ ಇಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಎಂ. ಪಿ. ಪಾಟೀಲರು ಇಂಟ್ರಡ್ಯೂಸ್ ಮಾಡಿದರು. ಕಳೆದ ವರ್ಷದಿಂದ ಇದಕ್ಕೆ ಹೆಚ್ಚಿನ ಆಟಿನ್ ಷನ್ ಕೊಡಲಾಗುತ್ತಿದೆ. ರಾಜ್ಯದ ನಾಲ್ಕನೇ ಮೂರಾಂಶ ಭಾಗದಲ್ಲಿ ಇದನ್ನು ಜಾರಿಗೆ ತರಲಾಗಿದೆ. ಉಳಿದ ಭಾಗಗಳಿಗೂ ಇದನ್ನು ಬೇಗ ಅನ್ವಯಿಸಲಾಗುತ್ತದೆ. ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ರೆಕಾರ್ಡಾಫ್ ರೈಟ್ಸ್ ಕೆಲಸ ಅಪ್‌ಟುಡೇಟಾಗಿ ನಡೆದಿದೆ. ಅಲ್ಲಿ ಬಹಳ ಚಲೋ ಕೆಲಸ

ಕಡೆದಿದೆ. ನಾನು ಹೋದ ಕಡೆಗಳಲ್ಲೆಲ್ಲಾ ರೆವಿನ್ಯೂ ಆಫೀಸರುಗಳನ್ನೂ ಮತ್ತು ವಿಲೇಜ್ ಆಫೀಸರು ಗಳನ್ನೂ ಕರೆಸಿ ಅವರಿಗೆ ಜುಲುಂ ಮಾತಿ ಲೆಕ್ಕಗಳನ್ನು ಬರೆಸಲಿಕ್ಕೆ ಹಚ್ಚಿದ್ದೇನೆ.

ಇದೇ ರೀತಿ ಸರ್ವೆ ಆಂಡ್ ಸೆಟಲ್‌ಮೆಂಟ್ ಕೆಲಸಗಳ ಕಡೆಗೂ ಹೆಚ್ಚಿನ ಗಮನ ಕೊಡಲಾಗಿದೆ. ಹಾಲಿ ನಮ್ಮಲ್ಲಿ ೫೦ರಿ ಮಂದಿ ಸರ್ವೆ ಟ್ರೈನಿಂಗನ್ನು ಪಡೆಯುತ್ತಿದ್ದಾರೆ. ನಮ್ಮಲ್ಲಿ ಯಾವ ಕಾಲದಲ್ಲೂ ಸರ್ವೆ ಕೆಲಸ ಹಿಂದೆ ಬಿದ್ದಿಲ್ಲ. ಶ್ರೀ ಜಿ. ಪಿ. ಸರ್ವೇಶ್ ಅವರು ವಿಲೇಜ್ ಅಕೌಂಟೆಂಟ್ಸ್ ಲೆಕ್ಕಗಳನ್ನು ಫ್ಯಾಬ್ರಿಕೇಟ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ೧೯೫೯ ರಿಂದಲೇ ಹಳೇ ಮೈಸೂರು ಪ್ರಾಂತ್ಯದಲ್ಲಿ ಹೊಸ ಶ್ಯಾನುಭೋಗರನ್ನು ನೇಮಕ ಮಾಡುವುದಕ್ಕೆ ಹತ್ತೇವಿ. ಇನ್ನು ಎರಡು ಮೂರು ತಿಂಗಳಲ್ಲೇ ಎಲ್ಲಕಡೆಗಳಲ್ಲೂ ಹೊಸ ಶ್ಯಾನುಭೋಗರನ್ನು ನೇಮಕ ಮಾಡಲಿರುವುದರಿಂದ ಮುಂದೆ ಇಂಥ ತೊಂದರೆಗಳು ಬರಲಿಕ್ಕಿಲ್ಲ ಮತ್ತು ಇಂಥ ಟೀಕೆಗಳಿಗೂ ಅವಕಾಶವಿರುವುದಿಲ್ಲ.

ಇನ್ನು ರಿಲೀಫ್ ಕಾಂಗಾರಿಗಳ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಕೆಲವು ಕಡೆ ರಾಜ್ಯದಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಮಳೆಯಾಗಿರುವುದಿಲ್ಲ. ಆದರೆ ಈ ವರ್ಷ ಕಳೆದ ಸಾಲಿಗಿಂತಲೂ ಉತ್ತಮ. ಅಷ್ಟೇ ಅಲ್ಲದೆ ಅಲ್ಲಲ್ಲಿ ಕೆಲವು ಪ್ಯಾಕೆಟ್‌ಗಳಲ್ಲಿ ಸರಿಯಾಗಿ ಮಳೆಯಾಗದೆ ಅಲ್ಲಿ ಬೆಳೆಯಾಗಿರುವುದಿಲ್ಲ. ನಾವು ಎಲ್ಲಾ ಕಡೆಗಳಿಂದಲೂ ಜಿಲ್ಲಾಧಿಕಾರಿಗಳಿಂದ ಪೀಕು ವರದಿಗಳನ್ನು ತರಿಸೇವು. ಅಗತ್ಯವಿರತಕ್ಕ ಕಡೆಗಳಲ್ಲಿ ರಿಲೀಫ್ ಕಾಮಗಾರಿಗಳನ್ನು ಕೈಗೊಳ್ಳುವಂತೆ ತಿಳಿಸೀವಿ. ಅಷ್ಟೇ ಅಲ್ಲದೆ ಹಿಂದಿನ ಸಾಲುಗಳಲ್ಲಿ ಕೈಗೊಳ್ಳಲಾಗಿದ್ದು ಅವು ಮುಗಿಯದೆ ಹಾಗೇ ಉಳಿದಿರತಕ್ಕ ಕಾಮಗಾರಿಗಳನ್ನೂ ಕೂಡ ಮುಗಿಸುವಂತೆ ಹಾಗೂ ಅವುಗಳಿಗೆ ಹೆಚ್ಚಿನ ಲಕ್ಷ್ಯ ಕೊಡುವಂತೆ ತಿಳಿಸೇವು. ಇನ್ನು ಎಲ್ಲೆಲ್ಲಿ ೩-೪ ವರ್ಷಗಳಿಂದ ಮಳೆ ಬೆಳೆಗಳಾಗಿಲ್ಲವೋ ಅಂಥ ಕಡೆಗಳಲ್ಲಿ ಕಂದಾಯ ಬಾಕಿಯನ್ನು ವಸೂಲ್ಮಾಡುವುದರಿಂದ ರೈತರಿಗೆ ತೊಂದರೆ ಯಾಗಲಿಕ್ಕೆ ಹತ್ತಿದೆ ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಹೇಳ್ಕಾರೆ, ಈ ವಿಚಾರದಲ್ಲಿ ನಾನು ಈಗಾಗಲೆ ಅನೇಕಾವರ್ತಿ ಇದೇ ಸಭೆಯಲ್ಲಿ ಸಾಕಷ್ಟಾವರ್ತಿ ಹೇಳೀನಿ. ನಮಗೆ ರಿಪೋರ್ಟುಗಳು ಯಾವ ಯಾವ ಕಡೆಗಳಿಂದ ಬಂದಿವೆಯೋ ಅಂಥಾ ಕಡೆಗಳಲ್ಲೆಲ್ಲಾ ಸೌಲತ್ತುಗಳನ್ನು ಕೊಟ್ಟೇವು ಆದರೆ ಕೆಲವು ವಿಭಾಗಗಳಲ್ಲಿ ಸರಿಯಾದ ಲೆಕ್ಕಗಳು ಸಿಕ್ಕಿಲ್ಲ. ಆವಾಗ್ಲೂ ಪೀಕು ಆಗದ ಕಡೆಗಳಲ್ಲೆಲ್ಲಾ ನಿಯಮಗಳ ಪ್ರಕಾರ ಸೌಲತ್ತು ಗಳನ್ನು ನೀಡುವುದಕ್ಕೆ ಆರ್ಡರನ್ನು ಮಾಡೇವು. ಈಗೀಗ ಕಾಲಕ್ರಮೇಣ ಲೆಕ್ಕಗಳು ಬರಲಿಕ್ಕೆ ಹತ್ತಿವೆ.

ಶ್ರೀ ಕೆ ಎಂ. ತಮ್ಮಯ್ಯ:—ಕಡೂರು ತಾಲ್ಲೂಕಿನಲ್ಲಿ ಕಳೆದ ನಾಲ್ಕು ವರ್ಷದಿಂದಲೂ ಮಳೆ ಬೆಳೆಗಳಿಲ್ಲ ಅಲ್ಲಿ ಕ್ಷಾಮದಿಂದ ಜನರು ನರಳುತ್ತಿದ್ದಾರೆ. ಅವರಿಗೇನು ಪರಿಹಾರ ಒದಗಿಸಿದ್ದೀರಿ ?

ಶ್ರೀ ಎಚ್. ವಿ. ಕೌಜಲಗಿ:—ನಾವು ಎಲ್ಲಾ ಡಿ. ಸಿ. ಗಳಿಗೂ ಬರೆದಿದ್ದೇವು. ಕೆಲವು ಭಾಗಗಳಲ್ಲಿ ಹೊಸ ಶ್ಯಾನುಭೋಗರುಗಳು ಬಂದಿರುವುದರಿಂದ ಲೆಕ್ಕಗಳನ್ನು ಸರಿಯಾಗಿಟ್ಟಿಲ್ಲ ಆದಾಗ್ಲೂ ಅಧಿಕಾರಿಗಳು ರೈತರ ಬಗ್ಗೆ ಸಹಾನುಭೂತಿಯಿಂದ ವರ್ತಿಸುವಂತೆ ತಿಳಿಸೇವು.

ಶ್ರೀ ಬಿ. ಪಿ. ಗಂಗಾಧರ:—ತಾವು ಸ್ಥಳೀಯ ಶಾಸನಸಭಾ ಸದಸ್ಯರನ್ನೂ ಕೂಡ ವಿಶ್ವಾಸಕ್ಕೆ ತೆಗೆದ ಕೊಂಡು ಏಕೆ ಈ ಸಮಸ್ಯೆಯನ್ನು ಬಗೆಹರಿಸಬಾರದು ?

ಶ್ರೀ ಎಚ್. ವಿ. ಕೌಜಲಗಿ:—ಆಗ ಅದು ಒಂದು ರಾಜಕೀಯವಾಗುತ್ತದೆ. ಆದ್ದರಿಂದ ತಾವು ನಮ್ಮ ಅಧಿಕಾರಿಗಳಲ್ಲಿ ವಿಶ್ವಾಸವಿಡಬೇಕು, ಆದರಿಂದ ಒಳ್ಳೆಯದಾಗುವುದು.

ಶ್ರೀ ಪಿ. ವೆಂಕಟಗಿರಿಯಪ್ಪ:—ನಮ್ಮ ಕೋಲಾರ ಜಿಲ್ಲೆಯ ವಿಚಾರ ಏನು ಮಾಡಿದ್ದೀರಿ ?

Sri H. V. Koujalgi:—As soon as the Deputy Commissioner recommends collection will be stopped. His decision is final.

ಇನ್ನು ವಾಟರ್ ರೇಟಿನ ಗದ್ದಲ ಬಂದಿದೆ. ಇದು ಮೊದಲಿದ್ದ ಹಾಗೇ ಇರಲೆಂದು ಕೆಲವು ಸದಸ್ಯರು ಹೇಳಲಿಕ್ಕೆ ಹತ್ತಾರೆ. ದೊಡ್ಡ ಪ್ರಾಜೆಕ್ಟುಗಳಿಗೆ ಬೇಕಾದರೆ ವಾಟರ್ ರೇಟನ್ನು ಹಾಕಿ, ಸಣ್ಣ ಸಣ್ಣ ಕೆರೆಗಳಿಗೆ ಮೊದಲಿದ್ದಂತೆಯೇ ಇರಲೆಂದು ಕೇಳುತ್ತಾರೆ ಕೆಲವು ಕಡೆ ಮಳೆ ಬಾರದೆ ಅಲ್ಲಿನ ಕೆರೆಗಳಿಗೇನೂ ನೀರು ಬರಲಿಲ್ಲ-ಆದರಿಂದಾಗಿ ಅಲ್ಲಿ ಯಾವ ಬೆಳೆಯೂ ಆಗಲಿಲ್ಲ ಎಂದು ಹೇಳುತ್ತಿರುವುದರಲ್ಲಿ ಸ್ವಲ್ಪ

(Sri H. V, KOUJALGI)

ಸತ್ಯಾಂಶವಿದೆ. ಅದಕ್ಕಾಗಿ ನಾವೀಗ ನಮ್ಮ ರೆವಿನ್ಯೂ ಅಧಿಕಾರಿಗಳನ್ನೂ ಮತ್ತು ಅಸಿಸ್ಟೆಂಟ್ ಇಂಜಿನಿಯರು ಗಳನ್ನೂ ಪ್ರತಿ ಹಳ್ಳಿಗೂ ಹೋಗಿ ಅಲ್ಲಿ ಹಳ್ಳಿಯ ಜನರು ಏನು ಹೇಳುತ್ತಾರೆಂಬುದನ್ನು ಕೇಳಿ ಅವರ ಹೇಳಿಕೆಗೆ ಮಾನ್ಯತೆ ಕೊಡಬೇಕೆಂದೂ ಅದನ್ನು ನಂಬಬೇಕೆಂದು ಹಾಗೂ ಅವರ ಮಾತಿನಂತೆಯೆ ಅವರಿಗೆ ಕಂದಾಯವನ್ನು ರೈಟಾಪ್ ಮಾಡುವುದಕ್ಕೆ ಶಿಫಾರ್ಸು ಮಾಡಬೇಕೆಂದೂ ತಿಳಿಸೇವು.

ಶ್ರೀ ಎನ್. ಹುಚ್ಚಮಾಸ್ತಿಗೌಡ;—ತಾವು ಸ್ಥಳದ ಅಧಿಕಾರಿಗಳಿಗೆ ಇನ್‌ಸ್ಪೆಕ್ಷನ್ ಕಳಿಸಿದ್ದೀರಿ ಎಂದು ಕೇಳಿದೆ. ಬೆಳೆ ಆಗಲಿ, ಆಗದೇ ಇರಲಿ, ನೀರು ಒದಗಿಸಲಿ, ಒದಗಿಸದೇ ಇರಲಿ, ವಾಟರ್‌ರೇಟ್ ಕೊಚ್ಚೇ ಕೊಡಬೇಕು, ವಸೂಲಿ ಮಾಡದಿದ್ದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರಿಗೆ ಸೂಚನೆ ಕಳುಹಿಸಿರುವುದು ನಿಜವೇ ?

ಶ್ರೀ ಹೆಚ್. ವಿ. ಕೌಜಲಗಿ;—ಕಾಯಿದೆ ಪ್ರಕಾರ ನೋಟೀಸ್ ತೆಗೆಯುತ್ತಾರೆ. ಅದಕ್ಕೆ ಅಪೀಲು ಪ್ರಾವಿಷನ್ ಇದೆ. ಎಷ್ಟೋ ಜನರು ಅಪೀಲು ಮಾಡಿದ್ದಾರೆ, ಎಷ್ಟೋ ಕಡೆ ಅಪೀಲು ಮಾಡಿಲ್ಲ. ಇದೇ ಹೌಸ್‌ನಿಂದ ಪಾಸ್ ಆದ ಕಾಯಿದೆ ಇದೆ. ಆ ಕಾಯಿದೆ ಒಳಗೆ ದೋಷ ಇದೆ, ರೂಲ್ಸ್‌ನೊಳಗೆ ದೋಷ ಇದೆ ಎಂದರೆ ನಾವೂ ನೀವೂ ಕೂಡಿ ಬದಲಾವಣೆ ಮಾಡೋಣ. ಒಂದು ದಿವಸದೊಳಗೆ ದುರಸ್ತು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್:—ರೂಲ್ಸ್‌ನೊಳಗೆ ದೋಷ ಇಲ್ಲ. ಆಡಳಿತದಲ್ಲಿ ದೋಷ ಇದೆ.

ಶ್ರೀ ಹೆಚ್. ವಿ. ಕೌಜಲಗಿ.—ರೂಲ್‌ನೊಳಗೆ ಕೆಲವುಮಟ್ಟಿಗೆ ದೋಷ ಇರುವುದು ಖರೆ ಇದೆ. ವಿಲೇಜ್ ಆಕೌಂಟೆಂಟ್ಸ್ ಕೆಲವು ಕಡೆ ಲೆಕ್ಕ ಇಟ್ಟಿಲ್ಲ ತೊಂದರೆ ಆಗಿದೆ. ಯಾರು ನೀರು ತೆಗೆದು ಕೊಂಡಿದ್ದಾರೆ ಅವರಿಗೆ ವಾಟರ್ ಟ್ಯಾಕ್ಸ್ ಹಾಕಿದ್ದಾರೆ, ಇಲ್ಲದಿದ್ದರೆ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಬೆಳೆ ಆಗದಿದ್ದರೆ, ನೀರು ಕೊಡದಿದ್ದರೆ ವಾಟರ್‌ರೇಟ್ ಹಾಕ-ಬೇಡಿ ಎಂದು ಕಡ್ಡಾಯವಾಗಿ ಸ್ಥಳೀಯ ಅಧಿಕಾರಿಗಳಿಗೆ ತಿಳಿಸುತ್ತೀರಾ ?

SRI H. V. KOUJALGI:—As it is, if water is made available and even if it is not taken he has to pay legally. ಮುಂದಿನ ವರ್ಷದಿಂದ ವಿಲೇಜ್ ಆಕೌಂಟೆಂಟ್ಸ್ ಬರುತ್ತಾರೆ ಲೆಕ್ಕ ಇಡುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ:—ಅಸಿಸ್ಟೆಂಟ್ ಇಂಜಿನೀಯರ್ ಸ್ಥಳಕ್ಕೆ ಹೋಗಿ, ಅಜಮಾಯಿಷಿ ಮಾಡಿ ವಸೂಲ್ ಮಾಡಿ ಎಂದು ಅಪ್ಪಣೆ ಕೊಡಿಸಿದರು. ಕಾನೂನು ಪ್ರಕಾರ ನೋಟೀಸ್ ಕೊಟ್ಟು ಅವಕಾಶ ಇದ್ದಲ್ಲಿ ಅದನ್ನು ಮಾಡುವುದನ್ನು ಬಿಟ್ಟು ಹಿಂದಿನ ಲೆಕ್ಕದಂತೆ ಆರ್ಬಿಟ್ರರಿ ಆಗಿ ವಸೂಲ್ಮಾಡುತ್ತಾ ಇರುವುದು ಕಾನೂನಿಗೆ ವ್ಯತಿರಿಕ್ತವಾಗುವುದಿಲ್ಲವೇ ;

ಶ್ರೀ ಹೆಚ್. ಸಿದ್ದವೀರಪ್ಪ:—ನೀರು ಕೊಡದೇ ಇದ್ದರೆ ವಾಟರ್ ರೇಟ್ ವಸೂಲ್ಮಾಡುವುದಿಲ್ಲ ಎಂದು ಮಂತ್ರಿಗಳ ಬಾಯಲ್ಲಿ ಹೇಳಿಸಿಬಿಡಿ.

ಶ್ರೀ ಹೆಚ್. ವಿ. ಕೌಜಲಗಿ:—ವಾಟರ್‌ರೇಟಿಗೆ ಕಾಯಿದೆ ಇದೆ. ಕಾಯಿದೆ ಬಿಟ್ಟು ಹೋಗಲಿಕ್ಕೆ ಬರುವುದಿಲ್ಲ. ಯಾರು ಯಾರು ನೀರು ತೆಗೆದುಕೊಂಡಿಲ್ಲವೋ ಅದನ್ನು ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದೇನೆ. ನೀರು ಕೊಟ್ಟಿಲ್ಲ ಎಂದರೆ ಮಾತ್ರ ಬಿಡಬೇಕಾಗುತ್ತದೆ.

ಶ್ರೀ ಆರ್. ಮುನಿಸ್ವಾಮಯ್ಯ:—ರೈತರು ಕಾಯಿದೆಗೆ ವಿರೋಧವಾಗಿ ಹೋಗುವುದಿಲ್ಲ. ಮಳೆ ಬಂದಿಲ್ಲದೇ ಇದ್ದುದರಿಂದ ಕೆರೆಗಳು ತುಂಬಿಲ್ಲ. ಆದುದರಿಂದ ನೀರು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ರೈತರಿಗೆ ಅಪೀಲು ಮಾಡಲು ಶಕ್ತಿ ಸಾಲದೆ ಅಪೀಲು ಮಾಡಿಲ್ಲ. ಆದ್ದರಿಂದ ರೈತರಿಗೆ ಅಪೀಲು ಮಾಡುವುದಕ್ಕೆ ಕಾಲ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ:—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ನೀರನ್ನು ಉಪಯೋಗಿಸಿಕೊಂಡಿದ್ದರೂ ತೆರಿಗೆ ನೋಟೀಸ್ ಬಂದಿದೆ. ಅವರ ವಿಚಾರ ಹೇಳಬೇಕು.

ಶ್ರೀ ಹೆಚ್. ಕೌಜಲಗಿ:—ಇಷ್ಟು ಮಾತ್ರ ಹೇಳುತ್ತೇನೆ. The whole thing is in a confusion ಅಪೀಲು ಮಾಡದಿದ್ದರೂ ಅಸಿಸ್ಟೆಂಟ್ ಕಮೀಷನರ್, ಅಸಿಸ್ಟೆಂಟ್ ಇಂಜನೀಯರ್ ಹತ್ತಿರ ಹೋದರೆ ಅವರು ಚೌಕಾಸಿ ಮಾಡುತ್ತಾರೆ ಎಂದು ಹೇಳಿದ್ದೇನೆ.

SRI D. DEVARAJ URS:—The people are being harassed or coerced at the taluk level to pay whatever is in arrears and so our request to you is to ask your local officers not to harass them. Wherever water has not been let out or crops have failed, let them go to the spot and make an inspection. Let them not sit in their office and write some report saying whether water is given or not. Let them make a spot inspection and after a panchnama decide whether to remit or not.

ಶ್ರೀ ಎಚ್. ವಿ. ಕೌಜಲಗಿ:—ಮಾನ್ಯ ಸದಸ್ಯರು why not your officersgo from place to place ಎಂದು ಕೇಳಿದರು. I have already adopted this measure. ಅಪೀಲು ಮಾಡಲಿ, ಮಾಡದೇ ಇರಲಿ ಹರಾಸ್ ಮಾಡಬೇಕು ಎನ್ನುವ ಉದ್ದೇಶವಿಲ್ಲ.

ಶ್ರೀ ಎಸ್. ಶಿವಪ್ಪ:—ಅಧಿಕಾರಿಗಳು ಹೇಳುತ್ತಾರೆ. ವಿಲೇಜ್ ಆಕೌಂಟೆಂಟ್ಸ್ ಇಲ್ಲದ್ದರಿಂದ ಲೆಕ್ಕ ಇಡುವುದು ಎಲ್ಲಿಂದ ಬಂತು ಎಂದು. There are no shanubhogues. ೩ ವರ್ಷದಿಂದ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಬಂದಿದೆ ಅಲ್ಲೆಲ್ಲಾ ವಜಾ ಮಾಡುತ್ತೇವೆ ಎಂದು ಹೇಳಿ.

ಶ್ರೀ ಎಚ್. ವಿ. ಕೌಜಲಗಿ:—ಎಲ್ಲೆಲ್ಲಿ ನೀರು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೋ ಅಲ್ಲಿ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್:—ಶಿವಮೊಗ್ಗ ಜೋನ್‌ನಲ್ಲಿ ೧೧೪ (ಎ) ಪ್ರಕಾರ ರಿವಿಷನ್ ಆಗಬೇಕು ಎಂದು ಆರ್ಡರ್ ಮಾಡಿದ್ದೀರಿ. ಹಳೆಯ ಸೆಟಲ್‌ಮೆಂಟ್ ಪ್ರಕಾರ ವಿಧಿಸಬೇಕಾದಂಥ ಕಂದಾಯದಲ್ಲಿ ನೀರಿನ ದರ ಪ್ರತ್ಯೇಕವಾಗಿಲ್ಲ. ಹಾಗಿರುವ ಸಂದರ್ಭದಲ್ಲಿ ಅಧಿಕಾರಿಗಳು ೪-೫ ವರ್ಷಗಳ ನೀರಿನ ದರವನ್ನು ಮೊತ್ತ ಮಾಡಿ ಜನಗಳಿಗೆ ನೋಟೀಸ್ ಕೊಟ್ಟಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಾರಂಭ ಮಾಡುತ್ತಿದ್ದಾರೆ. ಇದನ್ನು ದಯವಿಟ್ಟು ನಿಲ್ಲಿಸುವುದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ:—Wherever the zones are reopened legally we will have to recover the old rates ಎಂದು ಮಾಡಿದೆ. ಮಾನ್ಯ ಸದಸ್ಯರು ಇನ್ನೂ ಅನೇಕ ಸಣ್ಣ ಸಣ್ಣ ಕಟ್‌ಮೋಷನ್‌ಗಳನ್ನು ಕಳುಹಿಸಿದ್ದಾರೆ. ಅದನ್ನು ಯಾವತ್ತೂ ಲಕ್ಷ್ಯದಲ್ಲಿಟ್ಟುಕೊಂಡು ನಾನು ಮುಂದಿನ ಸಾರಿ ಹೆಚ್ಚು ಹೆಚ್ಚು ನಿಗಾ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

SRI B. L. NARAYANASWAMY:—Sir, I move that the time be extended by half an hour. The Hon. Minister who is replying requires some more time and we also require some time for clarifications. I therefore request the Chair to extend the time by half an hour.

MR. SPEAKER:—I am not going to do it. I will put the Demand to vote the question is:—

"That the respective sums not exceeding the sums mentioned in Demands Nos. 2, 7, 8, 33 and 43 be granted to the

(Mr. SPEAKER)

Government to defray the charges which will come in course of payment during the financial year for the period ending 31st March 1971".

The motion was adopted.

As directed by the chair the motion for Demand for grants adopted by the House are reproduced below:—

DEMAND NO. 2.—LAND REVENUE.

9. Land Revenue.

"That a sum not exceeding Rs. 5,16,26,000 be granted to the Government to defray the charges which will come in course of payment during the financial year for the period ending 31st day of March 1971, in respect of 'Land Revenue'."

DEMAND NO. 7.—STAMPS.

14. Stamps.

"That a sum not exceeding Rs. 15,40,000 be granted to the Government to defray the charges which will come in course of payment during the financial year for the period ending 31st day of March 1971, in respect of 'Stamps'.".

DEMAND NO. 8.—REGISTRATION.

15. Registration Fees.

"That a sum not exceeding Rs. 32,95,000 be granted to the Government to defray the charges which will come in course of payment during the financial year for the period ending 31st day of March 1971, in respect of 'Registration Fees'.".

DEMAND NO. 33.—FAMINE.

64. Famine Relief.

"That a sum not exceeding 1.42,85,000 be granted to the Government to defray the charges which will come in course of payment during the financial year for the period ending 31st day of March 1971, in respect of 'Famine Relief'.".

DEMAND NO. 42.—COMPENSATION TO ZAMINDARS.

92. Payment of Compensation to Land-holders, etc., on the Abolition of Zamindari System.

"That a sum not exceeding Rs. 32,60,000 be granted to the Government to defray the charges which will come in course of payment during the financial year for the period ending 31st day of March 1971, in respect of 'Payment of Compensation to Land-holders, etc., on the Abolition of Zamindari System'.

MR. SPEAKER:—The House will now adjourn to meet at 1 p.m. on Friday the 20th March 1970.

The House adjourned at Six of the clock to meet again at One of the clock on Friday the 20th March 1970.

WD 14727—GPB—550—29-8-1970